ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 8 ಶನಿವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 200 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಮಿತ್ರ

ನಾಳೆ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಘಟಿಕೋತ್ಸವ

ಮೈಸೂರು,ನ.7(ಎಂಟಿವೈ)– ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 16ನೇ ಘಟಿಕೋತ್ಸವ ನ.9ರಂದು ಮಧ್ಯಾಹ್ನ 1.25ಕ್ಕೆ ಶಿವರಾತ್ರೀಶ್ವರ ನಗರದಲ್ಲಿರುವ ಸಂಸ್ಥೆಯ ಸಭಾಂಗಣದಲ್ಲಿ ನಡೆಯಲಿದ್ದು, 2925 ವಿದ್ಯಾರ್ಥಿಗಳು ವಿವಿಧ ಪದವಿ ಪಡೆದುಕೊಳ್ಳಲಿದ್ದಾರೆ ಎಂದು ಕುಲಪತಿ ಡಾ.ಹೆಚ್.ಬಸವನಗೌಡಪ್ಪ ತಿಳಿಸಿದ್ದಾರೆ.


ಅಕಾಡೆಮಿಯ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಘಟಿಕೋತ್ಸವ ನಡೆಯಲಿದೆ. ನ.9ರಂದು ಮಧ್ಯಾಹ್ನ 1.25ಕ್ಕೆ ಆರಂಭವಾಗುವ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಘಟಿಕೋತ್ಸವ ಭಾಷಣ ಮಾಡಿ, ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ ಪದವಿ ವಿತರಿಸುವರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ವಿವಿಯ ಸಮಕುಲಾಧಿಪತಿ ಡಾ.ಬಿ. ಸುರೇಶ್, ಕುಲಸಚಿವ ಡಾ.ಬಿ.ಮಂಜುನಾಥ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಆರ್. ಸುಧೀಂದ್ರ ಭಟ್, ಸೇರಿದಂತೆ ಹಲವರು ಉಪಸ್ಥಿತರಿರುವರು ಎಂದು ತಿಳಿಸಿದರು.

ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರಿಂದ ಘಟಿಕೋತ್ಸವ ಭಾಷಣ



ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಮಕುಲಾಧಿಪತಿ ಡಾ.ಬಿ.ಸುರೇಶ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

2925 ವಿದ್ಯಾರ್ಥಿಗಳಿಗೆ ಪದವಿ: ವಿವಿಧ ವಿಷಯಗಳಲ್ಲಿ 1187 ಪುರುಷರು, 1738 ಮಹಿಳಾ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 2925 ವಿದ್ಯಾರ್ಥಿಗಳು ವಿವಿಧ ಪದವಿ ಸ್ವೀಕರಿಸುವರು. 80 ವಿದ್ಯಾರ್ಥಿಗಳಿಗೆ ಪಿಎಚ್‌ಡಿ, 68 ವಿದ್ಯಾರ್ಥಿಗಳಿಗೆ 100 ಚಿನ್ನದ ಪದಕ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.



ಸಿ.ಪಿ.ರಾಧಾಕೃಷ್ಣನ್

ಶೈಕ್ಷಣಿಕ ಸಾಧನೆ: ಜೆಎಸ್‌ಎಸ್ ಎ ಹೆಚ್‌ಎಇಆರ್ ಶೈಕ್ಷಣಿಕ ಮತ್ತು ಸಂಶೋಧನಾ ವಲಯದಲ್ಲಿ ಉತ್ತಮ ಸಾಧನೆಗೆ ನ್ಯಾಕ್ ಎ+ ಗ್ರೇಡ್‌ನೊಂದಿಗೆ ಮಾನ್ಯತೆ ಪಡೆದಿದ್ದು, ಭಾರತದ ಅತ್ಯುತ್ತಮ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಎನ್‌ಐಆರ್‌ಎಫ್ 2025 ಶ್ರೇಯಾಂಕದಲ್ಲಿ 24ನೇ ಸ್ಥಾನ ಪಡೆದುಕೊಂಡಿದ್ದು, ಭಾರತೀಯ ವಿವಿಗಳಲ್ಲಿ 21ನೇ ಸ್ಥಾನದಲ್ಲಿದೆ. ಜಾಗತಿಕವಾಗಿ ದ ಇಂಪ್ಯಾಕ್ಟ್ ಶ್ರೇಯಾಂಕದಲ್ಲಿ 56ನೇ ಸ್ಥಾನ ಪಡೆಯುವ ಮೂಲಕ ಅಗ್ರ 100ರೊಳಗೆ ಸ್ಥಾನ ಪಡೆದ ಹೆಗ್ಗಳಿಕೆ ಹೊಂದಿದೆ ಎಂದು ಹೇಳಿದರು.

23 ಕೋರ್ಸ್ ಪರಿಚಯ: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಮಕುಲಾಧಿಪತಿ ಡಾ.ಬಿ. ಸುರೇಶ್ ಮಾತನಾಡಿ, ಜೆಎಸ್‌ಎಸ್ ಎಹೆಚ್ ಎಆರ್‌ನಲ್ಲಿ ಪ್ರಸ್ತುತ 9000ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದು, 800 ಅಧ್ಯಾಪಕರು, 600 ಬೋಧಕೇತರ ಸಿಬ್ಬಂದಿ ಇದ್ದಾರೆ. 2024–25ರಲ್ಲಿ ವಿವಿಧ ವಿಭಾಗಗಳಿಂದ 23 ಹೊಸ ಕೋರ್ಸ್ ಗಳನ್ನು ಪರಿಚಯಿಸಲಾಗಿದ್ದು, 2 ಪದವಿ ಕೋರ್ಸ್, 14 ಸ್ನಾತಕೋತ್ತರ ಕೋರ್ಸ್, 4 ಫೆಲೋಶಿಪ್, ಕೃತಕ ಬುದ್ಧಿಮತ್ತೆ ಮತ್ತು ದತ್ತಾಂಶ ವಿಜ್ಞಾನ, ಆರೋಗ್ಯ ಅರ್ಥಶಾಸ್ತ್ರ, ಏರೋ–ವೈದ್ಯಕೀಯ ವಿಜ್ಞಾನಗಳು ಮತ್ತು ಹೃದ್ರೋಗ ಔಷಧ ಶಾಸ್ತ್ರದಂತಹ ಅತ್ಯಾಧುನಿಕ ಕ್ಷೇತ್ರಗಳನ್ನು ಒಳಗೊಂಡ 3 ರೆಸಿಡೆನ್ಸಿ ಕೋರ್ಸ್‌ಗಳು ಸೇರಿವೆ. ಈ ಮೂಲಕ ಕೋರ್ಸ್‌ಗಳ ಜೆಎಸ್‌ಎಸ್ ಎಹೆಚ್‌ಇಎಆರ್‌ನಲ್ಲಿನ ಕೋರ್ಸ್‌ಗಳ ಸಂಖ್ಯೆ 193ಕ್ಕೆ ಏರಿಕೆ ಯಾಗಿದೆ ಎಂದು ತಿಳಿಸಿದರು.

53.65 ಕೋಟಿ ಅನುದಾನ: ಸಂಶೋಧನಾ ಶ್ರೇಷ್ಠತೆಯಲ್ಲಿ ವಿಶ್ವವಿದ್ಯಾನಿಲಯ 2024–25ರಲ್ಲಿ ವಿವಿಧ ಸರ್ಕಾರಿ ಹಣಕಾಸು ಸಂಸ್ಥೆಗಳಿಂದ 53.65 ಕೋಟಿ ಅನುದಾನ ಪಡೆದಿದ್ದು, 133 ಸಂಶೋಧನಾ ಯೋಜನೆಗಳನ್ನು ಮಂಜೂರು ಮಾಡುವುದರ ಜತೆಗೆ, ಪ್ರಕಟಣೆಗಳು ಮತ್ತು ಪೇಟೆಂಟ್‌ಗಳಿಗೆ ಗಮನಾರ್ಹ ಕೊಡುಗೆ ನೀಡಿದೆ. ಇದುವರೆಗೆ 15,181 ಪ್ರಕಟಣೆಗಳನ್ನು ಹೊರಡಿಸಿದ್ದು, 2025ರಲ್ಲಿ ಜನವರಿಯಿಂದ ಸೆಪ್ಟೆಂಬರ್‌ವರೆಗೆ 1000ಕ್ಕೂ ಹೆಚ್ಚು ಪ್ರಕಟಣೆಗಳನ್ನು ಹೊರ ತಂದಿದೆ. ಜಾಗತಿಕವಾಗಿ 165 ಸಹಯೋಗಗಳನ್ನು ಹೊಂದಿದ್ದು, ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟ ಹೆಜ್ಜೆ ಗುರುತು ಮೂಡಿಸಿದೆ ಎಂದರು.

ವರುಣಾ ಬಳಿ ನಿರ್ಮಾಣವಾಗುತ್ತಿರುವ ಕ್ಯಾಂಪಸ್ ಅತ್ಯಾಧುನಿಕವಾಗಿದೆ. ಭಾರತೀಯ ಜ್ಞಾನ ವ್ಯವಸ್ಥೆ ವಿಭಾಗ, ಜಾಗತಿಕ ಕಾನೂನು ವಿದ್ಯಾಲಯ, ನರ್ಸಿಂಗ್ ಕಾಲೇಜು ನೂತನ ಕ್ಯಾಂಪಸ್‌ನಲ್ಲಿ ಇರಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಕುಲಾಧಿಪತಿ ಡಾ.ಬಿ.ಸುರೇಶ್, ಕುಲಸಚಿವ ಡಾ.ಬಿ. ಮಂಜುನಾಥ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಆರ್.ಸುಧೀಂದ್ರ ಭಟ್, ವಿವಿಧ ವಿಭಾಗಗಳ ಡೀನ್‌ಗಳಾದ ಡಾ.ಹೆಚ್.ಕೆ. ಮಮತಾ, ಡಾ.ವಿಶಾಲ ಕುಮಾರ್ ಗುಪ್ತ, ಡಾ.ರವೀಶ್, ಡಾ. ದಾಕ್ಷಾಯಿಣಿ, ಪ್ರೊ. ರವೀಶ್, ಪ್ರಾಂಶುಪಾಲ ಪ್ರೊ.ಡಿ. ನಾರಾಯಣಪ್ಪ ಇದ್ದರು.

ಇಂದು, ನಾಳೆ ಕೆಜಿ ಕೊಪ್ಪಲು ಶ್ರೀ ಸಿದ್ದಪ್ಪಾಜಿ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಕುಂಭಾಭಿಷೇಕ



ಮೈಸೂರು, ನ.7(ಎಸ್‌ಪಿಎನ್)–ಕನ್ನೇಗೌಡ(ಕೆಜಿ)ನ ಕೊಪ್ಪಲಿನ ಶ್ರೀ ಮಹಾಗಣಪತಿ, ಶ್ರೀ ಸಿದ್ದಪ್ಪಾಜಿ ಹಾಗೂ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ 15ನೇ ಕುಂಭಾಭಿಷೇಕ ಮಹೋತ್ಸವದ ಅಂಗವಾಗಿ ನ.8 ಮತ್ತು 9 ರಂದು ವಿವಿಧ ಧಾರ್ಮಿಕ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ನ.8ರಂದು ಗಣಹೋಮ, ನವಗ್ರಹ ಪೂಜೆ, ಮೃತ್ಯುಂಜಯ ಹೋಮ ಸೇರಿದಂತೆ ಇತರೆ ಧಾರ್ಮಿಕ ಕಾರ್ಯಗಳು ಹಾಗೂ ನ.9ರಂದು ಬೆಳಗ್ಗೆ 9.30ಕ್ಕೆ ಪ್ರಧಾನ ಹೋಮದ ಪೂರ್ಣಾಹುತಿ ಮತ್ತು 10.30ಕ್ಕೆ ಕುಂಭಾಭಿಷೇಕ ಹಾಗೂ 12.30ಕ್ಕೆ ತೀರ್ಥ ಪ್ರಸಾದ ವಿನಿಯೋಗ ಹಾಗೂ ಅನ್ನಸಂತರ್ಪಣೆ ನಡೆಯಲಿದೆ ಎಂದು ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ನಿವೃತ್ತ ಪ್ರಾಧ್ಯಾಪಕ ಎಂ.ಮಲ್ಲಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಶಾಸಕ ಕೆ.ಹರೀಶ್‌ಗೌಡ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್‌ಗಳಾದ ಎಂ.ಶಿವಕುಮಾರ್, ಆರ್.ಲಿಂಗಪ್ಪ, ನಗರ ಪಾಲಿಕೆ ಮಾಜಿ ಸದಸ್ಯ ಚನ್ನಪ್ಪ, ನಿಂಗಣ್ಣ, ಕೆಂಪಣ್ಣ ಹಾಗೂ ಲಕ್ಷ್ಮೀನಾರಾಯಣಗೌಡ ಉಪಸ್ಥಿತರಿರುತ್ತಾರೆ ಎಂದು ತಿಳಿಸಿದ್ದಾರೆ.

ಮೈಸೂರಲ್ಲಿ ಇಂದಿನಿಂದ 2 ದಿನ ಬಾಳೆ ಮೇಳ





ಮೈಸೂರು, ನ.7(ಎಂಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ, ಕೃಷಿಕರ ಬಳಗ, ಕೀಸ್ಟೋನ್ ಫೌಂಡೇಷನ್ ಮತ್ತು ಯೂನಿಯಂಗ್ ಡೈವರ್ಸಿಟಿ ವತಿಯಿಂದ ನಾಳೆ(ನ.8) ಯಿಂದ ಎರಡು ದಿನಗಳ 'ಬಾಳೆ ಮೇಳ' ಆಯೋಜಿಸಲಾಗಿದೆ.

ಮೇಳದಲ್ಲಿ ನೂರಕ್ಕೂ ಹೆಚ್ಚು ಬಾಳೆ ತಳಿಗಳು ಪ್ರದರ್ಶನ ಮತ್ತು ಮಾರಾಟ ಇರಲಿದ್ದು, ಇಂಡೋನೇಷ್ಯಾ ಮತ್ತು ಥಾಯ್‌ಲ್ಯಾಂಡ್‌ನ ಅಪರೂಪದ ಬಾಳೆ ತಳಿ, ಇಡೀ ಗಿಡವೇ ಕೆಂಪಾಗಿರುವ 'ಕೆಂಪು ಬಾಳೆ', ರಂಗು ರಂಗಿನ ಹಳದಿ ಎಲೆಗಳ 'ಏಸ್ ಕ್ರೀಂ ಬಾಳೆ', ಕೆ' ಡ 'ಗಿ ನ' 'ಫಿಂಗರ್ ಬಾಳೆ', 'ಮಂದ'ರಂಗಿ', 'ಚಂದ್ರ ಬಾಳೆ' ಪ್ರಮುಖ ಆಕರ್ಷಣೆಯಾಗಿದೆ. 45 ಮಳಿಗೆಗಳಲ್ಲಿ ಬಾಳೆ ಹಣ್ಣು, ಬಾಳೆ ಕಂದು, ಮತ್ತು ಬಾಳೆಯ ಮೌಲ್ಯವರ್ಧಿತ ಪದಾರ್ಥಗಳ ಮಾರಾಟ ಇರಲಿದ್ದು, ಗುಣಮಟ್ಟದ ನಂಜನಗೂಡು ರಸಬಾಳೆ, ಏಲಕ್ಕಿ, ಚಂದ್ರ ಬಾಳೆ, ನೇಂದ್ರ, ಪೂವನ್, ನಮಸ್ಕೆ ಬಾಳೆ, ಸಕ್ಕರೆ ಬಾಳೆ ಗೆಡ್ಡೆ ಮತ್ತು ಸಸಿಗಳನ್ನು ಖರೀದಿಸಬಹುದಾಗಿದೆ. ಜೊತೆಗೆ ನ.9 ರಂದು ಬಾಳೆ ಆಹಾರ ಸ್ಪರ್ಧೆ, 5 ರಿಂದ 12 ವರ್ಷದೊಳಗಿನ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಿದ್ದು, ಆಸಕ್ತರು ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಮೊ.ಸಂ.–90086 03222 ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

'ವಂದೇ ಮಾತರಂ' ಗೀತೆಗೆ 150 ವರ್ಷ: ಬಿಜೆಪಿ ಕಚೇರಿಯಲ್ಲಿ ಸಂಭ್ರಮಾಚರಣೆ



'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ ಹಿನ್ನೆಲೆ ಮೈಸೂರಿನ ಬಿಜೆಪಿ ಕಚೇರಿ ಎದುರು ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಲಾಯಿತು.

ಮೈಸೂರು, ನ.7(ಎಂಕೆ)– 'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ ಹಿನ್ನಲೆ ಮೈಸೂರಿನ ಬಿಜೆಪಿ ಕಚೇರಿ ಎದುರು ಶುಕ್ರವಾರ ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಲಾಯಿತು.


ಪಂಡಿತ್ ಬಂಕಿಮ ಚಂದ್ರ ಚಟರ್ಜಿ ಅವರು ರಚಿಸಿರುವ ಗೀತೆಯನ್ನು ಸಾಮೂಹಿಕವಾಗಿ ಹಾಡುವ ಮೂಲಕ ಆರಂಭವಾದ ಸಂಭ್ರಮಾಚರಣೆಯಲ್ಲಿ 'ವಂದೇ ಮಾತರಂ' ಘೋಷಣೆ ಮೊಳಗಿಸಲಾಯಿತು.

ಬಳಿಕ ಮಾತನಾಡಿದ ಸಂಸದ ಯದುವೀರ್, 150 ವರ್ಷಗಳ ಹಿಂದೆ ರಚನೆಯಾದ 'ವಂದೇ ಮಾತರಂ' ಗೀತೆ ಸ್ವಾತಂತ್ರ್ಯ ಹೋರಾಟಗಾರರಿಗೆ ಶಕ್ತಿ ನೀಡುವ ಪ್ರೇರಣಾ ಗೀತೆಯಾಗಿತ್ತು. ತಾಯಿ ಭಾರತ ಮಾತೆಗೆ ಗೌರವ ಸೂಚಿಸುವ ಈ ಗೀತೆ ಭಾರತೀಯರ ಮನದಲ್ಲಿ ಶಾಶ್ವತವಾಗಿ ನೆಲೆಯೂರಿದೆ ಎಂದರು.

'ವಂದೇ ಮಾತರಂ' ಗೀತೆಯಲ್ಲಿನ ತತ್ವದೊಂದಿಗೆ ವಿಕಸಿತ ಭಾರತ ನಿರ್ಮಾಣಕ್ಕೆ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಿದೆ. ಪ್ರತೀ ನಿತ್ಯವೂ ವಂದೇ ಮಾತರಂ ಗೀತೆಯನ್ನು ಹಾಡುತ್ತಾ ಪ್ರೇರಣೆ ಪಡೆದುಕೊಳ್ಳಬೇಕಿದೆ ಎಂದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕರಾದ ಎಲ್.ನಾಗೇಂದ್ರ ಹರ್ಷವರ್ಧನ್, ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಮಹಾಲಿಂಗೇಶ್ವರ ದೇವಾಲಯದಲ್ಲಿ ಗಂಗರ ಕಾಲದ ಶಾಸನ ಪತ್ತೆ





ಮೈಸೂರು, ನ.7(ಎಂಕೆ)– ಮೈಸೂರಿನ ಹೊರವಲಯದಲ್ಲಿರುವ ಸರ್ದಾರ್ ವಲ್ಲಭಬಾಯ್ ಪಟೇಲ್‌ನಗರದ ಮಹಾಲಿಂಗೇಶ್ವರ ದೇವಾಲಯದಲ್ಲಿ 10ನೇ ಶತಮಾನದ ಗಂಗರ ಕಾಲದ ಅಪ್ರಕಟಿತ ಶಾಸನ ಪತ್ತೆಯಾಗಿದೆ.

ಗಂಗರ ದೊರೆ ಇಮ್ಮಡಿ ಬೂತುಗನ ಕಾಲದ ಶಾಸನ ಇದಾಗಿದ್ದು, ಎರಡೂವರೆ ಅಡಿಗಳಷ್ಟು ಎತ್ತರವಾದ 'ಬಿಳಿಕಣಶಿಲೆಯಲ್ಲಿ' ಕೆತ್ತಲ್ಪಟ್ಟಿದ್ದು ಆರು ಸಾಲುಗಳನ್ನು ಹೊಂದಿದೆ. ಸರಿ ಸುಮಾರು 1,076 ವರ್ಷಗಳಷ್ಟು ಪ್ರಾಚೀನವಾದ 'ಕನ್ನಡ ಭಾಷೆ ಮತ್ತು ಲಿಪಿ'ಯಲ್ಲಿ ಬರೆಯಲ್ಪಟ್ಟಿರುವ ಶಾಸನವಾಗಿದೆ ಎಂದು ಪುರಾತತ್ವ ತಜ್ಞರು ತಿಳಿಸಿದ್ದಾರೆ. ಪುರಾತತ್ವಜ್ಞ ಪ್ರೊ. ಎನ್.ಎಸ್. ರಂಗರಾಜು ಅವರಿಗೆ ನಿವೃತ್ತ ಡಿಸಿಪಿ ಶಿವಣ್ಣ ಅವರು ನೀಡಿದ ಮಾಹಿತಿ ಮೇರೆಗೆ ಪುರಾತತ್ವ ಸಂಶೋಧಕ ಸಿ.ಎ.ಶಶಿಧರ, ಕ್ಷೇತ್ರ ಕಾರ್ಯಾನ್ವೇಷಣೆ ನಡೆಸಿ ಈ ಪ್ರಾಚೀನವಾದ ಗಂಗರ ಕಾಲದ ಶಾಸನವನ್ನು ಕಂಡು ಹಿಡಿದಿದ್ದಾರೆ.

ನಂತರ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಅನುಮತಿಯೊಂದಿಗೆ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ. ತಳವಾರ್ ನೇತೃತ್ವದಲ್ಲಿ ಪುರಾತತ್ವ ಸಂಶೋಧಕ ಡಾ.ಸಿ.ಎ.ಶಶಿಧರ, ಕಿರಿಯ ಸಂಶೋಧಕ ಡಾ.ಆರ್.ಮರಿಸ್ವಾಮಿ, ಛಾಯಾಗ್ರಾಹಕ ರಮೇಶ್ ಪಟೇಲ್ ಸಹಕಾರದೊಂದಿಗೆ ಶಾಸನದ ಪಡಿಯಚ್ಚನ್ನು ತೆಗೆದುಕೊಳ್ಳಲಾಗಿದೆ.

ಸಂಗೀತ, ನೃತ್ಯ ಶಿಕ್ಷಕರಿಗೆ ಆಹ್ವಾನ

ಮೈಸೂರು, ನ. 7– ಶಾಸ್ತ್ರೀಯ ಸಂಗೀತ–ನೃತ್ಯ ಕಲೆಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಆಸಕ್ತಿ ಮೂಡಿಸುವ ಉದ್ದೇಶದಿಂದ ಮೈಸೂರಿನಲ್ಲಿರುವ ಜೆಎಸ್‌ಎಸ್ ಶಾಲಾ–ಕಾಲೇಜುಗಳಲ್ಲಿ ಸಂಜೆಯ ವೇಳೆ ನೃತ್ಯ, ಸಂಗೀತ ಮತ್ತು ತಾಳವಾದ್ಯ ತರಗತಿಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಸಂಜೆ 5 ಗಂಟೆಯ ನಂತರ ಈ ತರಗತಿಗಳನ್ನು ನಡೆಸಲು ಪರಿಣಿತ ನೃತ್ಯ, ಸಂಗೀತ ಹಾಗೂ ತಾಳವಾದ್ಯಗಳ ಶಿಕ್ಷಕರ ಅಗತ್ಯವಿದೆ. ಈ ತರಗತಿಗಳನ್ನು ಕಲಾ ಸಂಸ್ಥೆಗಳವರೂ ನಡೆಸಲು ಅವಕಾಶ ಕಲ್ಪಿಸಲಾಗುವುದು. ಆಸಕ್ತ ಕಲಾವಿದರು ನ.11ರ ಒಳಗಾಗಿ ಅವರ ಹೆಸರು, ಕಲಾಪ್ರಕಾರ, ಪರಿಣಿತಿ ಇತ್ಯಾದಿ ವಿವರಗಳನ್ನೊಳಗೊಂಡ ಅರ್ಜಿಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಆವರಣದಲ್ಲಿರುವ ಜೆಎಸ್‌ಎಸ್ ಸಂಗೀತ ಸಭಾದ ಕಚೇರಿಗೆ ನೀಡಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಂಗೀತ ಸಭಾದ ಟಿ.ಪಿ. ಪ್ರಭುಸ್ವಾಮಿಯವರನ್ನು 9686677500 ಈ ಮೊಬೈಲ್‌ನಲ್ಲಿ ಸಂಪರ್ಕಿಸಬಹುದಾಗಿದೆ.

ಹುಟ್ಟುಹಬ್ಬದ ಶುಭಾಶಯ...

ಚಲನಚಿತ್ರ ನಿರ್ಮಾಪಕರೂ ಆದ ಯುವ ಉದ್ಯಮಿ ಎನ್. ಸಂದೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ಅವರನ್ನು ತಂದೆ ಸಂದೇಶ್ ನಾಗರಾಜ್ ಅವರೊಟ್ಟಿಗೆ ನಗರ ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ ನೇತೃತ್ವದಲ್ಲಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸ್ವರಣ್, ನಾಗೇಶ್ ನಾಯಕ, ಸೋಮಣ್ಣ, ಮಂಜು, ರಂಗಸ್ವಾಮಿ, ಸಚಿನ್, ಶೇಖರ್, ಕೃಷ್ಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.11.2025 ಶನಿವಾರ, ಮಳೆ ನಕ್ಷತ್ರ: ವಿಶಾಖ 6.11.2025 ರಿಂದ 19.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಗಿರಿ ಚಂದ್ರಶೇಖರ್ ಮತ್ತು ಕಶ್ಯಪ್ :** ರೆಕ್ಕೆ–ಪುಕ್ಕ ಭಾರತದ ಪಕ್ಷಿ ಪಿತಾಮಹ ಡಾ. ಸಲೀಂ ಅಲಿ ಅವರ ನೆನಪಿನಲ್ಲಿ ಹಿಮಾಲಯದ ಪಕ್ಷಿಗಳ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ : ಸಿ.ಆರ್. ಹನುಮಂತು, ಶ್ರೀಮತಿ ವೈಶಾಲಿ ಹನುಮಂತು, ಪರಮೇಶ್, ಸ್ಥಳ: ಲಿಂಗಾಂಬುಧಿ ಕೆರೆ ಉದ್ಯಾನವನ, ರಾಮಕೃಷ್ಣನಗರ, ಬೆಳಗ್ಗೆ 7.30ಕ್ಕೆ.

■ **ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ :** ಶ್ರೀ ಭಕ್ತ ಕನಕದಾಸರ 538ನೇ ಜಯಂತ್ಯೋತ್ಸವ, ಬೆಳಗ್ಗೆ 9.30ಕ್ಕೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಶ್ರೀ ಭಕ್ತ ಕನಕದಾಸರ ಪ್ರತಿಮೆ ಮೆರವಣಿಗೆ, ಸಾನ್ನಿಧ್ಯ : ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ವಿಧಾನ ಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ. ಯತೀಂದ್ರ ಸಿದ್ದರಾಮಯ್ಯ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಡಿ. ರವಿಶಂಕರ್, ತನ್ವೀರ್ ಸೇಠ್, ಕೆ. ಹರೀಶ್‌ಗೌಡ, ಜಿ.ಟಿ. ದೇವೇಗೌಡ, ಶ್ರೀವತ್ಸ, ಡಾ. ತಿಮ್ಮಯ್ಯ, ಶಿವಕುಮಾರ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮಧ್ಯಾಹ್ನ 12.30ಕ್ಕೆ ಸಭಾ ಕಾರ್ಯಕ್ರಮ, ಸ್ಥಳ: ಕಲಾಮಂದಿರ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಗರ್ಭ ಸಂಸ್ಕಾರ, ಒಣ ಕಣ್ಣಿನ ಆರೋಗ್ಯ ಶಿಬಿರ ಮತ್ತು ತಪಾಸಣೆ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ಸುಯೋಗ್ ಆಸ್ಪತ್ರೆ :** ಉಚಿತ ಹೃದ್ರೋಗ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಅಮೃತ ವಿಶ್ವವಿದ್ಯಾಪೀಠಂ :** ಫೋಟೋಗ್ರಫಿ ಮತ್ತು ಫಿಲಂ ಮೇಕಿಂಗ್ ಕ್ಯಾಮ್–ಎರಾ ಕುರಿತು ಕಾರ್ಯಾಗಾರ, ಉಪಸ್ಥಿತರು : ಸೂರಜ್ ಶಂಕರ್, ಜಿಷ್ಣು ಎಸ್. ಮೆನನ್, ಸ್ಥಳ: ಅಮೃತ ವಿಶ್ವವಿದ್ಯಾಪೀಠಂ ಆವರಣ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಗಾನಕಲಾ ಪರಿಷತ್, ಗಾನಭಾರತೀ :** 54ನೇ ಹಿರಿಯ ಸಂಗೀತ ವಿದ್ವಾಂಸರ ಹಾಗೂ 36ನೇ ಯುವ ಸಂಗೀತ ವಿದ್ವಾಂಸರ ರಾಜ್ಯ ಸಂಗೀತ ಸಮ್ಮೇಳನ, ಹಿರಿಯ ಸಂಗೀತ ವಿದ್ವಾಂಸರ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಡಾ.ಸಿ.ಎ. ಶ್ರೀಧರ, ಯುವ ಸಂಗೀತ ವಿದ್ವಾಂಸರ ಸಮ್ಮೇಳನದ ಅಧ್ಯಕ್ಷರಾಗಿ ವಿದ್ವಾನ್ ಮತ್ತೂರು ಆರ್. ಶ್ರೀನಿಧಿ, ವಿದ್ವತ್ ಗೋಷ್ಠಿ : ಬೆಳಗ್ಗೆ 10ಕ್ಕೆ ಗಾನಭಾರತೀ ಸಂಗೀತ ನೃತ್ಯ ಶಾಲೆ ಕಲಾವಿದರಿಂದ ಪ್ರಾರ್ಥನೆ, ಬೆಳಗ್ಗೆ 10.35ಕ್ಕೆ ಪುರಂದರದಾಸರು ಕರ್ನಾಟಕ ಕಂಡ ಅಖಂಡ ಅನಂತ ಸಂಗೀತದ ಗಣಿ–ಚಿಂತನೆ – ಗಾನಕಲಾಶ್ರೀ ಮಾನಸಿ ಪ್ರಸಾದ್, ಬೆಳಗ್ಗೆ 11.35 ರಿಂದ ಅಭ್ಯಾಸ ಗಾನ ಹಾಗೂ ಸಭಾ ಗಾನಕ್ಕೆ ವರ್ಣಗಳ ಉಪಯುಕ್ತತೆ – ವಿದ್ವಾನ್ ಮಾನಸ ನಯನ, ಮಧ್ಯಾಹ್ನ 12.35 ರಿಂದ ತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿ ಗಾಯನ, ಸಂಜೆ 4.15 ರಿಂದ ಸಂಗೀತ ಕಾರ್ಯಕ್ರಮ, ವಿದ್ವಾನ್ ಪಾಲಕ್ಕಾಡ್ ರಾಮಪ್ರಸಾದ್–ಗಾಯನ, ವಿದ್ವಾನ್ ತಿರುಚೆರೈ ಕಾರ್ತಿಕ್–ಪಿಟೀಲು, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಬಿ.ಎಸ್. ಪುರುಷೋತ್ತಮ್ – ಖಂಜರಿ, ಸ್ಥಳ: ಗಾನಭಾರತೀ ರಮಾಗೋವಿಂದ ಕಲಾ ವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ :** ವಿದುಷಿ ಡಾ. ಕೃಪಾ ಫಡ್ಕೆ ಅವರ ಶಿಷ್ಯೆ ಕುಮಾರಿ ಆರ್. ಪ್ರೇಕ್ಷ ಅವರ ಭರತನಾಟ್ಯ ರಂಗ ಪ್ರವೇಶ, ವಿದುಷಿ ಪೂಜಾ ಸುಗಮ್–ನಟ್ಟುವಾಂಗ, ವಿದ್ವಾನ್ ಆರ್. ರಾಜೀವ್–ಗಾಯನ, ವಿದ್ವಾನ್ ಜಿ.ಎಸ್. ನಾಗರಾಜ್–ಮೃದಂಗ, ವಿದ್ವಾನ್ ಎ.ಪಿ. ಕೃಷ್ಣಪ್ರಸಾದ್–ಕೊಳಲು, ಸ್ಥಳ: ರಮಾಗೋವಿಂದ ರಂಗ ಮಂದಿರ, ನೃಪತುಂಗ ಕನ್ನಡ ಶಾಲೆ, ರಾಮಕೃಷ್ಣನಗರ, ಬೆಳಗ್ಗೆ 10.30 ರಿಂದ.

■ **ಮೈಸೂರು ವಿವಿ, ಹಿಂದುಳಿದ ವರ್ಗಗಳ ಘಟಕ, ಸೆನೆಟ್ ಭವನ :** ಶ್ರೀ ಕನಕದಾಸ ಜಯಂತಿ ಆಚರಣೆ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಪ್ರೊ. ಕವಿತಾ ರೈ, ಸ್ಥಳ: ಸೆಮಿನಾರ್ ಹಾಲ್, ವಿಜ್ಞಾನ ಭವನ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ:** 10ನೇ ವಾರ್ಷಿಕ ಘಟಿಕೋತ್ಸವ, ಉಪಸ್ಥಿತರು : ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಕೇರಳ ಕಲಾಮಂಡಲಂ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ವಿ. ಅನಂತಕೃಷ್ಣನ್, ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಹಣಕಾಸು ಅಧಿಕಾರಿ ಶ್ರೀಮತಿ ಸಿ.ಪಿ. ಸೌಮ್ಯಶ್ರೀ, ಕುಲಸಚಿವ ಪ್ರೊ. ಎಂ.ಜಿ. ಮಂಜುನಾಥ್, ಸ್ಥಳ: ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಆವರಣ, ಬೆಳಗ್ಗೆ 11.30ಕ್ಕೆ.

■ **ಪರಿವರ್ತನ ಅಕಾಡೆಮಿ ಮೇಟಗಳ್ಳಿ :** ಹಿರಿಯ ನಾಗರಿಕರ ವೇದಿಕೆ ಸಭೆ, ಉದ್ಘಾಟನೆ : ಪಿಬಿಎಸ್ ಟ್ರಸ್ಟಿ ಬಿ.ವಿ. ಕುಮಾರ್, ಅಧ್ಯಕ್ಷತೆ : ಡಾ. ಎಂ. ಪುಟ್ಟೇಗೌಡ, ಮುಖ್ಯ ಅತಿಥಿಗಳು : ಮಂಜುರಾವ್ ಪುಟ್ಟೇಗೌಡ, ಎನ್.ಎಂ. ತಿಮ್ಮೇಗೌಡ, ಪ್ರೊ. ಧನಂಜಯ, ಸ್ಥಳ: ಪರಿವರ್ತನ ಬಿಸಿನೆಸ್ ಸ್ಕೂಲ್ ರಾಯಲ್ ಇನ್ ಎದುರು, ಮಧ್ಯಾಹ್ನ 2.30ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 905, ಕಥೆ ಹೇಳುವವರು: ಡಾ. ಕೃಪಾ ಮಂಜುನಾಥ್, ಗಮಕ ಕಲಾವಿದರು ಹಾಗೂ ಉಪನ್ಯಾಸಕರು, ಸದ್ವಿದ್ಯಾ ಸಂಯುಕ್ತ ಪದವಿಪೂರ್ವ ಕಾಲೇಜು, ಮೈಸೂರು, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಡಾ. ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ :** ಕನ್ನಡ ರಾಜ್ಯೋತ್ಸವದ ಅಂಗವಾಗಿ ಇಳಿದು ಬಾ ತಾಯಿ ಶೀರ್ಷಿಕೆಯಡಿ ಸುಮಧುರ ಗೀತೆಗಳ ಗಾಯನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5 ರಿಂದ.

■ **ಪರಿವರ್ತನ ರಂಗ ಸಮಾಜ :** ರಂಗ ವಿಮರ್ಶೆ ಸದ್ಯದ ಸ್ಥಿತಿ. ಸಾಧ್ಯತೆ... ಸಂವಾದ, ಉಪಸ್ಥಿತರು : ಶಶಿಕಾಂತ ಯಡಹಳ್ಳಿ, ಎನ್. ಧನಂಜಯ, ಯತೀಶ್ ಕೊಳ್ಳೇಗಾಲ, ಸುಗುಣ ನಿರಂತರ, ರವಿಕುಮಾರ್ (ಕಲಾಬ್ರಹ್ಮ), ಪ್ರಸನ್ನಕುಮಾರ್ ಕೆರಗೋಡು, ಕುಸುಮಾ ಆಯರಹಳ್ಳಿ, ಸ್ಥಳ: ನಮನ ಕಲಾ ವೇದಿಕೆ, ಕೃಷ್ಣಮೂರ್ತಿಪುರಂ, ಸಂಜೆ 5.30ಕ್ಕೆ.

■ **ಸಾಧನಾ ಮಂದಿರ :** ಪೂಜ್ಯ ಸ್ವಾಮಿ ಹಂಸಾನಂದ ಅವರಿಂದ ಸರಸ್ವತಿ ಪೂಜಾ, ಸಂಜೆ 6 ರಿಂದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ; ಸಂಜೆ 7.15 ರಿಂದ ಶ್ರೀ ಸಪ್ತಮಾತೃಕಾ ದೇವಸ್ಥಾನಂ, ವಿಜಯನಗರ 3ನೇ ಹಂತ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಪರಮಹಂಸಾನಂದ ಅವರಿಂದ ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಡಾ. ಅಂಬಾಲಾಲ್ ವಿ. ಪಟೇಲ್ ಅವರಿಂದ ಫ್ಲೈಟ್ ಕಂಟ್ರೋಲ್ ಸಿಸ್ಟಮ್ ಕುರಿತು ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಹೆಚ್.ಎಸ್. ಸುರೇಶ್ ಬಾಬು, ಸ್ಥಳ: ಎಸ್.ಪಿ. ಭಟ್ ಹಾಲ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಕುಮಾರವ್ಯಾಸ ಗುರುಕುಲ ಮತ್ತು ಕಾವ್ಯರಂಜಿನಿ ಸಭಾ :** ಕನ್ನಡ ರಾಜ್ಯೋತ್ಸವ ಹಿಂದೂಸ್ಥಾನಿ ಸಂಗೀತ (ಭಕ್ತಿಗೀತೆಯೊಂದಿಗೆ), ಶ್ರೀಮತಿ ಕಿರಣ್ಮಯಿ ದೇಸಾಯಿ ಅವರಿಂದ ಗಾಯನ, ಪ್ರಸಾದ್ ಕೊಮರ್ – ತಬಲ, ವೆಂಕಟೇಶ್ ಕುಲಕರ್ಣಿ –ಹಾರ್ಮೋನಿಯಂ, ಮುಖ್ಯ ಅತಿಥಿಗಳು : ಪಂಡಿತ್ ವೀರಭದ್ರಯ್ಯ ಹಿರೇಮಠ, ಸ್ಥಳ: 1315/2, ಹರಿಪ್ರಿಯ, 3ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ಕಲಾಸುರುಚಿ, ಕುತೂಹಲಿ–ಕನ್ನಡ ಸಂಸ್ಥೆಗಳು :** ಬೆಂಗಳೂರಿನ ಫ್ರಂ ಮಗ್ ಟು ಮೈಕ್ ಸಹ ಸಂಸ್ಥಾಪಕ ಸುನೀಲ್ ಕೋಶಿ ಅವರಿಂದ ಇಂಗ್ಲೀಷ್‌ನಲ್ಲಿ ಭಾಷಣ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 6.30 ರಿಂದ.

■ **ಗೀತಾ ಶಿಶು ಶಿಕ್ಷಣ ಸಂಸ್ಥೆ :** ಗೀತಾ ಶಿಶು ಶಿಕ್ಷಣ ಸಂಘದ ಸಂಸ್ಥಾಪಕರು, ಶಿಕ್ಷಣ ತಜ್ಞರು, ದಾರ್ಶನಿಕರು, ಜೆಎಸ್‌ಎಸ್‌ಎಸ್‌ನ ಸಂಸ್ಥಾಪಕ ಗೌರವ ಕಾರ್ಯದರ್ಶಿಗಳಾದ ದಿವಂಗತ ಪ್ರೊ.ಬಿ.ಎಸ್.ಪಂಡಿತ್ ಅವರ ನೆನಪಿನಲ್ಲಿ ಸಂಗಿತ ಕಾರ್ಯಕ್ರಮ, ಸ್ಥಳ: ಜೆಎಸ್‌ಎಸ್‌ಎಸ್ ಮಹಿಳಾ ಮಹಾವಿದ್ಯಾಲಯ, ಸಂಜೆ 6.30ಕ್ಕೆ.

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ಕದಂಬ ರಂಗೋತ್ಸವ, ಎನ್‌ಇಎಸ್ ಹವ್ಯಾಸಿ ರಂಗ ತಂಡ ಶಿವಮೊಗ್ಗ ಅವರಿಂದ ಡಾ. ಹೇಮಾಪಟ್ಟಣ ಶೆಟ್ಟಿ ವಿರಚಿತ ಚೆಕಾವ್ ಟು ಶಾಂಪೇನ್ ನಾಟಕ ಪ್ರದರ್ಶನ, ನಿರ್ದೇಶನ : ಡಾ. ಎನ್.ಕೆ. ಚಿದಾನಂದ ಸೊರಬ, ಸ್ಥಳ : ಕಿರು ರಂಗಮಂದಿರ (ಕಲಾಮಂದಿರದ ಆವರಣ), ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ.ಕೊಡ್ಲಿ ಗುರುರಾಜು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 9.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಾವಯವ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ–ಟಿ. ನರಸೀಪುರ ತಾಲೂಕು ಬನ್ನೂರು ಹೋಬಳಿ ಯಾಚೇನಹಳ್ಳಿ ಗ್ರಾಮದ ವೈ. ಎಸ್. ರಾಮಸ್ವಾಮಿ ಮತ್ತು ಅವರ ಮಗ ವೈ. ಆರ್. ಅರವಿಂದ್, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ರಾಗಿಣಿ ದೇವ್ಲೆ, ಹಾಡುಗಾರಿಕೆ – ಖಯಾಲ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 8 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 200 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸರಗೂರು ತಾಲೂಕಲ್ಲಿ ಹುಲಿಗೆ

ಮತ್ತೊಬ್ಬ ರೈತ ಬಲಿ

• 13 ದಿನದಲ್ಲಿ ಮೂವರ ಬಲಿ ಪಡೆದ ವ್ಯಾಘ್ರಗಳು • ರೊಚ್ಚಿಗೆದ್ದ ಗ್ರಾಮಸ್ಥರಿಂದ ಅರಣ್ಯ ಸಿಬ್ಬಂದಿ ಮೇಲೆ ಹಲ್ಲೆ • ಎರಡು ವರ್ಷದ ಹಿಂದೆ ಆನೆ ದಾಳಿಯಲ್ಲಿ ಬಚಾವಾಗಿದ್ದ ರೈತ ಈಗ ಹುಲಿಗೆ ಆಹುತಿ

ಸರಗೂರು, ನ.7(ಎಂಟಿವೈ, ನಾಗೇಶ್)– ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಹುಲಿ ಉಪಟಳ ಮುಂದುವರೆದಿದೆ. ಶುಕ್ರವಾರ ಹೊಲದಲ್ಲಿ ಉಳುಮೆ ಮಾಡುತ್ತಿದ್ದ ರೈತನ ಮೇಲೆ ದಾಳಿ ನಡೆಸಿ ಆತನನ್ನು ಕೊಂದು ಹಾಕಿದೆ. ಮಾತ್ರವಲ್ಲ ದೇಹವನ್ನು ಕಾಡಿನತ್ತ ಎಳೆದೊಯ್ದು ಹಳ್ಳವೊಂದರಲ್ಲಿ ಕೆಲ ಭಾಗಗಳ ತಿಂದು ಪರಾರಿಯಾಗಿದೆ.

ಸರಗೂರು ತಾಲೂಕಿನ ಹಳೆ ಹೆಗ್ಗುಡಿಲು ಗ್ರಾಮದ ನಿವಾಸಿ ಚೌಡನಾಯಕ ಅಲಿಯಾಸ್ ದಂಡನಾಯಕ (45) ಹುಲಿ ದಾಳಿಗೆ ಬಲಿಯಾದವರಾಗಿದ್ದು, ಇವರು ಇಂದು ಬೆಳಗ್ಗೆ ಕಾಡಂಚಿನಲ್ಲಿರುವ ತಮ್ಮ ಭೂಮಿಯಲ್ಲಿ ಉಳುಮೆ ಆರಂಭಿಸಿದ ಕೆಲವೇ ನಿಮಿಷದಲ್ಲಿ ಅವರ ಮೇಲೆ ಏಕಾಏಕಿ ಹುಲಿ ದಾಳಿ ಮಾಡಿ, ಬಲಿ ಪಡೆದಿದೆ.





ಚೌಡನಾಯಕ ಮೃತದೇಹ.

ಹುಲಿ, ಕಾಡಿನತ್ತ ಚೌಡನಾಯಕರ ದೇಹವನ್ನ ಎಳೆ ದೊಯ್ದಿದೆ. ಹಳ್ಳವೊಂದರಲ್ಲಿ ದೇಹದ ತೊಡೆ ಭಾಗ ಭಕ್ಷಿಸಿದೆ. ಅಲ್ಲದೆ, ಕುತ್ತಿಗೆಗೆ ಬಾಯಿ ಹಾಕಿದ ಹಿನ್ನೆಲೆಯಲ್ಲಿ ತಲೆ ಹಾಗೂ ಭುಜದ ಮಾಂಸ ಕಿತ್ತು ಬಂದಿದೆ.

ಘಾಸಿಗೊಂಡು ಮನೆಗೆ ಓಡಿ ಬಂದ ಎತ್ತುಗಳು: ಹುಲಿ ಆರ್ಭಟಕ್ಕೆ ಘಾಸಿಗೊಂಡ ಎತ್ತುಗಳು, ನೊಗ ಮತ್ತು ನೇಗಿಲ ಎಳೆದುಕೊಂಡು ಮನೆಗೆ ಬಂದಿವೆ. ಇದನ್ನು ಕಂಡು ಅನುಮಾನಗೊಂಡ ಚೌಡನಾಯಕರ ಪತ್ನಿ ರುಕ್ಮಿಣಿ, ಗ್ರಾಮಸ್ಥರೊಂದಿಗೆ ಹೊಲಕ್ಕೆ ಹೋಗಿ ನೋಡಿದಾಗ ಚೌಡನಾಯಕರ ಸುಳಿವಿಲ್ಲ. ಉಳುಮೆಯ ಕೊನೆಯ ಸಾಲಿನಲ್ಲಿ ರಕ್ತದ ಕಲೆ ಕಂಡು ಬಂದಿದೆ. ■ 7ನೇ ಪುಟಕ್ಕೆ

ಮೂವರು ಅರಣ್ಯ ಅಧಿಕಾರಿಗಳ ವರ್ಗಾವಣೆ

ಮೈಸೂರು,ನ.7(ಎಂಟಿವೈ)–ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಹುಲಿ ದಾಳಿಗೆ ಮೂವರು ರೈತರು ಬಲಿಯಾದ ಹಿನ್ನೆಲೆಯಲ್ಲಿ ಸರ್ಕಾರ ಮೂವರು ಅರಣ್ಯಾಧಿಕಾರಿಗಳನ್ನು ವರ್ಗಾವಣೆ ಮಾಡಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾಗಿದ್ದ ಎಸ್.ಪ್ರಭಾಕರನ್ ಅವರನ್ನು ಚಾಮರಾಜನಗರ ವೃತ್ತದ ಸಿಎಫ್ ಆಗಿ ವರ್ಗಾವಣೆ ಮಾಡಿದ್ದು, ಇವರ ಸ್ಥಾನಕ್ಕೆ ಬೆಂಗಳೂರು ಗ್ರಾಮಾಂತರ ವಿಭಾಗದಲ್ಲಿ ಡಿಸಿಎಫ್ ಆಗಿದ್ದ ಡಾ.ಜಿ.ಸಂತೋಷ್ ಕುಮಾರ್ ಅವರನ್ನು ನಿಯೋಜಿಸಲಾಗಿದೆ. 2016ರ ಸಾಲಿನ ಐಎಫ್‌ಎಸ್ ಅಧಿಕಾರಿಯಾಗಿರುವ ಸಂತೋಷ್ ಕುಮಾರ್ ಅವರು ಈ ಹಿಂದೆ ಬಿಳಿಗಿರಿರಂಗನ ಬೆಟ್ಟ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆ ಮಹದೇಶ್ವರ ವನ್ಯಧಾಮದ ಡಿಸಿಎಫ್ ಆಗಿ ಕಾರ್ಯ ನಿರ್ವಹಿಸಿದ್ದರು. ■ 7ನೇ ಪುಟಕ್ಕೆ

ಇಂದಿನಿಂದಲೇ ನಾಗರಹೊಳೆ, ಬಂಡೀಪುರದಲ್ಲಿ
ಸಫಾರಿ, ಟ್ರೆಕ್ಕಿಂಗ್ ಸ್ಥಗಿತ

ಹುಲಿ ಸೆರೆ ಕಾರ್ಯಾಚರಣೆಗೆ ಸಫಾರಿ ಸಿಬ್ಬಂದಿ ಬಳಕೆ: ಅರಣ್ಯ ಸಚಿವ ಈಶ್ವರ ಖಂಡ್ರೆ ಆದೇಶ



ಮೈಸೂರು, ನ.7(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮದಲ್ಲಿ ಹುಲಿ ದಾಳಿ ಮುಂದುವರೆದಿರುವ ಹಿನ್ನೆಲೆಯಲ್ಲಿ ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯದಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸಫಾರಿ ಸ್ಥಗಿತಗೊಳಿಸಲಾಗಿದೆ. ಅಲ್ಲಿನ ಸಿಬ್ಬಂದಿಯನ್ನೂ ಹುಲಿ ಸೆರೆ ಕಾರ್ಯಾಚರಣೆಗೆ ಬಳಸಿಕೊಳ್ಳುವಂತೆ ■ 7ನೇ ಪುಟಕ್ಕೆ



ಟನ್ ಕಬ್ಬಿಗೆ 3300 ರೂ. ದರ ನಿಗದಿ

ಬೆಳಗಾವಿ ಭಾಗದ ಕಬ್ಬು ಬೆಳೆಗಾರರು ಪಟಾಕಿ ಸಿಡಿಸಿ ಸಂಭ್ರಮಾಚರಣೆ



ಸಕ್ಕರೆ ಕಾರ್ಖಾನೆ ಮಾಲೀಕರು ಹಾಗೂ ರೈತರೊಂದಿಗೆ ಸಭೆ ನಡೆಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಸುದ್ದಿಗೋಷ್ಠಿ ನಡೆಸಿದರು. ಈ ವೇಳೆ ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಎಂ.ಬಿ. ಪಾಟೀಲ್, ಹೆಚ್.ಕೆ. ಪಾಟೀಲ್, ಸತೀಶ್ ಜಾರಕಿಹೊಳಿ ಇನ್ನಿತರರಿದ್ದರು.

ಬೆಂಗಳೂರು, ನ.7– ಬೆಳಗಾವಿ ಕಬ್ಬು ಬೆಳೆಗಾರರ ಹೋರಾಟಕ್ಕೆ ಮಣಿದಿರುವ ರಾಜ್ಯ ಸರ್ಕಾರ, ಪ್ರತಿ ಟನ್ ಕಬ್ಬಿಗೆ 3,300 ರೂ. ಬೆಲೆ ನಿಗದಿ ಮಾಡಿ ಆದೇಶ ಹೊರಡಿಸಿದೆ. ರೈತರ ಬೇಡಿಕೆ ಪ್ರತಿ ಟನ್‌ಗೆ 3,500 ಇತ್ತು. ಆದರೆ 3,300 ರೂಪಾಯಿ ನೀಡಲು ಸರ್ಕಾರ ಒಪ್ಪಿಕೊಂಡಿದೆ. ಸಕ್ಕರೆ ಕಾರ್ಖಾನೆಗಳು 50 ರೂ. ಹಾಗೂ ರಾಜ್ಯ ಸರ್ಕಾರ 50 ರೂ. ರೈತರಿಗೆ ಸಬ್ಸಿಡಿ ನೀಡಲು ತೀರ್ಮಾನಿಸಲಾಗಿದೆ. ಆದರೆ, ರೈತರು ನಾಳೆ ಪ್ರತಿಭಟನೆ ಕೈಬಿಡುವ ಸಂಬಂಧ ನಿರ್ಧರಿಸುವುದಾಗಿ ಪ್ರಕಟಿಸಿದ್ದಾರೆ.

ಈ ಕುರಿತು ಬೆಂಗಳೂರಿನಲ್ಲಿ ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಭೆ ಬಳಿಕ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರೈತ ಪ್ರತಿನಿಧಿಗಳು ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರ ಜೊತೆಗೆ ಸತತ 7 ಗಂಟೆ ಕಾಲ ಮಾತುಕತೆ ನಡೆಸಲಾಗಿದೆ. 3,500 ರೂಪಾಯಿ ನೀಡಬೇಕು ಎಂಬುದು ರೈತರ ಬೇಡಿಕೆಯಾಗಿದೆ. ಆದರೆ ಹಾಲಿ ಇರುವ ದರಕ್ಕೆ ನೂರು ರೂ. ಹೆಚ್ಚುವರಿ ಅಂದರೆ 3300ರೂ. ನಿಗದಿಗೆ ನಿರ್ಧಾರ ಮಾಡಲಾಗಿದೆ. ಇದಕ್ಕೆ ಸಕ್ಕರೆ ಕಾರ್ಖಾನೆ ಮಾಲೀಕರು ಒಪ್ಪಿಗೆ ಸೂಚಿಸಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಕಾರ್ಖಾನೆ ಮಾಲೀಕರು ಮತ್ತು ರೈತರು ತಮ್ಮ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಇಬ್ಬರೂ ಕೇಂದ್ರ ಸರ್ಕಾರದ ನೀತಿಗಳಿಂದ ಆಗಿರುವ ನಷ್ಟ ಮತ್ತು ಸಮಸ್ಯೆಗಳನ್ನೂ ಹೇಳಿಕೊಂಡಿದ್ದಾರೆ. ಕೇಂದ್ರದಿಂದ ಆಗುತ್ತಿರುವ ತೊಂದರೆ ಬಗ್ಗೆ ಚರ್ಚಿಸಲು ಕೇಂದ್ರಕ್ಕೆ ನಿಯೋಗ ಹೋಗಲು ತೀರ್ಮಾನಿಸಿದ್ದೇವೆ. ಇದಕ್ಕೆ ಮಾಲೀಕರೂ ಒಪ್ಪಿಕೊಂಡಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಕಬ್ಬು ರಫ್ತು ಪ್ರಮಾಣ ಹೆಚ್ಚಳಕ್ಕೆ ಪ್ರಧಾನಿ ಮೋದಿ ಅವರನ್ನು ನಿಯೋಗದೊಂದಿಗೆ ಭೇಟಿ ಮಾಡಿ ಮನವಿ ಮಾಡಲಾಗುವುದು ಎಂದು ಮಾಹಿತಿ ನೀಡಿದ ಸಿಎಂ ಸಿದ್ದರಾಮಯ್ಯ, ರಾಜ್ಯ ಸರ್ಕಾರದ ಈ ■ 7ನೇ ಪುಟಕ್ಕೆ

ಇನ್ನೊಂದು ತಿಂಗಳಲ್ಲಿ ಗ್ರಾಮ ಮಟ್ಟದಿಂದ
ಇ–ಆಡಳಿತ ವ್ಯವಸ್ಥೆ ಜಾರಿ

• ಕಂದಾಯ ಸಚಿವ ಕೃಷ್ಣ ಭೈರೇಗೌಡ ಘೋಷಣೆ • ಮೈಸೂರಲ್ಲಿ ಇಲಾಖಾ ಪ್ರಗತಿ ಪರಿಶೀಲನಾ ಸಭೆ • ಇನ್ನು ಮುಂದೆ ಜನರಿಗೆ ಕ್ಷಣಮಾತ್ರದಲ್ಲಿ ಅಗತ್ಯ ದಾಖಲೆ ಪಡೆಯುವ ಅವಕಾಶ • ಕಾದು... ಕಾದು... ಸುಸ್ತಾಗುತ್ತಿದ್ದ ಜನರಿಗೆ ಇನ್ನು ಗ್ರೇಟ್ ರಿಲೀಫ್!

ಮೈಸೂರು, ನ.7(ಎಸ್‌ಬಿಡಿ)– ಕಂದಾಯ ಇಲಾಖೆಯಲ್ಲಿ ಪರಿಪೂರ್ಣ ಇ–ಆಡಳಿತ ವ್ಯವಸ್ಥೆಯನ್ನು ಇನ್ನೊಂದು ತಿಂಗಳಲ್ಲಿ ಜಾರಿಗೊಳಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯ ಚಾಮುಂಡೇಶ್ವರಿ ಸಭಾಂಗಣದಲ್ಲಿ ಶುಕ್ರವಾರ ಕಂದಾಯ ಇಲಾಖೆಯ ಮೈಸೂರು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನೊಂದು ತಿಂಗಳಲ್ಲಿ ಗ್ರಾಮ ಆಡಳಿತಾಧಿಕಾರಿ (ವಿಎ) ಹಂತದಿಂದಲೇ ಇಲಾಖೆಯ ಎಲ್ಲಾ ಕೆಲಸ ಕಾರ್ಯಗಳೂ ಇ–ಆಫೀಸ್ ವ್ಯವಸ್ಥೆ ಮೂಲಕವೇ ನಡೆಸಲಾಗುವುದು ಎಂದರು.



ಸದ್ಯ ನಾಡಕಚೇರಿ ಹಂತದಿಂದ ಸಚಿವಾಲಯದವರೆಗೆ ಇ–ಆಫೀಸ್ ವ್ಯವಸ್ಥೆ ಅನುಸರಿಸಲಾಗುತ್ತಿದೆ. ಇನ್ನೊಂದು ತಿಂಗಳಲ್ಲಿ ಈ ವ್ಯವಸ್ಥೆಯನ್ನು ಪರಿಪೂರ್ಣವಾಗಿ ಜಾರಿಗೊಳಿಸಲಾಗುವುದು. ನಂತರದಲ್ಲಿ ಇಲಾಖೆಯ ಕಡತ ವಿಲೇವಾರಿ ಸೇರಿದಂತೆ ಶೇಕಡ ನೂರರಷ್ಟು ಕೆಲಸ ಕಾರ್ಯಗಳೂ ಇ–ಆಫೀಸ್ ವ್ಯವಸ್ಥೆಯಲ್ಲೇ ನಡೆಯಲಿವೆ. ಇದರಿಂದ ಜನ ಕಚೇರಿಯಿಂದ ಕಚೇರಿಗೆ ಅಲೆದಾಡುವುದು ತಪ್ಪುತ್ತದೆ. ಅಲ್ಲದೆ ಅತ್ಯಂತ ತ್ವರಿತ ಹಾಗೂ ಪಾರದರ್ಶಕವಾಗಿ ಸಾರ್ವಜನಿಕರ ಕೆಲಸಗಳಾಗುತ್ತವೆ ಎಂದು ವಿವರಿಸಿದರು. ■ 7ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ... ನಿಮಗೆ ಒಂದು ಮಾತು ಕೇಳಲಾ...?
ಪತಿ : ಹೂಂ ಕೇಳು..
ಪತ್ನಿ : ನಮ್ಮ ಮದುವೆಯಲ್ಲಿ ನಮ್ಮಪ್ಪ 20 ಸಾವಿರ ಕೊಟ್ಟು ಏನೋ ಹೇಳಿದರಲ್ಲ ಏನದು?
ಪತಿ : ಹೀಗೆ ದುಡ್ಡು ನಿಂಗೆ ಕೊಡ್ತಾ ಇರ್ತಿನಿ. ಆದರೆ ಹುಡುಗಿ ಮಾತ್ರ ವಾಪಸ್ ಬರಬಾರದು ನೋಡ್ಕೋ ಅಂತಾ ಅಂದ್ರು !

ಮೈಸೂರು ಮಿತ್ರ

ಶನಿವಾರ, 8 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಸಂಬಂಧಗಳು ಹುಟ್ಟೋದು ರಕ್ತದಿಂದ. ಆದರೆ ನಮ್ಮವರು ಅನ್ನೋ ಭಾವನೆಗಳು ಹುಟ್ಟೋದು ಮನಸ್ಸಿನಿಂದ ಮಾತ್ರ. ಆದರೆ ನೋಡೋ ದೃಷ್ಟಿ ಅರ್ಥ ಮಾಡಿಕೊಳ್ಳುವ ಮನಸ್ಸು, ಮಾತನಾಡುವ ನಾಲಿಗೆ ಸರಿಯಿಲ್ಲದಿದ್ದರೆ ಯಾವ ಸಂಬಂಧಗಳಿಗೂ ಅರ್ಥವೇ ಇರುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಳೆ ಎಂದವನಿಗೆ ಹಾಳು, ಇಂದೇ ಎಂದವನಿಗೆ ಬೀಳಾಗದು ಬಾಳು.

ನಿಮ್ಮ ಪತ್ರಗಳು

ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಸರ್ಕಾರದ ಶ್ಲಾಘನೀಯ ಆದೇಶ

ಮಾನ್ಯರೆ,

ಇತ್ತೀಚೆಗೆ ಕರ್ನಾಟಕ ಸರ್ಕಾರವು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಶ್ಲಾಘನೀಯ ಆದೇಶವನ್ನು ಹೊರಡಿಸಿದೆ. ಈ ಆದೇಶದ ಪ್ರಕಾರ, ಎಲ್ಲಾ ಖಾಸಗಿ ಶಾಲೆಗಳು, ಸರ್ಕಾರಿ ಹಾಗೂ ಅರೆ ಸರ್ಕಾರಿ ಕಚೇರಿಗಳಲ್ಲಿ ಮಿಷನ್ ವಾತ್ಸಲ್ಯ ಮತ್ತು ಮಕ್ಕಳ ಸಹಾಯವಾಣಿ 1098 ಕುರಿತ ಫಲಕಗಳನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು ಎಂದು ಸೂಚಿಸಲಾಗಿದೆ. ಈ ಕ್ರಮವು ಕೇವಲ ಕಾನೂನಾತ್ಮಕ ನಿಯಮವಲ್ಲ, ಮಕ್ಕಳ ಭದ್ರತೆ ಹಾಗೂ ಅವರ ಹಕ್ಕುಗಳ ಅರಿವು ಮೂಡಿಸಲು ತೆಗೆದುಕೊಳ್ಳಲಾದ ಮಹತ್ವದ ಹೆಜ್ಜೆಯಾಗಿದೆ. ಅಂಕಿ-ಅಂಶಗಳ ಪ್ರಕಾರ, ಭಾರತದಲ್ಲಿ ಪ್ರತಿವರ್ಷ 45,000ಕ್ಕೂ ಹೆಚ್ಚು ಮಕ್ಕಳು ಹಿಂಸೆ ಅಥವಾ ಶೋಷಣೆಗೆ ಒಳಗಾಗುತ್ತಾರೆ. ಈ ಸಂದರ್ಭಗಳಲ್ಲಿ ಬಹಳಷ್ಟು ಪ್ರಕರಣಗಳು ವರದಿಯಾಗದೆ ಉಳಿಯುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳ ಸಹಾಯವಾಣಿ 1098 ಮತ್ತು ಮಿಷನ್ ವಾತ್ಸಲ್ಯ ಯೋಜನೆಗಳು ಸಾವಿರಾರು ಮಕ್ಕಳ ಜೀವ ಉಳಿಸಲು ನೆರವಾಗಿವೆ ಎಂಬುದು ಶ್ಲಾಘನೀಯ ವಿಷಯ. ಸರ್ಕಾರದ ಈ ಆದೇಶದಿಂದ ಸಾರ್ವಜನಿಕ ಸ್ಥಳಗಳಲ್ಲಿ ಅರಿವು ಹೆಚ್ಚುವುದು ಮತ್ತು ಮಕ್ಕಳಲ್ಲಿ ಸಹಾಯ ಕೇಳಲು ಧೈರ್ಯ ಮೂಡುವುದು ಖಚಿತ.ಆದರೆ ಈ ಕ್ರಮವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಕೆಲ ಕ್ರಮಗಳು ಅಗತ್ಯ. ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಅರಿವು ಕಾರ್ಯಾಗಾರಗಳನ್ನು ನಿಯಮಿತವಾಗಿ ಆಯೋಜಿಸಬೇಕು. ಶಿಕ್ಷಕರು ಹಾಗೂ ಸಿಬ್ಬಂದಿಗೆ ಮಕ್ಕಳ ಮನೋಭಾವ ಅರಿತು ಸಂವೇದನಾಶೀಲವಾಗಿ ವರ್ತಿಸುವ ತರಬೇತಿ ನೀಡಬೇಕು. ಗ್ರಾಮ ಪಂಚಾಯತ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಜಾಗೃತಿ ಅಭಿಯಾನಗಳನ್ನು ನಡೆಸುವುದು ಪರಿಣಾಮಕಾರಿ. ಮಾಧ್ಯಮಗಳ ಸಹಕಾರದೊಂದಿಗೆ 1098 ಕುರಿತು ಕಿರುಚಿತ್ರಗಳು, ಪೋಸ್ಟರ್‌ಗಳು ಮತ್ತು ಸಾಮಾಜಿಕ ಮಾಧ್ಯಮ ಅಭಿಯಾನಗಳು ನಡೆಯಬೇಕು. ಸರ್ಕಾರದ ಈ ಆದೇಶವು ಮಕ್ಕಳ ಸುರಕ್ಷತೆಗಾಗಿ ಪ್ರಾರಂಭವಾದ ಸಕಾರಾತ್ಮಕ ಹೆಜ್ಜೆಯಾಗಿದೆ.

–ಡಾ. ಎಚ್.ಕೆ. ವಿಜಯಕುಮಾರ್, ಮೈಸೂರು.

ಬೋಗಾದಿ–ಗದ್ದಿಗೆ ರಸ್ತೆಗೆ ಬೀದಿ ದೀಪಗಳು ಬೇಕು

ಮಾನ್ಯರೆ,

ಮೈಸೂರಿನ ಬೋಗಾದಿ ಗದ್ದಿಗೆ ರಸ್ತೆಯಲ್ಲಿ ಬರುವ ರೂಪಾನಗರದಿಂದ ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ, ಬೀರಿಹುಂಡಿ, ಗದ್ದಿಗೆ ತನಕ ಹಾದುಹೋಗುವ ರಸ್ತೆಯಲ್ಲಿ ಬೀದಿ ದೀಪಗಳು ಇಲ್ಲದ ಕಾರಣ ಆಗಿಂದಾಗ್ಗೆ ಕಳ್ಳತನಗಳು, ಅಪಘಾತಗಳು ಸಂಭವಿಸಿವೆ. ಪಟ್ಟಣ ಪಂಚಾಯಿತಿಯಲ್ಲಿ ಜನಪ್ರತಿನಿಧಿಗಳು ಇಲ್ಲದ ಕಾರಣ ಯಾರಿಗೆ ದೂರು ನೀಡಬೇಕು ಎಂದು ಜನಸಾಮಾನ್ಯರಿಗೆ ತಿಳಿಯದಾಗಿದೆ ಮತ್ತು ಅಧಿಕಾರಿಗಳಿಗೆ ಹೇಳಿದರು ಪ್ರಯೋಜನವಾಗುತ್ತಿಲ್ಲ. ಇದಕ್ಕೆ ಸಂಬಂಧಪಟ್ಟವರು ಆದಷ್ಟು ಬೇಗ ಈ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸುವತ್ತ ಗಮನ ಹರಿಸುವುದು ಅತ್ಯಗತ್ಯ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಕನ್ಸರ್‌ವೆನ್ಸಿಯನ್ನು ಸ್ವಚ್ಛಗೊಳಿಸಿದ ಪಾಲಿಕೆ ಸಿಬ್ಬಂದಿಗೆ ಧನ್ಯವಾದಗಳು

ಮಾನ್ಯರೇ,

ಮೈಸೂರಿನ ವಿ.ವಿ.ಮೊಹಲ್ಲಾದ 2ನೇ ಮುಖ್ಯರಸ್ತೆ (ಕ್ಲಬ್ ಹಿಂಭಾಗ ಇರುವ) ವಾರ್ಡ್ ನಂ.19ರ ವ್ಯಾಪ್ತಿಗೆ ಒಳಪಡುವ ಕನ್ಸರ್‌ವೆನ್ಸಿಯಲ್ಲಿ ಸಾಕಷ್ಟು ಗಿಡ ಗಂಟಿಗಳು ಬೆಳೆದು ಸುತ್ತಮುತ್ತಲ ಪರಿಸರ ಹದಗೆಟ್ಟಿತ್ತು. ಇಲ್ಲಿನ ಸಾರ್ವಜನಿಕರು ಆತಂಕಕ್ಕೆ ಒಳಗಾಗಿ ಪಾಲಿಕೆ ಸಿಬ್ಬಂದಿಗೆ ಸ್ವಚ್ಛಗೊಳಿಸುವಂತೆ ಮನವಿ ಮಾಡಿಕೊಂಡಿದ್ದರು. ಇದಕ್ಕೆ ತಕ್ಷಣ ಸ್ಪಂದಿಸಿದ ಪಾಲಿಕೆ ಸಿಬ್ಬಂದಿ ಡೋಜರ್ ಮುಖಾಂತರ ಕನ್ಸರ್‌ವೆನ್ಸಿಯನ್ನು ಸ್ವಚ್ಛಗೊಳಿಸಿದ್ದಾರೆ. ಇದೇ ರೀತಿ ನಗರದ ಅನೇಕ ವಾರ್ಡ್‌ಗಳಲ್ಲಿ ಗಿಡಗಂಟಿಗಳು ಬೆಳೆದು ನಿಂತು ಪರಿಸರ ಹಾನಿಯಾಗುತ್ತಿದೆ. ಇದನ್ನು ಆಯಾಯ ವಾರ್ಡ್‌ನ ಪಾಲಿಕೆ ಸಿಬ್ಬಂದಿ ಪರಿಶೀಲಿಸಿ, ಆಗಿಂದ್ದಾಗ್ಗೆ ಸ್ವಚ್ಛಗೊಳಿಸಬೇಕು. ಏಕೆಂದರೆ ಇದರಿಂದ ಜನರ ಆರೋಗ್ಯಕ್ಕೆ ಹಾನಿ ಉಂಟಾಗುವುದಲ್ಲದೇ ಅನೈರ್ಮಲ್ಯಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಪ್ರತಿ ಎರಡು ಅಥವಾ ಮೂರು ತಿಂಗಳಿಗೊಮ್ಮೆ ಈ ರೀತಿ ಪ್ರತಿ ವಾರ್ಡ್‌ಗಳಲ್ಲೂ ಸ್ವಚ್ಛಗೊಳಿಸಿದರೆ ಆಹ್ಲಾದಕರ ವಾತಾವರಣ ಸೃಷ್ಟಿಯಾಗುತ್ತದೆ. ಇದಲ್ಲದೇ ಇಲ್ಲಿ ಯಾರೂ ಮೂತ್ರ ವಿಸರ್ಜನೆ ಮಾಡಬಾರದು ಎಂಬ ನಾಮಫಲಕವನ್ನು ಎರಡೂ ದಿಕ್ಕುಗಳಲ್ಲೂ ಅಳವಡಿಸಬೇಕು. ಕನ್ಸರ್‌ವೆನ್ಸಿಯನ್ನು ಸ್ವಚ್ಛಗೊಳಿಸಲು ಸಹಕರಿಸಿದ ಅಧಿಕಾರಿಗಳಿಗೆ ಧನ್ಯವಾದಗಳು.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ನಂದಿನಿ ತುಪ್ಪದ ಬೆಲೆ ಏರಿಕೆ ಹಗಲು ದರೋಡೆ



ಮಾನ್ಯರೆ,

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಸಹಕಾರ ಮಹಾಮಂಡಳಿ (ಕೆ.ಎಂ.ಎಫ್) ಇಂದಿನಿಂದ ನಂದಿನಿ ತುಪ್ಪದ ಬೆಲೆಯನ್ನು ಪ್ರತಿ ಕೆಜಿಗೆ ರೂ. 90 ಏರಿಕೆ ಮಾಡಿರುವುದು ಒಂದು ರೀತಿಯಲ್ಲಿ "ಹಗಲು ದರೋಡೆ" ಎನ್ನಬೇಕು, ಈಗಾಗಲೇ ಕೆಎಂಎಫ್ ಸಾಕಷ್ಟು ಲಾಭದಾಯಕ ಉದ್ಯಮವಾಗಿ ಬೆಳೆದಿದೆ, ಬೆಳೆಯುತ್ತಲೂ ಇದೆ. ಆದರೂ ಏಕಾಏಕಿ ತುಪ್ಪದ ಬೆಲೆಯನ್ನು ಏರಿಕೆ ಮಾಡಿರುವುದು ಅವೈಜ್ಞಾನಿಕ ನಿರ್ಧಾರ, ನಿಮ್ಮನ್ನು ಹೇಳುವವರು– ಕೇಳುವವರು ಯಾರೂ ಇಲ್ಲವೇ? ಇದೊಂದು ರೀತಿಯಲ್ಲಿ ಗ್ರಾಹಕರಿಗೆ ಬರೆ ಎಳೆದಂತೆ, ಅಕ್ಕ ಪಕ್ಕದ ರಾಜ್ಯಗಳಿಗೆ ಹೋಲಿಸಿದರೆ ಇದು ಭಾರಿ ದುಬಾರಿಯಾಯಿತು. ಕೆಎಂಎಫ್ ಕಳೆದ ಎರಡು ವರ್ಷಗಳಿಂದ ನಂದಿನಿ ಹಾಲಿನ ಬೆಲೆಯನ್ನು ಮೂರು ಬಾರಿ ಹೆಚ್ಚಳ ಮಾಡಿದೆ, ನಂದಿನಿಯ ಇತರೆ ಉತ್ಪನ್ನಗಳ ಬೆಲೆಯನ್ನು ಎರಡು ಬಾರಿ ಏರಿಕೆ ಮಾಡಿದೆ ಇಷ್ಟಾದರೂ ಗ್ರಾಹಕರು ಸಹಿಸಿಕೊಂಡಿದ್ದಾರೆ, ಇನ್ನು ಮುಂದೆ ಬಡವರ ಪಾಲಿಗೆ ನಂದಿನಿ ತುಪ್ಪ ಕೈಗೆಟಕದ ವಸ್ತುವಾಗಬಹುದು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ದೇವಪುರುಷ ಕನಕದಾಸ



ನವೆಂಬರ್ 8, ಕನಕದಾಸರ ಜಯಂತಿ. ತನ್ನಿಮಿತ್ತ ಈ ಲೇಖನ.

> ಜೀವನದಲ್ಲಿ ನ್ಯಾಯ, ನೀತಿ, ಸತ್ಯ, ನಿಷ್ಠೆ ಹಾಗೆಯೇ ಸಾಹಿತ್ಯದಲ್ಲಿ ಜೀವನ ಮೌಲ್ಯಗಳನ್ನು ತತ್ವಗಳಾಗಿ ಅಡಗಿಸಿ, ಜನಸಾಮಾನ್ಯರನ್ನು ಉತ್ತುಂಗ ಬದುಕಿನತ್ತ ಕರೆದೊಯ್ಯುವ ಮಹಾ ಕಾಯಕದಲ್ಲಿ ನಿರತರಾದವರು ಹರಿದಾಸರು. ಕನ್ನಡ ಸಾಹಿತ್ಯ ಲೋಕಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯದ ಮುಖೇನ ಸಮಾಜದ ಮೌಢ್ಯವನ್ನು ಬಯಲಿಗೆಳೆದು ಜಾತಿ, ಮತ, ಪಂಥಗಳನ್ನೆಲ್ಲಾ ಮೀರಿನಿಂತು ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಬಿತ್ತಿದವರಿವರು.

ಕನಕದಾಸರು ದಾಸ ಪಂಥದ ವಚನಕಾರರು ಮಾತ್ರವಲ್ಲ. ಎಲ್ಲ ಮತೀಯ ಬಂಧನಗಳಿಂದ ಪಾರಾಗಿ, ಸಾಮಾಜಿಕ ಕಟ್ಟು–ನಿಟ್ಟುಗಳಿಂದ ಮುಕ್ತರಾಗಿ, ಅಧ್ಯಾತ್ಮ ಸಿದ್ಧಿಯ ಶಿಖರವನ್ನೇರಿದ ವಿಶ್ವಬಂಧು. ಇದು ಸಾಹಿತ್ಯ ದಿಗ್ಗಜ, ಕರ್ನಾಟಕ ರತ್ನ ಡಾ. ದೇಜಗೌ ಅವರು ಕನಕದಾಸರನ್ನು ಬಣ್ಣಿಸಿರುವ ಬಗೆ. ಖಂಡಿತ ಇದರಲ್ಲೇನೂ ಉತ್ಪ್ರೇಕ್ಷೆಯಿಲ್ಲ. ಕನಕದಾಸ ಇಡೀ ವಿಶ್ವವನ್ನೇ ವ್ಯಾಪಿಸಿಕೊಂಡ ವಿಶ್ವಬಂಧು. ಅಷ್ಟೇ ಅಲ್ಲ, ವಿಶ್ವದ ಮಹಾಬೆಳಕೂ ಸಹ. ಹಿಂದುಳಿದ ಕುರುಬ ಕುಲದಲಿ ಜನಿಸಿ ಸಮಾಜದ ನಿಕೃಷ್ಟಕ್ಕೊಳಗಾದರೂ ಕುಲದ ಕುಲವೆನ್ನುತಿಹರು ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ... ಆತ್ಮ ಯಾವ ಕುಲ ಜೀವ ಯಾವ ಕುಲ... ಎನ್ನುತ್ತಲೇ ಇಡೀ ಜಗತ್ತಿಗೆ ಜಾಗೃತಿಯ ಜ್ಯೋತಿ ಬೆಳಗಿ ಉತ್ಕೃಷ್ಟತೆಯ ಉತ್ತುಂಗಕ್ಕೇರಿ ವಿಶ್ವಮಾನವರಾದವರು.

ಅವಿಭಜಿತ ಧಾರವಾಡ ಜಿಲ್ಲೆಯ ಬಾಡ ಗ್ರಾಮದಲ್ಲಿ ಬೀರಪ್ಪ ಮತ್ತು ಬಚ್ಚಮ್ಮ ದಂಪತಿಯ ಪುತ್ರರಾಗಿ ಜನಿಸಿದ ಕನಕದಾಸರು ನೆಲೆಸಿದ್ದು ಅವರ ಆರಾಧ್ಯ ದೈವ ಆದಿಕೇಶವನ ಸನ್ನಿಧಿ ಕಾಗಿನೆಲೆಯಲ್ಲಿ. ಇವರ ಮೂಲ ಹೆಸರು ತಿಮ್ಮಪ್ಪ. ತಿಮ್ಮಪ್ಪನಾಯಕನೆಂದೂ ಕರೆಸಿಕೊಳ್ಳುತ್ತಿದ್ದರು. ವಿಭೂತಿ ಧರಿಸಿ ಶೈವಧರ್ಮ ಅನುಸರಿಸಿದ್ದರೂ ಇವರಿಗೆ ತಿರುಪತಿ ತಿಮ್ಮಪ್ಪನಲ್ಲಿ ಅಪಾರ ಭಕ್ತಿ. ತಂದೆ ಬೀರಪ್ಪ ವಿಜಯನಗರ ಸಾಮ್ರಾಜ್ಯದಲ್ಲಿ ಬಾಡ ಹಾಗೂ ಬಂಕಾಪುರಗಳ ಸುತ್ತಮುತ್ತಲಿನ ಎಪ್ಪತ್ತೆಂಟು ಗ್ರಾಮಗಳ ಪ್ರದೇಶಕ್ಕೆ ಮಾಂಡಲೀಕರಾಗಿದ್ದರು. ತನ್ನ ರಾಜನಿಷ್ಠೆ, ಪರಾಕ್ರಮ, ಪ್ರಾಮಾಣಿಕತೆ, ದಕ್ಷತೆ ಹಾಗೂ ಕರ್ತವ್ಯಪಾಲನೆಯಿಂದ ವಿಜಯನಗರದ ಅರಸರ ವಿಶ್ವಾಸಗಳಿಸಿದ್ದ ಬೀರಪ್ಪ ಜನಮನ್ನಣೆ ಪಡೆದ ಜನನಾಯಕನಾಗಿದ್ದ. ಆದರೆ, ಬೀರಪ್ಪ–ಬಚ್ಚಮ್ಮ ದಂಪತಿಗೆ ಎಲ್ಲ ಭಾಗ್ಯಗಳಿದ್ದರೂ ಸಹ ಬಹಳ ವರ್ಷಗಳ ಕಾಲ ಮಕ್ಕಳ ಭಾಗ್ಯವಿರಲಿಲ್ಲ. ಈ ದಂಪತಿಗಳು ತಮ್ಮ ನೆಚ್ಚಿನ ದೈವ ತಿರುಪತಿಯ ತಿಮ್ಮಪ್ಪನ ಸನ್ನಿಧಿಗೆ ತೆರಳಿ ಭಕ್ತಿಯಿಂದ ಸೇವೆಗೈದು ಹರಕೆ ಹೊತ್ತ ಫಲವಾಗಿ ಅವರಿಗೆ ಒಂದು ಮುದ್ದಾದ ಗಂಡು ಮಗುವಿನ ಜನನವಾಯಿತು. ಹೀಗೆ ಹುಟ್ಟಿದ ಮಗನಿಗೆ ತಿಮ್ಮಪ್ಪ ಎಂದೇ ನಾಮಕರಣ ಮಾಡಿದರು.

ಎಪ್ಪತ್ತೆಂಟು ಗ್ರಾಮಗಳ ನಾಡಗೌಡಿಕೆಯ ನಾಯಕರಾಗಿದ್ದ ತಂದೆ ಬೀರಪ್ಪ ತಮ್ಮ ವೀರವಂಶಕ್ಕೆ ತಕ್ಕಂತೆ ತಮ್ಮ ವಂಶೋದ್ಧಾರಕ ಪುತ್ರ ತಿಮ್ಮಪ್ಪನಿಗೆ ಕುದುರೆಸವಾರಿ, ಕುಸ್ತಿ, ಕತ್ತಿವರಸೆ, ಬೇಟೆ ಮುಂತಾದ ಯುದ್ಧಕಲೆಗಳು ಸೇರಿದಂತೆ ಓದು, ಬರಹ, ಸಾಹಿತ್ಯ, ಸಂಗೀತ, ಕಾವ್ಯ ಒಳಗೊಂಡಂತೆ ಸಕಲ ಕಲಾವಿದ್ಯೆ–ವಿದ್ವತ್ತನ್ನು ಕಲಿಸಿಪಾರಂಗತರಾಗಿಸಿದ್ದರು. ತಿಮ್ಮಪ್ಪ ಯೌವನಾವಸ್ಥೆಗೆ ಬರುವ ವೇಳೆಗೆ ತಂದೆ ಬೀರಪ್ಪ ತೀರಿಕೊಂಡಿದ್ದರಿಂದ ತಂದೆಯ ಮಾಂಡಲೀಕ ಸ್ಥಾನವನ್ನು ಅಲಂಕರಿಸಿದ ತಿಮ್ಮಪ್ಪ ತಾಯಿಯ ನೆರಳಿನಲ್ಲಿ ತಂದೆಯ ವೃತ್ತಿಯನ್ನು ಮುಂದುವರಿಸಿದ. ಒಮ್ಮೆ ಒಂದೆಡೆ ಭೂಮಿ ಅಗೆಯುತ್ತಿದ್ದಾಗ ತಿಮ್ಮಪ್ಪನಿಗೆ ಏಳು ಕೊಪ್ಪರಿಗೆ ಧನ–ಕನಕಗಳು ದೊರೆತು ಅದನ್ನೆಲ್ಲಾ ಉದಾರವಾಗಿ ಅವನು ಗ್ರಾಮಗಳ ಉದಾತ್ತ ಕಾರ್ಯಗಳಿಗೆ ವಿನಿಯೋಗಿಸಿದ. ಭೂಮಿಯಲ್ಲಿ ಅವನಿಗೆ ಕನಕರಾಶಿ ದೊರೆತು ಅದನ್ನು ಸದ್ಬಳಕೆ ಮಾಡಿದ್ದರಿಂದ ಅಲ್ಲಿಂದ ಮುಂದೆ ತಿಮ್ಮಪ್ಪ ಕನಕರಾಗಿ, ಕನಕಪ್ಪರಾಗಿ, ಕನಕನಾಯಕರಾಗಿ ಪ್ರಸಿದ್ಧಿ ಪಡೆದರು.

ಕನಕನಾಯಕರಿಗೆ ಅದಾಗಲೇ ವಿವಾಹವಾಗಿತ್ತು. ಒಂದು ಕಡೆ ವೈವಾಹಿಕ ಬದುಕು ಸಾಗುತ್ತಿರುವಂತೆಯೇ ಮತ್ತೊಂದು ಕಡೆ ಕುಟುಂಬದ ಆಧಾರ ಸ್ತಂಭವಾಗಿದ್ದ ತಾಯಿ ಬಚ್ಚಮ್ಮ ತೀರಿಕೊಂಡಳು. ದುರಂತವೆಂದರೆ ಕೆಲವೇ ಕಾಲದಲ್ಲಿ ಪ್ರೀತಿಯ ಸತಿಯೂ ಸಾವನ್ನಪ್ಪಿದಾಗ ಪ್ರಾಪಂಚಿಕ ಜೀವನ ಕನಕನಾಯಕರಿಗೆ ಮುಳ್ಳಿನ ಹಾಸಿಗೆಯಂತಾಯಿತು. ವಿರಕ್ತ ಭಾವ ಆವರಿಸಿತು. ಇಂತಹ ಮಾನಸಿಕ ತೊಳಲಾಟದ ಸಂದರ್ಭದಲ್ಲೇ ಒಂದು ಘೋರಯುದ್ಧ ಸಂಭವಿಸಿ ಅದರಲ್ಲಿ ಹೋರಾಡಿದ ಕನಕನಾಯಕರಿಗೆ ಮಾರಣಾಂತಿಕ ಪೆಟ್ಟುಬಿದ್ದು, ಯಾವುದೋ ಅವ್ಯಕ್ತ ದಿವ್ಯ ಚೇತನಶಕ್ತಿಯೊಂದು ಅವರನ್ನು ಆವರಿಸಿದಂತೆ ಭಾಸವಾಯಿತು. ಈ ಘಟನೆಯ ನಂತರ ಲೌಕಿಕ ಬದುಕಿನ ಬಗ್ಗೆ ಸಂಪೂರ್ಣ ಆಸಕ್ತಿ ಕಳೆದುಕೊಂಡು ಅಲೌಕಿಕ ಬದುಕಿನತ್ತ ಹೆಜ್ಜೆಯಿರಿಸಿದ ಕನಕ 'ದಾಸ'ರಾಗಿ ಪರಿವರ್ತನೆ ಗೊಂಡದ್ದು ಇವರ ಬದುಕಿನಲ್ಲಿ ಜರುಗಿದ ಮಹತ್ತರವಾದ ಚಾರಿತ್ರಿಕ ಘಟನೆ. ಅಲ್ಲಿಂದ ಆರಂಭವಾಯಿತು ಹರಿನಾಮ ಸ್ಮರಣೆಯಲ್ಲಿ ದಾಸ ಸಾಹಿತ್ಯದ ಮೂಲಕ ವೈಚಾರಿಕ ಪ್ರಭೆಯೊಡನೆ ಜಗತ್ತಿನ ಕತ್ತಲೆ ಕಳೆಯುವ ಕನಕದಾಸರ ಬೆಳಕಿನ ಪಯಣ.

ದಾಸಾನುದಾಸರಾಗಿ ಯತಿವರ್ಯ ವ್ಯಾಸರಾಯರ ಪಟ್ಟ ಶಿಷ್ಯರಾಗಿ ಮಧ್ವತತ್ವಶಾಸ್ತ್ರವನ್ನು ಕರತಲಾಮಲಕ ಮಾಡಿಕೊಂಡಿದ್ದ ಕನಕದಾಸರಿಗೆ ಉಡುಪಿಯ ಶ್ರೀಕೃಷ್ಣನೆಂದರೆ ಪಂಚಪ್ರಾಣ ಹಾಗೂ ಅಪಾರ ಭಕ್ತಿ. ಜಾತಿ, ಮತ, ಧರ್ಮ, ಕುಲಗಳ ಭೇದ–ಭಾವಗಳ ನಡುವೆ ಮೌಢ್ಯ ಕಂದಾಚಾರದಂತಹ ಅನಿಷ್ಟಪದ್ಧತಿಗಳು ಸೇರಿದಂತೆ ಸಮಾಜದಲ್ಲಿರುವ ಎಲ್ಲಾ ತರಹದ ಕೆಡುಕುಗಳ ಅಂಧಾನುಕರಣೆಯ ಕಳೆಗಳನ್ನು ಕಿತ್ತೆಸೆದು ಸಮಾನ ಸಮಾಜದ ಬೆಳೆ ಬೆಳೆಯಲು ದಾಸ ಸಾಹಿತ್ಯವನ್ನು ಖಡ್ಗ ಮಾಡಿಕೊಂಡ ಕನಕದಾಸರು ಮುಂಡಿಗೆಗಳು ಎಂಬ ಹೊಸ ಸಾಹಿತ್ಯ ಪ್ರಕಾರವನ್ನು ಸೃಷ್ಟಿಸಿದರು. ಇದು ಅವರ ಪ್ರಯೋಗಶೀಲತೆಗೆ ಸಾಕ್ಷಿ, ಮಾತ್ರವಲ್ಲ ಅವರ ಪ್ರತಿಭಾ ಸಂಪನ್ನತೆ ಹಾಗೂ ಪ್ರತಿಭಾ ಸಾಮರ್ಥ್ಯಕ್ಕೆ ಕಣ್ಣೆದುರಿನ ಕನ್ನಡಿಯಾಗಿದೆ. ಕೀರ್ತನೆ ಮತ್ತು ಕಾವ್ಯಗಳಿಂದ ತಳ ಸಮುದಾಯದ ತಲ್ಲಣಗಳಿಗೆ ಧ್ವನಿಕೊಟ್ಟ ಕನಕದಾಸರು ಅಧ್ಯಾತ್ಮ ಮತ್ತು ಸಾಮಾಜಿಕ ಚಿಂತನೆಗಳನ್ನು ಒಟ್ಟೊಟ್ಟಿಗೆ ಕಟ್ಟಿ ಕೊಟ್ಟವರು. ಕಾಲಿಗೆ ಚಕ್ರಧರಿಸಿದವರಂತೆ ಸಮಾಜದೆಲ್ಲೆಡೆ ನಡೆದಾಡುತ್ತಲೇ ಚಲಿಸುವ ಮಹಾವಿಶ್ವಜ್ಞಾನಕೋಶವಾಗಿ ತಮ್ಮ ಕೀರ್ತನೆಗಳಿಂದ ಕ್ರಾಂತಿಯ ಬೆಳಕು ಚೆಲ್ಲಿದ ಕನಕದಾಸರು ನಡೆದಾಡಿದ ಕನ್ನಡ ನೆಲವೆಲ್ಲಾ ಪುಣ್ಯಭೂಮಿಯೇ ಸರಿ!

ಬದುಕಿನ ಸತ್ವ–ಸತ್ಯ–ಸಾರ್ಥಕ್ಯ ಮತ್ತು ಸಾರವನ್ನು ಅಚ್ಚ ಸರಳಗನ್ನಡದಲ್ಲಿ ಬರೆದು, ತೆರೆದಿಟ್ಟು ಮನುಕುಲದ ಒಳಗಣ್ಣು ತೆರೆಸುತ್ತಾ ಎಲ್ಲರಿಗೂ ದಾಸಾಮೃತ ಉಣಬಡಿಸುತ್ತಾ ಕನಕದಾಸರು ಲೋಕಸಂಚಾರಗೈದ ಪುಣ್ಯ ಸ್ಥಳಗಳು ಅನೇಕ. ಬಾಡ, ಬಂಕಾಪುರ, ಕಮ್ಮಾರು, ಉಮ್ಮತ್ತೂರು, ಕಾಗಿನೆಲೆ, ಉಡುಪಿ, ಇಂಗಳಗೊಂದಿ, ಮದನಪಲ್ಲಿ, ಕುಂದನೂರು, ವ್ಯಾಸನಸಮುದ್ರ, ಕೋಣನತೂಬು, ತಿರುಮಕೂಡಲು ನರಸೀಪುರ, ಬನ್ನೂರು, ಸೋಸಲೆ, ರಂಗಸಮುದ್ರ, ತಲಕಾಡು, ಮೈಸೂರು, ಕದರಮಂಡಲಗಿ, ಶ್ರೀರಂಗಂ, ಮಹದೇವಪುರ, ಶ್ರೀರಂಗಪಟ್ಟಣ, ಕನಕಗಿರಿ, ಮೇಲುಕೋಟೆ, ತೊಂಡನೂರು, ಹಂಪೆ, ಮಳೂರು, ನಂಜನಗೂಡು, ಬೇಲೂರು, ವೇಲಾಪುರಿ, ತಿರುಪತಿ... ಹೀಗೆ ನಾಡಿನ ಉದ್ದಗಲಕ್ಕೂ, ನಾಡಿನಾಚೆಗೂ ಸಂಚರಿಸಿ ಆದಿಕೇಶವನ ಭಜಿಸುತ್ತಾ ತಮ್ಮ ಜೀವಿತದ ಪ್ರತಿಕ್ಷಣವೂ ಸಮಾಜದ ಅಂಕು–ಡೊಂಕುಗಳನ್ನು ತಿದ್ದುತ್ತಾ ಸಮಾಜ ಪರಿವರ್ತನಾ ಚಕ್ರವನ್ನು ತಿರುಗಿಸಿದ ಶ್ರೇಷ್ಠ ಸಮಾಜವಾದಿ ಕನಕದಾಸರು ಅಕ್ಷರಶಃ ಕನಕಸುಧೆಯನ್ನು ಹರಿಸಿದವರು.

ಹೆಗಲಮೇಲೊಂದು ಕುರಿಯ ತುಪ್ಪಟದಿಂದ ನೇಯ್ದ ಕಂಬಳಿ, ಹಸಿವಾದಾಗ ಉಣಲೊಂದು ಮರದ ತಣಿಗೆ, ಮಂಡಿ ಮಟ್ಟಕ್ಕೆ ಉಟ್ಟ ಪಂಚೆ, ವಿಶಾಲವಾದ ಹಣೆಯಲ್ಲಿ ತಿಲಕ, ತಲೆಯಿಂದ ಹಿಂಭಾಗಕ್ಕೆ ಇಳಿಬಿದ್ದಿರುವ ಗುಂಗುರುಗುಟ್ಟಿದ ಕೂದಲು, ಸೊಂಪಾಗಿ ಮುಖದ ಮೇಲೆ ಬೆಳೆದು ನಿಂತ ಗಡ್ಡ–ಮೀಸೆ, ಕೊರಳಲ್ಲಿ ಮಣಿಮಾಲೆ, ಕೈಯಲ್ಲಿ ತಂಬೂರಿ–ತಾಳ. ಇದು ಎಂಥವರೂ ಎರಡೂ ಕೈಯೆತ್ತಿ ಮುಗಿಯುವಂತಹ ಮಹಾತೇಜಸ್ಸಿನ ಕನಕದಾಸರ ಬಾಹ್ಯರೂಪ. ಅಂತರಂಗವೋ ಅಣುಅಣುವಿನಲ್ಲೂ ಭಕ್ತಿ ತುಂಬಿದ ಕನಕ ದೀಪೋತ್ಸವದ ದೇವಸಾಗರ. ಆದಿಕೇಶವ ನೊಲಿದ ಆತ್ಮಜ್ಯೋತಿಯ ಮಹಾಬೆಳಕಿನ ಆಗರ. ಸಮಾಜ ಸುಧಾರಣೆಗಾಗಿ ಸದಾ ಮಿಡಿಯುವ ಮಹಾಮನಸ್ಸಿನ ಕನಕಧಾರ. ಕನಕದಾಸರೊಡನೆ ಕನ್ನಡದ ದಾಸ ಸಾಹಿತ್ಯದ ಅಶ್ವಿನಿದೇವತೆಯೆಂದು ಕರೆಸಿಕೊಂಡ ಮತ್ತೋರ್ವ ದಾಸಶ್ರೇಷ್ಠ ಪುರಂದರದಾಸರು ಶ್ರೀಹರಿಪಾದ ಸೇರಿದಾಗ ಅವರ ತಂಬೂರಿಯನ್ನು ಕನಕದಾಸರು ತಿರುಪತಿಗೆ ಕೊಂಡೊಯ್ದು ಶ್ರೀನಿವಾಸನಿಗೊಪ್ಪಿಸಿದ್ದರಂತೆ. ಅಂಥಾ ಸ್ನೇಹ–ಭಕ್ತಿ ಕನಕದಾಸರದ್ದು.

ಕರ್ನಾಟಕದಲ್ಲಿ ಹರಿದಾಸ ಪರಂಪರೆಗೆ ಸುಮಾರು ಐದು ಶತಮಾನಗಳಿಗೂ ಹೆಚ್ಚಿನ ಬಹುದೊಡ್ಡ ಇತಿಹಾಸವಿದೆ. ಶಿವದಾಸರ ನಂತರದಲ್ಲಿ ಪ್ರಕಾಶಗೊಂಡು ಪ್ರಚಾರಕ್ಕೆ ಬಂದ ಈ ಪರಂಪರೆ ವೈಚಾರಿಕ ಪ್ರಜ್ಞೆಯ ಕನಕದಾಸರಂಥ ಮಹಾತ್ಮರಿಂದಾಗಿ ಸಮಾಜದಲ್ಲಿನ ಮೇಲು–ಕೀಳು, ಜಾತಿ–ಧರ್ಮ, ಮತ–ಪಂಥಗಳ ಕರ್ಮಠ ಸಿದ್ಧಾಂತಕ್ಕೆ ತಿಲಾಂಜಲಿ ಇಟ್ಟಿತು. ಭಕ್ತಿಯೇ ಮೈವೆತ್ತ ದೇವಸ್ತುತಿಯೇ ಪ್ರಧಾನವೆನಿಸಿದ್ದ ಭಕ್ತಿ ಪರಂಪರೆಯ ಕಾಲದಲ್ಲಿ ಬಂದ ಕನಕದಾಸರು ತಮ್ಮ ವೈಚಾರಿಕ ನಿಲುವು ಮತ್ತು ಪ್ರತಿಭಟನಾ ಮನೋಭಾವದಿಂದ ದಾಸ ಸಾಹಿತ್ಯಕ್ಕೆ ವೈಚಾರಿಕ ಪ್ರಭಾವಳಿ ನೀಡಿದವರು. ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸ ಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು.

ಜೀವನದಲ್ಲಿ ನ್ಯಾಯ, ನೀತಿ, ಸತ್ಯ, ನಿಷ್ಠೆ ಹಾಗೆಯೇ ಸಾಹಿತ್ಯದಲ್ಲಿ ಜೀವನ ಮೌಲ್ಯಗಳನ್ನು ತತ್ವಗಳಾಗಿ ಅಡಗಿಸಿ, ಜನಸಾಮಾನ್ಯರನ್ನು ಉತ್ತುಂಗ ಬದುಕಿನತ್ತ ಕರೆದೊಯ್ಯುವ ಮಹಾ ಕಾಯಕದಲ್ಲಿ ನಿರತರಾದವರು ಹರಿದಾಸರು. ಕನ್ನಡ ಸಾಹಿತ್ಯ ಲೋಕಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯದ ಮುಖೇನ ಸಮಾಜದ ಮೌಢ್ಯವನ್ನು ಬಯಲಿಗೆಳೆದು ಜಾತಿ, ಮತ, ಪಂಥಗಳನ್ನೆಲ್ಲಾ ಮೀರಿನಿಂತು ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಬಿತ್ತಿದವರಿವರು.

ಇಂಥ ಹರಿದಾಸರಲ್ಲಿ ಕನಕದಾಸರು ಬಹುಮುಖ್ಯರು. ಬಹಳ ಮಾನ್ಯರು. ಬದುಕಿಗೊಂದು ಮೌಲ್ಯವಿತ್ತು, ಭಾಷೆಗೊಂದು ಪಕ್ವತೆಯನ್ನು ತಂದು ಕೊಟ್ಟು ಕನ್ನಡ ಸಾಹಿತ್ಯಕ್ಕೆ, ಭಾರತೀಯ ಸಂಸ್ಕೃತಿಗೆ ಅತ್ಯಮೂಲ್ಯ ಕಾಣಿಕೆ ನೀಡಿರುವ ಸಂತ ಕವಿ, ದಾಸ ಶ್ರೇಷ್ಠ ಕನಕದಾಸರು ಮಹತ್ವದ ಸಾಧಕರಾಗಿದ್ದಾರೆ. ಇವರ ಸಾಹಿತ್ಯ ರಚನೆಯಲ್ಲಿ ವೈವಿಧ್ಯಮಯ ಬದುಕಿನ ಸಂಕೀರ್ಣ ಅನುಭವ ಹಾಸು ಹೊಕ್ಕಿದ್ದು ಅಲಂಕಾರ, ಪ್ರತಿಮೆ, ರೂಪಕ, ಸಂಕೇತಗಳು ಕೀರ್ತನೆಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಸಹಜವಾಗಿ ಮೂಡಿಬಂದಿವೆ. ಭಕ್ತಿ, ಅಧ್ಯಾತ್ಮ, ಅನುಭವಗಳ ಜೊತೆಗೆ ಸಾಮಾಜಿಕ ಪ್ರಜ್ಞೆ, ವಿಡಂಬನೆ, ಜಾತ್ಯತೀತ ಪರಿಕಲ್ಪನೆಗಳಿಂದ ಕನಕದಾಸರ ಕೀರ್ತನೆಗಳು ಇವತ್ತಿಗೂ ಪ್ರಸ್ತುತವೆನಿಸುತ್ತವೆ. ಹಾಗೆಯೇ ಸದ್ದಿಲ್ಲದೆಯೇ ಸಮಾಜವನ್ನು ತಿದ್ದಿ ತೀಡುವ ಕೈಂಕರ್ಯ ಮಾಡುತ್ತಿವೆ. ಕನಕದಾಸರ ವೈಶಿಷ್ಟ್ಯವೆಂದರೆ ತಮ್ಮ ಸಮಕಾಲೀನ ಹರಿದಾಸರಂತೆ ನಡೆದ ದಾರಿಯಲ್ಲೇ ನಡೆಯದೆ ಏಕ ಮುಖಿಯಾಗಿ ಹರಿಯನ್ನು ಬರೀ ಹೊಗಳದೆ ಆರು ಬದುಕಿದರಯ್ಯ ಹರಿ ನಿನ್ನ ನಂಬಿ ಎಂದು ವೈಚಾರಿಕ ಪ್ರಜ್ಞೆಯಿಂದ ತನ್ನ ಆರಾಧ್ಯ ದೈವ ಹರಿಯನ್ನೂ ಬಿಡದೆ ಪ್ರಶ್ನಿಸಿದ್ದಾರೆ. ಹೀಗೆ ವಿಚಾರವಂತರಾಗಿ, ವಿವೇಕಶೀಲರಾಗಿ ವೈಚಾರಿಕ ನೆಲೆಯಲ್ಲಿ ನಡೆದ ಕಾರಣಕ್ಕಾಗಿ ಇವರು ಇತರೇ ದಾಸರಿಗಿಂತ ಭಿನ್ನವಾಗಿದ್ದು ದಾಸ ಪರಂಪರೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಪ್ರವೇಶಗಳೆರಡೂ ಪ್ರಮುಖ ಘಟ್ಟಗಳು. ಕಬ್ಬಿಣದ ಕಡಲೆಯಂತಿದ್ದ ಕಾವ್ಯಗಳನ್ನೇ ಕಂಡಿದ್ದ ಜನಸಾಮಾನ್ಯರಿಗೆ ಸುಲಿದ ಬಾಳೆಹಣ್ಣಿನಂತಹ ಸಾಹಿತ್ಯ ಸುಳಿದುದೇ ಈ ಹೊಸ ಸಾಹಿತ್ಯ ಪ್ರಕಾರಗಳಿಂದ. ವಿಶೇಷವಾಗಿ ಇಲ್ಲಿ ಕನಕದಾಸರ ಕೀರ್ತನೆಗಳು ಜನಮಾನಸಕ್ಕೆ ಬಹು ಹತ್ತಿರವಾಗಿ ಅಷ್ಟೇ ಪ್ರಿಯವಾದದ್ದು ದಾಸ ಸಾಹಿತ್ಯದ ಹೆಗ್ಗಳಿಕೆಯೆಂದೇ ಹೇಳಬಹುದು. 12ನೇ ಶತಮಾನದಲ್ಲಿ ಶಿವಶರಣರು ವಚನ ಸಾಹಿತ್ಯ ಪ್ರಕಾರದ ಮೂಲಕ ಜನಮನಮುಟ್ಟಲು ವಚನ ಸಾಹಿತ್ಯ ಸೃಷ್ಟಿ ಮಾಡಿದರೆ, ಇದರ ನಂತರ 13ನೇ ಶತಮಾನದಲ್ಲಿ ನರಹರಿತೀರ್ಥ ದಾಸರಿಂದ ಆರಂಭಗೊಂಡ ದಾಸ ಸಾಹಿತ್ಯ ಮುಂದಿನ ನಾಲ್ಕೈದು ಶತಮಾನಗಳ ಕಾಲ ಜನ ಸಾಮಾನ್ಯರ ಮನೆ–ಮನಗಳಲ್ಲಿ ರಾರಾಜಿಸಿತು. ಇಲ್ಲಿ 16ನೇ ಶತಮಾನದಲ್ಲಿ ಬಾಳಿ ಬೆಳಗಿದ ದಾಸಶ್ರೇಷ್ಠದ್ವಯರಾದ ಕನಕ–ಪುರಂದರರ ಕಾಲವನ್ನು ದಾಸ ಸಾಹಿತ್ಯದ ಸುವರ್ಣಯುಗವೆಂದೇ ಕರೆಯಲಾಗುತ್ತದೆ. ಇವರಿಬ್ಬರನ್ನೂ ದಾಸ ಸಾಹಿತ್ಯದ ಅಶ್ವಿನಿ ದೇವತೆಗಳೆಂದೂ, ದಾಸ ಸಾಹಿತ್ಯಾಗಸದ ಎರಡು ನಕ್ಷತ್ರಗಳೆಂದು ಬಣ್ಣಿಸಲಾಗುತ್ತದೆ. ವಿಶೇಷವಾಗಿ ಕನಕದಾಸರನ್ನು ದಾಸ ಸಾಹಿತ್ಯದ ಧ್ರುವತಾರೆ ಎಂದೇ ಕರೆಯಲಾಗುತ್ತದೆ. ಅಂತೆಯೇ ದಾಸ ಸಾಹಿತ್ಯದ ಮೂಲಕ ಸಾಹಿತ್ಯವನ್ನು ಇನ್ನಷ್ಟು ಸರಳಗೊಳಿಸಿ ಕನ್ನಡ ಸಾಹಿತ್ಯಕ್ಕೆ ನಾವೀನ್ಯತೆ ತುಂಬಿದ ಕನಕದಾಸರನ್ನು ಹೊಸಗನ್ನಡ ಸಾಹಿತ್ಯ ಕೋಗಿಲೆ ಎಂದೂ ದಾಸ ಸಾಹಿತ್ಯ ಬನದ ಹಾಡು ಹಕ್ಕಿ ಎಂದೂ ಕರೆಯುವುದುಂಟು.

ಕನ್ನಡ ಸಾರಸ್ವತ ಪ್ರಪಂಚದಲ್ಲಿ 12ನೆಯ ಶತಮಾನದ ವಚನ ಸಾಹಿತ್ಯ ಮತ್ತು 16ನೇ ಶತಮಾನದ ದಾಸ ಸಾಹಿತ್ಯ ಹೆಚ್ಚು ಜನಮುಖಿ ಹಾಗೂ ಜೀವನ್ಮುಖಿಯಾಗಿ ಸೂಜಿಗಲ್ಲಿನಂತೆ ಜನಮನ ಸೆಳೆದಂಥವು. ದಾಸಸಾಹಿತ್ಯದ ಮೇರುವಾದ ಕನಕದಾಸರಂತೂ ವೈಚಾರಿಕ ದೀಪವಿಡಿದು ಜನತೆಯಲ್ಲಿ ಸಾಮಾಜಿಕ ಚಿಂತನ–ಮಂಥನ ನಡೆಸಿ ಕಾವ್ಯ ಮತ್ತು ಕೀರ್ತನೆಗಳ ಮುಖೇನ ಸಾಹಿತ್ಯ ಹಾಗೂ ಸಂಗೀತಕ್ಕೆ ಮಹತ್ತರ ಕಾಣಿಕೆ ನೀಡಿ ದಾಸಸಾಹಿತ್ಯದ ತೂಕವನ್ನು ಸಿರಿವಂತಿಕೆಯನ್ನು ದುಪ್ಪಟ್ಟುಗೊಳಿಸಿದವರು. ತನ್ಮೂಲಕ ಸಮಾಜ ಸುಧಾರಣೆಗಾಗಿ ಶ್ರಮಿಸಿದವರು.

ಜಾತಿ, ಮತ, ಕುಲ ಸಮಸ್ಯೆಯಿಂದಾಗಿ ಜಾಗೃತಿಗೊಂಡ ಕನಕರು ಈ ಕಾರಣಕ್ಕಾಗಿಯೇ ತನ್ನದೇ ಆದ ಜ್ಞಾನಮಾರ್ಗ ಪರಂಪರೆ ಹುಟ್ಟುಹಾಕಿ ಕಾಲಜ್ಞಾನಿಯಾಗಿ ಬೆಳೆದದ್ದು, ಎಲ್ಲದಕ್ಕೂ ತಮ್ಮ ಬರಹಗಳಿಂದಲೇ ಉತ್ತರಿಸಿ ಸಮಾಜ ಸುಧಾರಿಸಿದ್ದು, ಯಾವ ಅಬ್ಬರ–ಆಡಂಬರಗಳಿಲ್ಲದೆ ಹೇಳುವುದೆಲ್ಲವನ್ನೂ ಸಮಾಧಾನ ಚಿತ್ತದಿಂದಲೇ ಹೇಳಿ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದು. ತಿಮ್ಮಪ್ಪ ತಿಮ್ಮಪ್ಪ ನಾಯಕರಾಗಿ, ಕನಕಪ್ಪ, ಕನಕನಾಯಕರಾಗಿ ಕಡೆಗೆ ಕನಕದಾಸರಾಗಿ ವೈದಿಕ ಪಂಡಿತರ ಸಂಸ್ಕೃತ ಭಾಷೆ ಮತ್ತು ಪುರೋಹಿತರ ಮಡಿವಂತಿಕೆಗಳಿಗೆ ಸಡ್ಡುಹೊಡೆದದ್ದು ಈಗ ಇತಿಹಾಸ. ಶೂರ, ಧೀರ, ದಂಡನಾಯಕ, ಸುವಿಹಾರಿ, ಜ್ಞಾನವಂತ, ವೈದ್ಯ, ನಿರೂಪಕ, ಭಕ್ತ, ಕವಿ, ಚಿಂತಕ, ಸಮಾಜವಿಜ್ಞಾನಿ, ಸ್ವಯಂಪರಂಪರೆಯ ಸೃಷ್ಟಿಕರ್ತ ನಮ್ಮ ಕನಕದಾಸ ಕನ್ನಡನಾಡು ಕಂಡ, ಭಾರತದೇಶ ಕಂಡ, ಅಷ್ಟೇ ಏಕೆ ಈ ಜಗತ್ತು ಕಂಡ ಮಹಾನ್ ಸಮಾಜ ಸುಧಾರಕರೇ ಸರಿ.

ಕೆಆರ್‌ಎಸ್ ಹಿನ್ನೀರಿನ ಪ್ರದೇಶದ ಒತ್ತುವರಿ ತೆರವಿಗೆ ಮೈಸೂರು, ಮಂಡ್ಯ ಜಿಲ್ಲಾಧಿಕಾರಿಗಳಿಗೆ ಡಿಸಿಎಂ ಆದೇಶ

ತಕ್ಷಣ ಸರ್ವೆ ಮಾಡಿಸಿ ಕ್ರಮಕ್ಕೆ ಡಿಸಿಗಳೊಂದಿಗೆ ಕಾವೇರಿ ನೀರಾವರಿ ನಿಗಮದ ಎಂಡಿಗೂ ಸೂಚನೆ

ಬೆಂಗಳೂರು, ನ.7(ಎಂಕೆ)– ಕೃಷ್ಣರಾಜಸಾಗರ ಅಣೆಕಟ್ಟೆ(ಕೆಆರ್‌ಎಸ್)ಯ ಹಿನ್ನೀರಿನ ಪ್ರದೇಶಗಳಲ್ಲಿ ಭೂ ಒತ್ತುವರಿ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸರ್ವೆ ಮಾಡಿ ತಕ್ಷಣ ಒತ್ತುವರಿ ತೆರವುಗೊಳಿಸಿ, ಗಡಿ ಕಲ್ಲುಗಳನ್ನು ನೆಟ್ಟು ವರದಿ ನೀಡುವಂತೆ ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮೈಸೂರು ಮತ್ತು ಮಂಡ್ಯ ಜಿಲ್ಲಾಧಿಕಾರಿ ಹಾಗೂ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿಸಿದ್ದಾರೆ.

ಕೆಆರ್‌ಎಸ್ ಹಿನ್ನೀರಿನ ಪ್ರದೇಶದಲ್ಲಿ ಐಷಾರಾಮಿ ರೆಸಾರ್ಟ್‌ಗಳ ನಿರ್ಮಾಣ ಹಾಗೂ ಭೂ ಒತ್ತುವರಿಯಿಂದಾಗಿ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯ ಕುಂಠಿತಗೊಳ್ಳುತ್ತಿದೆ. ಆದ್ದರಿಂದ ಒತ್ತುವರಿ ತೆರವುಗೊಳಿಸಲು ಸಂಬಂಧಪಟ್ಟ ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡುವಂತೆ ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ ಹಾಗೂ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದರು.

ಕೃಷ್ಣರಾಜಸಾಗರ ಜಲಾಶಯದ ಹಿನ್ನೀರಿನ ಪ್ರದೇಶವು 26,640 ಎಕರೆಗಳಿದ್ದು, ಜಲಾಶಯದಿಂದ ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ಸುಮಾರು 2.76 ಲಕ್ಷ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ನೀಡಲಾಗುತ್ತಿದೆ. ಮೈಸೂರು ನಗರಕ್ಕೆ 1.579 ಟಿಎಂಸಿ ಹಾಗೂ ಬೆಂಗಳೂರು, ಇನ್ನಿತರ ನಗರಗಳಿಗೆ ಕುಡಿಯುವ ನೀರಿಗಾಗಿ ಉಪಯೋಗಿಸಲಾಗುತ್ತಿದೆ. ವಿದ್ಯುತ್ ಉತ್ಪಾದನಾ ಘಟಕಗಳಿಗೂ ನೀರನ್ನು ಬಳಕೆ ಮಾಡಲಾಗುತ್ತದೆ.

ಆದರೆ ಹಿನ್ನೀರಿನ ಪ್ರದೇಶದಲ್ಲಿ ಭೂ ಒತ್ತುವರಿ ಆಗುತ್ತಿರುವುದರಿಂದ ನೀರಿನ ಸಂಗ್ರಹ ಸಾಮರ್ಥ್ಯ ಕುಂಠಿತವಾಗಲಿದ್ದು, ಬರಬರುತ್ತಾ ನೀರಿನ ಸಮಸ್ಯೆ ಉಲ್ಬಣಿಸಲಿದೆ. ಹೀಗಾಗಿ ಸಂಬಂಧಪಟ್ಟ ಜಿಲ್ಲಾಧಿಕಾ



ಡಿ.ಕೆ.ಶಿವಕುಮಾರ್

ರಿಗಳಿಗೆ, ಕಂದಾಯ ಇಲಾಖೆ, ಭೂ ದಾಖಲೆ ಇಲಾಖೆ, ಪ್ರವಾಸೋದ್ಯಮ ಇಲಾಖೆ ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ವತಿಯಿಂದ ಸರ್ವೆ ಕಾರ್ಯ ನಡೆಸಿ ಒತ್ತುವರಿ ಇದ್ದಲ್ಲಿ ಅದನ್ನು ತೆರವುಗೊಳಿಸಲು, ಅಣೆಕಟ್ಟೆಯ 130 ಅಡಿಯ ಕಾಂಟೋರ್ ಗಡಿಭಾಗಕ್ಕೆ ಶಾಶ್ವತವಾಗಿ ಗಡಿ ಕಲ್ಲುಗಳನ್ನು, ಸೂಚನಾ ಫಲಕಗಳನ್ನು ಅಳವಡಿಸಲು ಸೂಕ್ತ ನಿರ್ದೇಶನ ನೀಡಬೇಕು. ಹಿನ್ನೀರಿನ ಪ್ರದೇಶದಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳ ಬಗ್ಗೆ ಕಾವಲು ವ್ಯವಸ್ಥೆ ಕಲ್ಪಿಸಬೇಕು ಎಂದು ಮನವಿ ಮಾಡಿದ್ದರು. ಈ ಸಂಬಂಧ ಶಾಸಕರಿಬ್ಬರ ಮನವಿ ಹಾಗೂ ರೈತರ ಅನುಕೂಲತೆ ದೃಷ್ಟಿಯಿಂದ ಉಪಮುಖ್ಯಮಂತ್ರಿಗಳು, ಕೆಆರ್‌ಎಸ್ ಹಿನ್ನೀರಿನಲ್ಲಿ ಭೂ ಒತ್ತುವರಿ ತೆರವಿಗೆ ಆದೇಶಿಸಿದ್ದಾರೆ.

ರೆಸಾರ್ಟ್‌ಗಳಿಗೆ ಕಡಿವಾಣ: ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಶ್ರೀರಂಗಪಟ್ಟಣ ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷ ರಮೇಶ್ ಬಾಬು ಬಂಡಿಸಿದ್ದೇಗೌಡ, ಭೂ ಒತ್ತುವರಿ ತೆರವು ಆದೇಶದಿಂದ ಕೆಆರ್‌ಎಸ್ ಹಿನ್ನೀರಿನ ಪ್ರದೇಶದಲ್ಲಿ ತಲೆ ಎತ್ತಿರುವ ಹಾಗೂ ಎತ್ತಲಿರುವ ಅಕ್ರಮ ರೆಸಾರ್ಟ್‌ಗಳಿಗೆ ಕಡಿವಾಣ ಬಿದ್ದಂತಾಗಲಿದೆ. ಜೊತೆಗೆ ನೀರು ಸಂಗ್ರಹಣಾ ಸಾಮರ್ಥ್ಯ ಹೆಚ್ಚಾಗಿ ನಾಲೆಗಳ ಕೊನೆ ಭಾಗಕ್ಕೂ ನೀರು ಹರಿಯುವುದರಿಂದ ರೈತರ ಸಮಸ್ಯೆ ಕೂಡ ಬಗೆಹರಿಯಲಿದೆ ಎಂದಿದ್ದಾರೆ.

ಅಕ್ರಮ ಚಟುವಟಿಕೆಗಳಿಗೂ ಕಡಿವಾಣ ಹಾಕಬೇಕು: ಕೆಆರ್‌ಎಸ್ ಜಲಾಶಯಕ್ಕೆ 94 ವರ್ಷಗಳ ಇತಿಹಾಸವಿದೆ. ಬೆಂಗಳೂರು ಸೇರಿದಂತೆ ಮೈಸೂರು ಭಾಗದ ಜನತೆಗೆ ಕುಡಿಯುವ ನೀರಿನ ಜೊತೆಗೆ ಕೃಷಿ, ಕೈಗಾರಿಕಾ ಚಟುವಟಿಕೆಗಳಿಗೆ ಜಲಾಶಯದ ನೀರನ್ನು ಬಳಕೆ ಮಾಡಲಾಗುತ್ತಿದೆ. ಹಿನ್ನೀರಿನ ಪ್ರದೇಶದಲ್ಲಿ ಭೂ ಒತ್ತುವರಿ ಆದರೆ ನೀರಿನ ಸಂಗ್ರಹ ಕಡಿಮೆಯಾಗಿ ನೀರಾವರಿ ಸಮಸ್ಯೆ ಉದ್ಭವಿಸಲಿದೆ. ಭೂ ಒತ್ತುವರಿ ತೆರವಿನ ಜೊತೆಗೆ ಅಕ್ರಮ ಚಟುವಟಿಕೆಗಳಿಗೂ ಕಡಿವಾಣ ಬೀಳಬೇಕು. ಈ ಸಂಬಂಧ ಉಪಮುಖ್ಯಮಂತ್ರಿಗಳು ಹೊರಡಿಸಿರುವ ಆದೇಶದಿಂದ ರೈತರಿಗೆ ಅನುಕೂಲವಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದೇಶದಲ್ಲಿ ವರ್ಷಕ್ಕೆ 90ಲಕ್ಷ ಜನರಿಗೆ ಬೀದಿನಾಯಿ ಕಡಿತ

● ಪ್ರತಿ ವರ್ಷ 10ರಿಂದ 15 ಸಾವಿರ ಮಂದಿ ಸಾವು; ಸಂಸದ ಡಾ.ಸಿ.ಎನ್.ಮಂಜುನಾಥ್ ಆತಂಕ ● ಬೀದಿ ನಾಯಿಗಳ ನಿಯಂತ್ರಣಕ್ಕೆ ಕಾನೂನು ತಿದ್ದುಪಡಿ ಅಗತ್ಯ



ಮೈಸೂರಿನ ಜಯದೇವ ಆಸ್ಪತ್ರೆಗೆ ಶುಕ್ರವಾರ ಸಂಸದ ಡಾ. ಸಿ.ಎನ್.ಮಂಜುನಾಥ್ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು,ನ.7(ಎಂಟಿವೈ)– ಭಾರತದಲ್ಲಿ ಪ್ರತಿ ವರ್ಷ 90 ಲಕ್ಷ ಜನರಿಗೆ ಬೀದಿ ನಾಯಿಗಳು ಕಚ್ಚುತ್ತಿರುವುದು ಆತಂಕಕಾರಿಯಾಗಿದ್ದು, ಈ ನಾಯಿಗಳ ಜನನ ನಿಯಂತ್ರಣಕ್ಕೆ ಸಂಸತ್ತಿನಲ್ಲಿ ವಿಧೇಯಕ ಮಂಡಿಸಿ ಕಾನೂನಿಗೆ ತಿದ್ದುಪಡಿ ತರಬೇಕಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದರೂ ಆದ ಖ್ಯಾತ ಹೃದ್ರೋಗ ತಜ್ಞ ಡಾ. ಸಿ.ಎನ್.ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಯದೇವ ಆಸ್ಪತ್ರೆಗೆ ಶುಕ್ರವಾರ ಭೇಟಿ ನೀಡಿದ್ದ ಅವರು, ದೇಶದಲ್ಲಿ ನಾಯಿ ಕಚ್ಚಿ ಪ್ರತಿ ವರ್ಷ 10 ರಿಂದ 15 ಸಾವಿರ ಜನರು ಸಾಯುತ್ತಿದ್ದಾರೆ. ನಾಯಿಗಳ ಸಂಖ್ಯೆಯು ಹೆಚ್ಚಾಗುತ್ತಿದೆ. ಹಳೇ ಮಾಹಿತಿಯ ಪ್ರಕಾರ ದೇಶದಲ್ಲಿ ಬೀದಿ ನಾಯಿಗಳ ಸಂಖ್ಯೆ 1.5 ಕೋಟಿ ಇದೆ. 20 ಲಕ್ಷ ಸಾಕು ನಾಯಿಗಳಿವೆ. ಸೆಲೆಬ್ರಿಟಿಗಳು ರಸ್ತೆಗಳಲ್ಲಿ ತಿರುಗಾಡುವುದಿಲ್ಲ. ಆದರೂ ಬೀದಿ ನಾಯಿಗಳ ನಿಯಂತ್ರಣದ ವಿಚಾರದಲ್ಲಿ ವಿರೋಧ ಮಾಡುತ್ತಾರೆ. ಸಾಕು ನಾಯಿಗಳ ಮಾಲೀಕರು ಗಲಾಟೆ ಮಾಡುತ್ತಾರೆ ಎಂದು ವಿಷಾಧ ವ್ಯಕ್ತಪಡಿಸಿದರು.

ಪ್ರಾಣಿಗಳನ್ನು ಪ್ರೀತಿಸಬೇಕು, ಮಾನವೀಯತೆಯಿಂದ ನೋಡಿಕೊಳ್ಳಬೇಕು. ಆದರೆ ಬೀದಿಗಳಲ್ಲಿ ಮಕ್ಕಳು, ವೃದ್ಧರನ್ನು ನಾಯಿಗಳು ಕಚ್ಚಿ ತಿನ್ನುವಾಗ ಹೃದಯ ಕಿತ್ತು ಬರುತ್ತದೆ. ಆದ್ದರಿಂದ ಸಂಸತ್‌ನಲ್ಲಿ ಸ್ಪೀಕರ್ ಜೊತೆಗೂ ಮಾತನಾಡಿದ್ದೇನೆ. ಕೇಂದ್ರ ಆರೋಗ್ಯ ಸಮಿತಿಯಲ್ಲಿಯೂ ಒತ್ತಾಯ ಮಾಡಿದ್ದೇನೆ. ಇದಕ್ಕೆ ಕಾನೂನಿನಲ್ಲಿಯೇ ತಿದ್ದುಪಡಿ ತರಬೇಕು ಎಂದರು.

ಜಯದೇವ ಸಂಜೀವಿನಿ: ಜಯದೇವ ಹೃದ್ರೋಗ ಸಂಸ್ಥೆಯು ಈ ಭಾಗದ ಜನರಿಗೆ ಸಂಜೀವಿನಿ ಪಾತ್ರೆಯಾಗಿದ್ದು, ಇಲ್ಲಿನ ವೈದ್ಯರು ಸಿಬ್ಬಂದಿ ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರಲ್ಲಿಯೂ ಆಸ್ಪತ್ರೆಯ ಬಗ್ಗೆ ಒಳ್ಳೆಯ ಅಭಿಪ್ರಾಯವಿದ್ದು, ರಿಯಾಯಿತಿ ದರದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ. ರಾಜ್ಯದ 4 ಕಂದಾಯ ವಿಭಾಗಗಳಲ್ಲಿಯೂ ಜಯದೇವ ಆಸ್ಪತ್ರೆ ನಿರ್ಮಿಸಿದ್ದು, ಹುಬ್ಬಳ್ಳಿ ಜಯದೇವ ಆಸ್ಪತ್ರೆ 435 ಹಾಸಿಗೆ ಸಾಮರ್ಥ್ಯ ಹೊಂದಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಒಟ್ಟಾರೆಯಾಗಿ ಭಾರತದಲ್ಲಿಯೇ 2300 ಹಾಸಿಗೆ ಸಾಮರ್ಥ್ಯವುಳ್ಳ ಹೃದ್ರೋಗ ಆಸ್ಪತ್ರೆ ಇದ್ದರೆ ಅದು ಜಯದೇವ ಆಸ್ಪತ್ರೆ ಮಾತ್ರ ಎಂದರು. ಹೃದಯಾಘಾತವಾದ ರೋಗಿಗೆ ತಾಲೂಕು ಮಟ್ಟದಲ್ಲೇ ಪ್ರಥಮ ಚಿಕಿತ್ಸೆ ನೀಡಿ ನಂತರ ಬೇರೆ ಆಸ್ಪತ್ರೆಗೆ ಸೇರಿಸುವ ವಿಧಾನ ಈಗ ರಾಜ್ಯದಲ್ಲಿ 110 ತಾಲೂಕಿನಲ್ಲಿದೆ ಈ ವಿಚಾರದಲ್ಲಿ ಕರ್ನಾಟಕ ಸರ್ಕಾರ ಮಂಚೂಣಿಯಲ್ಲಿದ್ದು 230 ತಾಲೂಕಿಗೆ ವಿಸ್ತರಣೆ ಮಾಡಲು ನಿರ್ಧರಿಸಿದ್ದಾರೆ. ಈ ರೀತಿ ಚಿಕಿತ್ಸಾ ವ್ಯವಸ್ಥೆ ಮಾಡಿದ ಮೇಲೆ ಸಾವಿನ ಪ್ರಮಾಣ ಶೇ.25 ರಿಂದ ಶೇ.8ಕ್ಕೆ ಇಳಿದಿದೆ. ಈ ಮಾದರಿಯನ್ನು ದೇಶಾದ್ಯಂತ ಮಾಡಲು ತೀರ್ಮಾನಿಸಿದ್ದೇವೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಕೆಲಸ ಮಾಡುವ ವೈದ್ಯರಿಗೆ ಸಂಬಳವನ್ನು 60 ಸಾವಿರದಿಂದ 75 ಸಾವಿರಕ್ಕೆ, ದಾದಿಯರಿಗೆ 12 ಸಾವಿರ ವಿದ್ದುದನ್ನು 22 ಸಾವಿರಕ್ಕೆ ಹೆಚ್ಚಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಎಸ್.ಸದಾನಂದ್, ವೈದ್ಯರಾದ ಡಾ.ಸಂತೋಷ್, ಡಾ.ರಾಜಿತ್, ಡಾ.ವೀಣಾ ನಂಜಪ್ಪ, ಡಾ.ಸ್ನೇಹಿಲ್, ಡಾ.ಶಶಿಕಾಂತ್, ಡಾ.ವಿಶ್ವನಾಥ್, ಡಾ.ದೇವರಾಜ್, ಪಿಆರ್‌ಒಗಳಾದ ವಾಣಿ ಮೋಹನ್, ಚಂಪಕಮಾಲ ಹಾಜರಿದ್ದರು.

ಬೀದಿ ನಾಯಿಗಳನ್ನು ನಿಗದಿತ ಆಶ್ರಯತಾಣಗಳಿಗೆ ಸ್ಥಳಾಂತರಿಸಿ: ಸುಪ್ರೀಂಕೋರ್ಟ್ ನಿರ್ದೇಶನ

ನವದೆಹಲಿ: ಶೈಕ್ಷಣಿಕ ಕೇಂದ್ರಗಳು ಮತ್ತು ಆಸ್ಪತ್ರೆಗಳಂತಹ ಸಾಂಸ್ಥಿಕ ಪ್ರದೇಶಗಳಲ್ಲಿ ನಾಯಿ ಕಡಿತ ಪ್ರಕರಣಗಳು ಆತಂಕಕಾರಿ ರೀತಿಯಲ್ಲಿ ಏರಿಕೆಯಾಗುತ್ತಿರುವುದನ್ನು ಗಮನಿಸಿದ ಸುಪ್ರೀಂ ಕೋರ್ಟ್, ಶುಕ್ರವಾರ ಅಂತಹ ನಾಯಿಗಳನ್ನು ಗೊತ್ತುಪಡಿಸಿದ ಆಶ್ರಯತಾಣಗಳಿಗೆ ಸ್ಥಳಾಂತರಿಸಬೇಕು ಎಂದು ನಿರ್ದೇಶಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್, ಸಂದೀಪ್ ಮೆಹ್ತಾ ಮತ್ತು ಎನ್‌ವಿ ಅಂಜಾರಿಯಾ ಅವರಿದ್ದ ವಿಶೇಷ ಪೀಠವು, ಬೀದಿ ನಾಯಿಗಳ ಕಡಿತ ಪ್ರಕರಣದಲ್ಲಿ ಹಲವಾರು ನಿರ್ದೇಶನಗಳನ್ನು ನೀಡಿದೆ. ಜತೆಗೆ ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್‌ವೇಗಳಲ್ಲಿನ ದನಗಳು ಮತ್ತು ಇತರ ಪ್ರಾಣಿಗಳನ್ನು ತೆರವುಗೊಳಿಸುವುದು ಮತ್ತು ಅವುಗಳನ್ನು ನಿಗದಿತ ಆಶ್ರಯತಾಣಗಳಿಗೆ ಸ್ಥಳಾಂತರಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದೆ.

ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳ ಆವರಣಕ್ಕೆ ಬೀದಿ ನಾಯಿಗಳು ಪ್ರವೇಶಿಸುವುದನ್ನು ತಡೆಯುವ ಮೂಲಕ ನಾಯಿ ಕಡಿತದ ಘಟನೆಗಳನ್ನು ತಡೆಗಟ್ಟಬೇಕು. ಅಲ್ಲದೆ, ಅಲ್ಲಿಂದ ಹಿಡಿದು ತಂದ ಬೀದಿ ನಾಯಿಗಳನ್ನು ಮತ್ತೆ ಅದೇ ಸ್ಥಳಕ್ಕೆ ಬಿಡಬಾರದು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿತು. ಬಿಡಾಡಿ ಪ್ರಾಣಿಗಳು ಹೆಚ್ಚಾಗಿ ಕಂಡುಬರುವ ಹೆದ್ದಾರಿಗಳಲ್ಲಿ ಪ್ರದೇಶಗಳು ಎಲ್ಲೆಲ್ಲಿವೆ ಎಂಬುದನ್ನು ಗುರುತಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸೇರಿದಂತೆ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ಕೈಗೊಳ್ಳುವಂತೆಯೂ ಪೀಠ ಸೂಚಿಸಿತು. ಮುಂದಿನ ವಿಚಾರಣೆಯನ್ನು ಜನವರಿ 13ಕ್ಕೆ ನಿಗದಿಪಡಿಸಿತು.

ಗಲಾಟೆ ಬಿಡಿಸಲು ಹೋದ ಸಬ್‌ಇನ್ಸ್‌ಪೆಕ್ಟರ್‌ಗೆ ಹೊಡೆದು ಕೊಂದ ಜನ!

ಚಂಡೀಗಢ: ಆಘಾತಕಾರಿ ಘಟನೆಯೊಂದರಲ್ಲಿ, ಹರಿಯಾಣದ ಹಿಸಾರ್‌ನಲ್ಲಿ ತಮ್ಮ ಮನೆಯ ಹೊರಗೆ ಜನರ ಗುಂಪೊಂದು ಗಲಾಟೆ ನಡೆಸುತ್ತಿರುವುದನ್ನು ತಡೆಯಲು ಯತ್ನಿಸಿದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರಮೇಶ್ ಕುಮಾರ್ ಅವರನ್ನು ಇಟ್ಟಿಗೆ ಮತ್ತು ದೊಣ್ಣೆಗಳಿಂದ ಕ್ರೂರವಾಗಿ ಥಳಿಸಿ ಕೊಂದ ಘಟನೆ ನಡೆದಿದೆ.

ಹಿಸಾರ್‌ನ ಶ್ಯಾಮ್‌ಲಾಲ್ ಧನಿಯಲ್ಲಿರುವ ಕುಮಾರ್ ಅವರ ಮನೆಯ ನೆರೆಹೊರೆಯಲ್ಲಿ ಯುವಕರ ಗುಂಪೊಂದು ಗಲಾಟೆ ನಡೆಸಿತು. ಗದ್ದಲ ಕೇಳಿ ಕುಮಾರ್ ಮನೆಯಿಂದ ಹೊರಬಂದು ಅಸಭ್ಯ ಭಾಷೆ ಬಳಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು.

ಆರಂಭದಲ್ಲಿ ಆ ಗುಂಪು ಸ್ಥಳದಿಂದ ಹೊರಟುಹೋಯಿತು. ಆದರೆ ಒಂದು ಗಂಟೆಯ ನಂತರ ಕಾರು ಮತ್ತು ಬೈಕ್‌ಗಳಲ್ಲಿ ಹೆಚ್ಚಿನ ಜನರೊಂದಿಗೆ ಬಂದ ಗುಂಪು, ಕುಮಾರ್ ಅವರ ಮನೆಯ ಮುಂದೆ ಮತ್ತೆ ಗಲಾಟೆ ಮಾಡಿದರು. ಕುಮಾರ್ ಮತ್ತೆ ಮಧ್ಯಪ್ರವೇಶಿಸಿದಾಗ, ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ದೊಣ್ಣೆ ಮತ್ತು ಇಟ್ಟಿಗೆಗಳಿಂದ ಹಲ್ಲೆ ನಡೆಸಿ, ಸ್ಥಳದಲ್ಲೇ ಅವರನ್ನು ಹತ್ಯೆ ಮಾಡಿದ್ದಾರೆ.



ಕನಕದಾಸರ ಜಯಂತಿ

ಶ್ರೀ ಸಂತ ಕನಕದಾಸರ ಜಯಂತಿ ಕಾರ್ಯಕ್ರಮದ ಅಂಗವಾಗಿ ಕೃಷ್ಣರಾಜ ಕ್ಷೇತ್ರದ ಬಂಡಿಕೇರಿಯಲ್ಲಿರುವ ಕನಕದಾಸರ ಪುತ್ಥಳಿಗೆ ಕಾಗಿನೆಲೆ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಪ್ರದೀಪ್ ಕುಮಾರ್, ಗೋಪಿ, ಪುನೀತ್, ರಮೇಶ್, ಸತ್ಯನಾರಾಯಣ ಇನ್ನಿತರರಿದ್ದರು.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com Ph/Fax: 0821-2420810

ಈ ಕಛೇರಿ ಐಟಂವಾರು ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:17/2025–26 ದಿನಾಂಕ: 05.11.2025

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಈ ವಿಭಾಗದಡಿಯಲ್ಲಿನ 05 ಸಂಖ್ಯೆ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–1 ಮತ್ತು 2ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ ಅರ್ಹ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ (viz https://kppp.karnataka.gov.in/) ಕ್ರಮ ಸಂಖ್ಯೆ 02 ರ ಕಾಮಗಾರಿಗೆ ದಿ:05.11.2025 ರಿಂದ 13.11.2025, ಕ್ರಮ ಸಂಖ್ಯೆ 01, 04 ಮತ್ತು 05 ರ ಕಾಮಗಾರಿಗೆ ದಿ:06.11.2025 ರಿಂದ 14.11.2025 ಹಾಗೂ ಕ್ರಮ ಸಂಖ್ಯೆ 03 ರ ಕಾಮಗಾರಿಗೆ ದಿ:07.11.2025 ರಿಂದ 15.11.2025,ರ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ.7.19 ಲಕ್ಷಗಳು ಹಾಗೂ ಇ.ಎಂ.ಡಿ ರೂ.0.18 ಲಕ್ಷಗಳು ಹಾಗೂ ಗರಿಷ್ಟ ಮೊತ್ತ ರೂ.29.22 ಲಕ್ಷಗಳು ಹಾಗೂ ಇ.ಎಂ.ಡಿ ರೂ.0.29 ಲಕ್ಷಗಳಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.
DIPR/DDMYS/1182/KSMCA/646/2025-26



ಮೈಸೂರು ವಿಮಾನ ನಿಲ್ದಾಣದ ಮುಂದಿನ ಬೆಂಗಳೂರು–ನೀಲಗಿರಿ ಹೆದ್ದಾರಿಯಲ್ಲಿ ಸುರಂಗ ಮಾರ್ಗ ನಿರ್ಮಾಣ

● 9 ಕಿಲೋ ಮೀಟರ್‌ಗೆ ಬದಲು 3 ಕಿಲೋ ಮೀಟರ್ ಬೈಪಾಸ್ ವ್ಯವಸ್ಥೆ ● ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯ ದಿಶಾ ಸಭೆಯಲ್ಲಿ ಎನ್‌ಹೆಚ್‌ಎಐ ಅಧಿಕಾರಿ ಮಾಹಿತಿ

▸ ಪರಿಷ್ಕೃತ ಯೋಜನೆಗೆ ಎಎಐ ಒಪ್ಪಿಗೆ ▸ ವಿಮಾನ ನಿಲ್ದಾಣ ವಿಸ್ತರಣೆಗೆ 160 ಎಕರೆ ಭೂಮಿ ▸ 46 ಎಕರೆಯಲ್ಲಿ 36 ಎಕರೆಗೆ ಪರಿಹಾರ ಬಾಕಿ ▸ 2ನೇ ಹಂತದ 80 ಎಕರೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿ ▸ ರೈತರ ತಕರಾರಿದ್ದರೆ ಅವರ ಬ್ಯಾಂಕ್ ಖಾತೆಗೆ ಹಣ ಜಮಾ

ಮೈಸೂರು, ನ.7(ಬಿಎಲ್‌ಯು)– ಮೈಸೂರು ವಿಮಾನ ನಿಲ್ದಾಣ ಮುಂದೆ ಹಾದು ಹೋಗಿರುವ ಬೆಂಗಳೂರು–ನೀಲಗಿರಿ ರಾಷ್ಟ್ರೀಯ ಹೆದ್ದಾರಿ ಮಧ್ಯೆ 3 ಕಿಲೋ ಮೀಟರ್ ಬೈಪಾಸ್ ಹಾಗೂ ಮಧ್ಯೆ ಟನಲ್ (ಸುರಂಗ ಮಾರ್ಗ) ನಿರ್ಮಾಣ ಮಾಡಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಅಲೈನ್ ಮೆಂಟ್ ಪ್ಲಾನ್ (ಜೋಡಣಾ ಯೋಜನೆ) ಸಲ್ಲಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಮಿಲಿಂದ್‌ಕುಮಾರ್ ತಿಳಿಸಿದ್ದಾರೆ.



ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆ ನಡೆಯಿತು.

ಮೈಸೂರಿನ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆಗೆ ಈ ವಿಚಾರ ತಿಳಿಸಿದರು.

ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗೆ ಈ ಮೊದಲು ಡಿಪಿಆರ್ ವೊಂದನ್ನು ಸಿದ್ಧ ಮಾಡಲಾಗಿತ್ತು. ಹೆದ್ದಾರಿಯಲ್ಲಿ ವಾಹನಗಳು ಸಂಚರಿಸಲು ಅಂಡರ್ ಪಾಸ್ ನಿರ್ಮಿಸಿ, ಅದರ ಮೇಲೆ ರನ್ ವೇ ನಿರ್ಮಿಸಲು ನಿರ್ಧಾರ ಮಾಡಲಾಗಿತ್ತು. ಆದರೆ ಇದರಿಂದ ಸುರಕ್ಷತೆಗೆ ಧಕ್ಕೆಯಾಗುತ್ತದೆ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಆಕ್ಷೇಪ ವ್ಯಕ್ತಪಡಿಸಿದಾಗ ಈ ನಿರ್ಧಾರ ಕೈ ಬಿಡಲಾಗಿತ್ತು.

ತರುವಾಯ ವಿಮಾನ ನಿಲ್ದಾಣದ ಮಧ್ಯೆ ರಸ್ತೆ ಬೇಡವೇ ಬೇಡವೆಂದು 9 ಕಿಲೋ ಮೀಟರ್‌ಗಳ ಬೈಪಾಸ್ ನಿರ್ಮಾಣ ಮಾಡಲು ಡಿಪಿಆರ್ ಸಿದ್ಧ ಮಾಡಲಾಗಿತ್ತು. ಇದರ ನಿರ್ಮಾಣಕ್ಕೆ 550 ಕೋಟಿ ರೂಪಾಯಿಗಳನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನೀಡಲು ಒಪ್ಪಂದ ಮಾಡಿಕೊಂಡಿತ್ತು.

ಆದರೆ ಈ ಯೋಜನೆಯನ್ನು ಕೂಡ ಈಗ ಕೈ ಬಿಡಲಾಗಿದೆ ಎಂದು ಮಿಲಿಂದ್ ಕುಮಾರ್ ಇಂದು ಕುಮಾರಸ್ವಾಮಿ ಅವರಿಗೆ ತಿಳಿಸಿದರು. ಮೈಸೂರು ನಂಜನಗೂಡು ಹೆದ್ದಾರಿಯ 9 ಕಿಲೋ ಮೀಟರ್ ಬೈಪಾಸ್ ಯೋಜನೆ ರದ್ದು ಮಾಡಲಾಗಿದೆ. ಅದರ ಬದಲು 3 ಕಿಲೋ ಮೀಟರ್ ಬೈಪಾಸ್ ಮಾಡಿ ಮಧ್ಯೆ ಅರ್ಧ ಕಿಲೋ ಮೀಟರ್ ಟನಲ್ ನಿರ್ಮಾಣ ಮಾಡಲು ತೀರ್ಮಾನ ಮಾಡಲಾಗಿದೆ. ಈ ಸಂಬಂಧ ಡಿಪಿಆರ್ ಅನ್ನು ಪ್ರಾಧಿಕಾರಕ್ಕೆ ಸಲ್ಲಿಸಲಾಗಿದೆ ಎಂದು ವಿವರಿಸಿದರು. ಇದರಿಂದ ಈ ಮೊದಲಿದ್ದ 9 ಕಿಲೋ ಮೀಟರ್ ಬೈಪಾಸ್ 3 ಕಿಲೋ ಮೀಟರ್‌ಗೆ ಇಳಿಕೆಯಾಗಲಿದೆ.

ಪರಿಷ್ಕೃತ ಯೋಜನೆಗೆ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಕೂಡ ಒಪ್ಪಿಗೆ ನೀಡಿದೆ ಎಂದು ಇದೇ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಮಾಹಿತಿ ನೀಡಿದರು. 3 ಕಿಲೋ ಮೀಟರ್ ಬೈಪಾಸ್ ಹಾಗೂ ಟನಲ್ ನಿರ್ಮಾಣ ಮಾಡುವ ಸಂಬಂಧ ಸಲ್ಲಿಕೆಯಾಗಿರುವ ಡಿಪಿಆರ್‌ಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಒಪ್ಪಿಗೆ ದೊರೆತ ಕೂಡಲೇ ಟೆಂಡರ್ ಕರೆಯಲಾಗುವುದು ಎಂದು ತಿಳಿಸಿದರು.

ಭೂಮಿ ಸ್ವಾಧೀನ: ಮೈಸೂರು ವಿಮಾನ ನಿಲ್ದಾಣ ವಿಸ್ತರಣೆಗೆ 206 ಎಕರೆ ಅವಶ್ಯಕತೆ ಇದ್ದು, ಈಗಾಗಲೇ 160 ಎಕರೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣ ಗೊಳಿಸಿ ಭೂಮಿ ವಶಕ್ಕೆ ಪಡೆಯಲಾಗಿದೆ. ಉಳಿದ 46 ಎಕರೆಯಲ್ಲಿ 36 ಎಕರೆಗೆ ಪರಿಹಾರ ನೀಡಲು ಬಾಕಿ ಇದೆ ಎಂದು ಹೇಳಿದರು.

ಮತ್ತೆ ಎರಡನೇ ಹಂತದಲ್ಲಿ 80 ಎಕರೆ ನೀಡುವಂತೆ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಈ ಸಂಬಂಧ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಡುವೆ ಒಪ್ಪಂದ ಏರ್ಪಟ್ಟಿದೆ ಎಂದು ತಿಳಿಸಿದರು.

ಆದರೆ 80 ಎಕರೆ ಭೂಮಿಯಲ್ಲಿ ಕೆಲವು ರೈತರು ನಾವು ಜಮೀನು ನೀಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ನಾವು ಕಾನೂನಾತ್ಮಕವಾಗಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ರೈತರ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಅಕೌಂಟ್ ತೆರೆದು ಪರಿ ಹಾರದ ಹಣ ಜಮಾ ಮಾಡುತ್ತೇವೆ. ಈ ಮೂಲಕ ಇನ್ನೊಂದು ವಾರದಲ್ಲಿ ಎರಡನೇ ಹಂತದ ಭೂಮಿ ಹಸ್ತಾಂತರಕ್ಕೆ ಅನುಮೋದನೆ ನೀಡುತ್ತೇವೆ ಎಂದು ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ರೈತರ ಭೂಮಿಗೆ ಪರಿಹಾರ ನಿಗದಿ ಮಾಡುವ ತನಕ ಕಾಮಗಾರಿ ನಡೆಸಬೇಡಿ

ಶ್ರೀರಂಗಪಟ್ಟಣ–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ 277 ನಿರ್ಮಾಣಕ್ಕಾಗಿ ಭೂ ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ರೈತರು ಹೆಚ್ಚಿನ ಪರಿಹಾರ ಕೇಳುತ್ತಿದ್ದು, ಈ ಸಂಬಂಧ ಪರಿಹಾರದ ಮೊತ್ತವನ್ನು ಶೀಘ್ರವೇ ನಿರ್ಧ ರಿಸಲಾಗುವುದು. ಅಲ್ಲಿಯ ವರೆಗೆ ಹೆದ್ದಾರಿ ನಿರ್ಮಾಣ ಕಾಮಗಾರಿ ಮಾಡಬೇಡಿ ಎಂದು ಹೆಚ್.ಡಿ.ಕುಮಾರಸ್ವಾಮಿ ತಾಕೀತು ಮಾಡಿದರು. ಶ್ರೀರಂಗಪಟ್ಟಣ–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡಲು ಈಗಾಗಲೇ ಭಾಗಶಃ ಭೂಮಿಯನ್ನು ವಶಕ್ಕೆ ಪಡೆಯಲಾಗಿದೆ. ಈ ಹಿನ್ನೆಲೆಯಲ್ಲಿ ಹೆದ್ದಾರಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರು ಮಾಹಿತಿ ನೀಡಿದರು.

ಪೂರ್ವ ತಯಾರಿ ಮಾಡಿಕೊಳ್ಳಿ: ಹುಣಸೂರಿನಲ್ಲಿ ಹೆದ್ದಾರಿ ನಿರ್ಮಾಣ ಕಾರ್ಯಕ್ಕೆ ಮೊದಲು ಒಳಚರಂಡಿ, ಡಕ್ ಸೇರಿದಂತೆ ಇತರೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಇದನ್ನು ನಿರ್ಮಾಣ ಮಾಡದೆ ಹೆದ್ದಾರಿ ನಿರ್ಮಾಣ ಮಾಡಲು ಮುಂದಾದರೆ ನಾವು ಅವಕಾಶ ನೀಡುವುದಿಲ್ಲ ಎಂದು ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ ಎಚ್ಚರಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕಾಫರ್ಡ್ ಭವನದ ಪಕ್ಕದ ಬೋಗಾದಿ ರಸ್ತೆ ಹಾಗೂ ರಿಂಗ್ ರಸ್ತೆ ಸಮೀಪ ಕೆಆರ್‌ಎಸ್ ರಸ್ತೆಯಲ್ಲಿ ರೈಲ್ವೆ ಅಂಡರ್ ಪಾಸ್ ನಿರ್ಮಾಣ ಮಾಡಲು ಈಗಾಗಲೇ ಅನುಮೋದನೆ ದೊರೆತಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಕಾಮಗಾರಿ ಆರಂಭಿಸಿ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದರು.

ಫ್ಲೈಓವರ್ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಬಾರದು

ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ (ಮೆಟ್ರೋಪೋಲ್) ಸರ್ಕಲ್‌ನಿಂದ ಅವೈಜ್ಞಾನಿಕವಾದ ಫ್ಲೈಓವರ್ ನಿರ್ಮಾಣ ಮಾಡುತ್ತಿದ್ದು, ಕೇಂದ್ರ ಸರ್ಕಾರದಿಂದ ಅನುಮತಿ ನೀಡಬಾರದು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಲ್ಲಿ ಮನವಿ ಮಾಡಿದರು.

ಈ ರಸ್ತೆಯಲ್ಲಿ ಫ್ಲೈ ಓವರ್ ನಿರ್ಮಾಣ ಮಾಡುವ ಅವಶ್ಯಕತೆ ಇಲ್ಲ. ಆದರೂ ಹತ್ತಾರು ಮರಗಳನ್ನು ಕಡಿದು ಬೋಳು ಮಾಡುತ್ತಿದ್ದಾರೆ. ಅಷ್ಟೆ ಅಲ್ಲದೆ ಅಕ್ಕ ಪಕ್ಕದಲ್ಲಿರುವ ಪಾರಂಪರಿಕ ಕಟ್ಟಡಗಳ ಸೌಂದರ್ಯಕ್ಕೆ ಧಕ್ಕೆಯಾಗುತ್ತಿದೆ ಎಂದು ಆರೋಪಿಸಿದರು. ಈ ಹಿನ್ನೆಲೆಯಲ್ಲಿ ಯಾವುದೇ ಕಾರಣಕ್ಕೂ ಫ್ಲೈ ಓವರ್ ನಿರ್ಮಾಣ ಮಾಡಲು ಕೇಂದ್ರ ಸರ್ಕಾರದಿಂದ ಒಪ್ಪಿಗೆ ನೀಡಬಾರದು ಎಂದು ಯದುವೀರ್ ಆಗ್ರಹಿಸಿದರು. ಕೇಂದ್ರ ಸರ್ಕಾರದ ಪ್ರಸಾದ್ ಸ್ಕೀಂನಿಂದ ಮೈಸೂರಿನ ಚಾಮುಂಡಿ ಬೆಟ್ಟವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಸಂಬಂಧ ಟೆಂಡರ್ ಕರೆದು ಏಜೆನ್ಸಿ ಕೂಡ ನಿಗದಿ ಮಾಡಲಾಗಿದೆ. ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಜಾಗವನ್ನು ಹಸ್ತಾಂತರ ಮಾಡಿದರೆ ಕಾಮಗಾರಿ ಆರಂಭಿಸಲಾಗುವುದು ಎಂದು ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ರೌಡಿಗಳ ಹಾವಳಿ ಹತ್ತಿಕ್ಕಿ

● ಅಧಿಕಾರಿಗಳಿಗೆ ಪೊಲೀಸ್ ಕಮಿಷನರ್ ಸೂಚನೆ
● ನ.12 ರಂದು ಆಂತರಿಕ ಭದ್ರತಾ ವಿಭಾಗದ ಎಡಿಜಿಪಿ ಚಂದ್ರಶೇಖರ್ ಮೈಸೂರು ಭೇಟಿ ಹಿನ್ನೆಲೆಯಲ್ಲಿ ಕವಾಯಿತು

ಮೈಸೂರು, ನ. 7 (ಆರ್‌ಕೆ)– ಮೈಸೂರು ನಗರಾದ್ಯಂತ ರೌಡಿಗಳ ಹಾವಳಿಯನ್ನು ಸಂಪೂರ್ಣ ಹತ್ತಿಕ್ಕಿ ಎಂದು ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ಅವರು ಅಧೀನಾಧಿಕಾರಿಗಳಿಗೆ ಇಂದಿಲ್ಲಿ ತಾಕೀತು ಮಾಡಿದ್ದಾರೆ.



ಚಂದ್ರಶೇಖರ್

ಆಂತರಿಕ ಭದ್ರತಾ ವಿಭಾಗದ ಎಡಿಜಿಪಿ ಚಂದ್ರಶೇಖರ್ ಅವರು ನವಂಬರ್ 12 ರಂದು ಮೈಸೂರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ ಸಶಸ್ತ್ರ ಮೀಸಲು ಪಡೆ ಮೈದಾನದಲ್ಲಿ ಕವಾಯಿತು ನಡೆಸಿದ ಕಮಿಷ್ನರ್ ಮೈಸೂರು ನಗರದಲ್ಲಿ ಬಹುತೇಕ ರೌಡಿಗಳು ಸಕ್ರಿಯವಾಗಿದ್ದು, ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದಾರೆ. ಇನ್ನು ಪುಡಿ ರೌಡಿಗಳು ಹುಟ್ಟಿಕೊಳ್ಳುತ್ತಿದ್ದಾರೆ. ಆಯಾಯ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಎಚ್ಚರ ವಹಿಸಿ ರೌಡಿಗಳ ಅಟ್ಟಹಾಸವನ್ನು ಬಗ್ಗುಬಡಿಯಬೇಕೆಂದು ಕಟ್ಟಾಜ್ಞೆ ಮಾಡಿದ್ದಾರೆ.

ಈ ಬಾರಿಯ ದಸರಾ ಮಹೋತ್ಸವ ಯಾವುದೇ ಅಹಿತಕರ ಘಟನೆಗಳಿಲ್ಲದೇ ಶಾಂತಿಯುತವಾಗಿ ನಡೆದಿದೆ. ನಾವು ನೀಡಿದ ಸೂಚನೆಯಂತೆ ಎಲ್ಲರೂ ವ್ಯವಸ್ಥಿತವಾಗಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸಿದ್ದೀರಿ. ಅದೇ ರೀತಿ ನವಂಬರ್ 9 ರಂದು ಮೈಸೂರಿಗೆ ಆಗಮಿಸಲಿರುವ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರ ಕಾರ್ಯಕ್ರಮಗಳಿಗೂ ಕಟ್ಟೆಚ್ಚರ ವಹಿಸಿ, ವ್ಯಾಪಕ ಬಂದೋಬಸ್ತ್ ಮಾಡುವಂತೆಯೂ ಸೀಮಾ ಲಾಟ್ಕರ್ ಇದೇ ಸಂದರ್ಭದಲ್ಲಿ ಸೂಚನೆ ನೀಡಿದರು.

ಮುಖ್ಯಮಂತ್ರಿಗಳ ತವರೂರಾಗಿರುವುದರಿಂದ ಮೈಸೂರಿನಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗ ಬರದಂತೆ ಹಾಗೂ ಅಪರಾಧಗಳು ನಡೆಯದಂತೆ ಕ್ರಮವಹಿಸುವುದು ಅತ್ಯಗತ್ಯ. ಯಾವ ಹಂತದಲ್ಲೂ ನಿರ್ಲಕ್ಷ್ಯ ಧೋರಣೆ ತೋರದೆ ಇಲಾಖೆ ಮತ್ತು ವೃತ್ತಿ ಶಿಸ್ತು ಕಾಪಾಡುವ ಮೂಲಕ ವ್ಯವಸ್ಥಿತವಾಗಿ ಕರ್ತವ್ಯ ನಿರ್ವಹಿಸಬೇಕೆಂದು ಅವರು ಸಲಹೆ ನೀಡಿದರು.

ಕವಾಯಿತಿನಲ್ಲಿ ಡಿಸಿಪಿಗಳಾದ ಕೆ.ಎಸ್. ಸುಂದರರಾಜ್, ಆರ್.ಎನ್ ಬಿಂದುಮಣಿ, ಸಿದ್ಧನಗೌಡ ವೈ. ಪಾಟೀಲ್, ಎಲ್ಲಾ ಉಪ ವಿಭಾಗಗಳ ಎಸಿಪಿಗಳು, ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಹಾಗೂ ಸಬ್ ಇನ್ಸ್‌ಪೆಕ್ಟರ್‌ಗಳು ಹಾಜರಿದ್ದರು.

ನಂತರ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕಮಿಷ್ನರ್ ಸೀಮಾ ಲಾಟ್ಕರ್, ನವಂಬರ್ 13ರ ನಂತರ ಸಭೆ ನಡೆಸಿ ರೌಡಿ ನಿಗ್ರಹ ದಳಕ್ಕೆ ಅಧಿಕಾರಿಗಳನ್ನು ನಿಯೋಜಿಸಲಾಗುವುದು. ಅದರಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಗಳನ್ನು ಹೊರತುಪಡಿಸಿ ಹೊರಗಿನಿಂದ ಬಂದಿರುವ ಅಧಿಕಾರಿಗಳನ್ನು ದಳಕ್ಕೆ ನೇಮಿಸಲಾಗುವುದು ಎಂದರು.

ಕೇಂದ್ರ ಸರ್ಕಾರದ ಯೋಜನೆಗಳ ಸೌಲಭ್ಯ ಅರ್ಹ ಫಲಾನುಭವಿಗಳಿಗೆ ತಲುಪಿಸಿ

● ಅಧಿಕಾರಿಗಳಿಗೆ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಾಕೀತು ● ಕೇಂದ್ರ ಸರ್ಕಾರದ ಅನುದಾನ ಶೇಕಡ 100 ರಷ್ಟು ಬಳಕೆಯಾಗಬೇಕು ● ರೈತರ ಭೂಮಿಗೆ ಸೂಕ್ತ ಪರಿಹಾರ ನೀಡಿ ● ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಗೆ ಪ್ರಸ್ತಾವನೆ ಸಲ್ಲಿಸಿ ● ಸೂರ್ಯ ಘರ್ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಿಲ್ಲ

ಮೈಸೂರು, ನ.7(ಬಿಎಲ್‌ಯು)– ಶೇಕಡ 100 ರಷ್ಟು ಕೇಂದ್ರ ಸರ್ಕಾರದ ಅನುದಾನ ಬಳಕೆ ಆಗಬೇಕು, ಜೊತೆಗೆ ಕೇಂದ್ರ ಸರ್ಕಾರದ ಯೋಜನೆಗಳ ಸೌಲಭ್ಯವನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮೈಸೂರಿನ ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಹೆದ್ದಾರಿ ನಿರ್ಮಾಣಕ್ಕೆ ರೈತರ ಭೂಮಿ ಸ್ವಾಧೀನಪಡಿಸಿಕೊಂಡಾಗ ಸೂಕ್ತ ಪರಿಹಾರ ನೀಡಬೇಕು, ಇಲ್ಲವೆ ಪರ್ಯಾಯ ಭೂಮಿ ನೀಡಬೇಕು ಎಂದು ಸಲಹೆ ನೀಡಿದರು.

ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಗೆ ಕೇಂದ್ರ ಸರ್ಕಾರ 25 ಸಾವಿರ ಕೋಟಿ ರೂಪಾಯಿ ಮೀಸಲಿಟ್ಟಿದೆ. ರಾಜ್ಯ ಸರ್ಕಾರ ಈ ಸಂಬಂಧ ಪ್ರಸ್ತಾವನೆ ಸಲ್ಲಿಸಿದರೆ ನಾನು ಅನುಮೋದನೆ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಮಾತನಾಡಿದ ಸಂಸದ ಯದುವೀರ್ ಅವರು, ಸೂರ್ಯ ಘರ್ ಯೋಜನೆಯಲ್ಲಿ ಸೋಲಾರ್ ಅಳವಡಿಕೆಗೆ ಕೇಂದ್ರ ಸರ್ಕಾರ ಸಹಾಯ ಧನ ನೀಡುತ್ತಿದೆ. ಈ ಸಂಬಂಧ ರಾಜ್ಯ ಸರ್ಕಾರದ ಅಧಿಕಾರಿಗಳು ಜನರಲ್ಲಿ ಜಾಗೃತಿ ಮೂಡಿಸುತ್ತಿಲ್ಲ. ಅಲ್ಲದೆ ಇಂದಿನ ಸಭೆಗೆ ಯಾವುದೇ ಮಾಹಿತಿ ನೀಡಿಲ್ಲ ಎಂದು ಚೆಸ್ಕಾಂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಈ ವೇಳೆ ಮಾತನಾಡಿದ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ಹುಣಸೂರಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲೆ ಜಲ ಜೀವನ್ ಮಿಷನ್ ಕುಡಿಯುವ ನೀರಿನ ಯೋಜನೆಯ ಪೈಪ್ ಲೈನ್ ಅಳವಡಿಸಲಾಗಿದೆ. ಈಗ ರಸ್ತೆ ಅಗಲಿಕರಣ ಮಾಡುವಾಗ ಪೈಪ್ ಒಡೆದರೆ ಹುಣಸೂರಿಗೆ ಕುಡಿಯುವ ನೀರಿಗೆ ತೊಂದರೆ ಉಂಟಾಗುತ್ತದೆ. ಅಲ್ಲದೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ನಿರಪೇಕ್ಷಣಾ ಪತ್ರ ಕೂಡ ಪಡೆದಿಲ್ಲ. ಅದು ಹೇಗೆ ಪೈಪ್ ಲೈನ್ ಅಳವಡಿಸಿದ್ದೀರಾ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಮೊದಲು ಈ ಸಮಸ್ಯೆ ಪರಿಹಾರ ಮಾಡಬೇಕು. ಇಲ್ಲದಿದ್ದರೆ ನೀವೇ ಹೊಣೆ ಎಂದು ಎಚ್ಚರಿಸಿದರು.

ನಂತರ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ಅಮೃತ್ ಯೋಜನೆಯಲ್ಲಿ ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳಿಗೆ ಕುಡಿಯುವ ನೀರು ಯೋಜನೆ ಅನುಷ್ಠಾನ ಮಾಡಿಲ್ಲ. ಕುಂಟುತ್ತಾ ಸಾಗಿರುವ ಈ ಯೋಜನೆಗೆ ಚುರುಕು ಮಾಡಿ, ಆದಷ್ಟು ಬೇಗ ನೀರು ಸರಬರಾಜು ಮಾಡಿ ಎಂದು ಸೂಚಿಸಿದರು.

ಸ್ವಚ್ಛ ಭಾರತ್ ಮಿಷನ್ ಯೋಜನೆಯಲ್ಲಿ ಸೂಪರ್ ಸೆಕ್ಕಿಂಗ್ ಮಿಷನ್ ಖರೀದಿಸಿ ನಗರದ ಜನರಿಗೆ ಈ ಸೌಲಭ್ಯ ನೀಡಬೇಕು ಎಂದು ಹೇಳಿದರು.

ದಿಶಾ ಸಮಿತಿ ಸದಸ್ಯರಾದ ಮಾಜಿ ಶಾಸಕ ಅಶ್ವಿನ್ ಕುಮಾರ್, ಪ್ರೇಮ ಶಂಕರೇಗೌಡ, ನರಸಿಂಹಸ್ವಾಮಿ, ಹೆಚ್.ಸಿ.ಕುಮಾರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಎಸ್.ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಡಿಸಿಪಿ ಸುಂದರ್ ರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅನ್ಯಾಯ ಖಂಡಿಸುತ್ತಿದ್ದವನ ಕುಟುಂಬ ಸದಸ್ಯರ ಮುಂದೆಯೇ ಕೊಚ್ಚಿ ಕೊಂದರು!

ಹುಣಸೂರಲ್ಲಿ ಭೀಕರ ಹತ್ಯೆ

ಹುಣಸೂರು, ನ. 7(ಕೆಕೆ)– ಕುಟುಂಬಸ್ಥರ ಮುಂದೆಯೇ ಮಾರಕಾಸ್ತ್ರಗಳಿಂದ ವ್ಯಕ್ತಿಯೋರ್ವನನ್ನು ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಹುಣಸೂರಿನ ಶಬ್ಬೀರ್‌ನಗರದಲ್ಲಿ ಶುಕ್ರವಾರ ಸಂಜೆ ನಡೆದಿದೆ.



ಖಿಜರ್ ಪಾಷಾ

ಸಾಲಿಗ್ರಾಮ ತಾಲೂಕು ಹೊನ್ನೇನಹಳ್ಳಿ ಗ್ರಾಮದ ಖಿಜರ್ ಪಾಷಾ(50) ಹತ್ಯೆಗೀಡಾದವನಾಗಿದ್ದು, ಅದೇ ಗ್ರಾಮದ ಏಜಾಜ್ ಪಾಷಾ ಮತ್ತವನ ತಂಡ ಈತನನ್ನು ಹತ್ಯೆಗೈದಿದೆ.

ವಿವರ: ಏಜಾಜ್ ಪಾಷಾ ತನ್ನ ಸಹೋದರರು ಸೇರಿದಂತೆ ಹಲವರಿಗೆ ವಂಚನೆ ಮಾಡಿದ್ದ ಎಂದು ಹೇಳಲಾಗಿದ್ದು, ಇಂದು ಹತ್ಯೆಗೀಡಾದ ಖಿಜರ್ ಪಾಷಾ ವಂಚನೆಗೊಳಗಾದವರ ಪರವಾಗಿ ಕೆಲಸ ಮಾಡುತ್ತಿದ್ದರಿಂದ ಇವರಿಬ್ಬರ ನಡುವೆ ದ್ವೇಷ ಬೆಳೆದಿತ್ತು. ಇತ್ತೀಚೆಗೆ ಗ್ರಾಮದಲ್ಲಿ ಇವರಿಬ್ಬರ ನಡುವೆ ಗಲಾಟೆ ನಡೆದಿರುವ ಮಾಹಿತಿಯೂ ಲಭ್ಯವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹುಣಸೂರಿನ ಶಬ್ಬೀರ್‌ನಗರದಲ್ಲಿರುವ ಮುಹಮ್ಮದ್ ಫಯಾಜ್ ಎಂಬುವರ ಹಣ್ಣಿನ ಗೋಡೌನ್‌ಗೆ ಕೊಡಗಿನ ಎಮ್ಮೆಮಾಡು ಗ್ರಾಮದಿಂದ ಮುಸ್ಲಿಂ ಗುರುಗಳು ಪ್ರತಿ ಶುಕ್ರವಾರ ಬರುತ್ತಾರೆಂದು ಹೇಳಲಾಗಿದ್ದು, ಹಲವಾರು ಮುಸ್ಲಿಂ ಬಾಂಧವರು ಇಲ್ಲಿಗೆ ಬಂದು ಅವರ ಆಶೀರ್ವಾದ ಪಡೆಯುತ್ತಾರೆ.

ಅದರಂತೆ ಖಿಜರ್ ಪಾಷಾ ತಮ್ಮ ಕುಟುಂಬಸ್ಥರೊಂದಿಗೆ ಕಾರಿನಲ್ಲಿ ಇಲ್ಲಿಗೆ ಬಂದು ಗುರುಗಳಿಂದ ಆಶೀರ್ವಾದ ಪಡೆದು ಹೊರ ಬರುತ್ತಿದ್ದಂತೆಯೇ ಮತ್ತೊಂದು ಕಾರಿನಲ್ಲಿ ಬಂದಿದ್ದ ಏಜಾಜ್ ಪಾಷಾ, ಮತ್ತವನ ತಂಡ ಮಾರಕಾಸ್ತ್ರಗಳಿಂದ ಖಿಜರ್ ಪಾಷಾನನ್ನು ಕೊಚ್ಚಿ ಕೊಲೆ ಮಾಡಿದೆ. ಮಾಹಿತಿಯೊಂದರ ಪ್ರಕಾರ ಈ ತಂಡದಲ್ಲಿ ಐವರು ಇದ್ದರು ಎನ್ನಲಾಗಿದ್ದು, ಖಿಜರ್ ಪಾಷಾನ ಮುಖ ಸೇರಿದಂತೆ ದೇಹದ 16 ಕಡೆ ಬರ್ಬರವಾಗಿ ಕೊಚ್ಚಲಾಗಿದೆ.

ಹತ್ಯೆಯ ನಂತರ ಹಂತಕರು ಕಾರಿನಲ್ಲಿ ಪರಾರಿಯಾಗಿದ್ದು, ಘಟನಾ ಸ್ಥಳಕ್ಕೆ ಜಿಲ್ಲಾ ಎಸ್ಪಿ ವಿಷ್ಣುವರ್ಧನ್, ಅಡಿಷನಲ್ ಎಸ್ಪಿ ಮಲ್ಲಿಕ್, ಡಿವೈಎಸ್ಪಿ ರವಿ, ಹುಣಸೂರು ಪಟ್ಟಣ ಠಾಣೆಯ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆರೋಪಿಗಳ ಪತ್ತೆಗಾಗಿ ಹುಣಸೂರು ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಮತ್ತು ಸಾಲಿಗ್ರಾಮ ಠಾಣೆ ಇನ್ಸ್‌ಪೆಕ್ಟರ್ ಶಶಿಕುಮಾರ್ ನೇತೃತ್ವದಲ್ಲಿ ಎರಡು ತಂಡಗಳನ್ನು ರಚಿಸಲಾಗಿದೆ.

ಹುಟ್ಟುಹಬ್ಬದ ಶುಭಾಶಯ....



ಚಿತ್ರ ನಿರ್ಮಾಪಕ, ಉದ್ಯಮಿ ಎನ್.ಸಂದೇಶ್ ಅವರ ಹುಟ್ಟುಹಬ್ಬದ ಪ್ರಯುಕ್ತ ಅವರನ್ನು ಚಂದ್ರೇಗೌಡ, ರಾಧಾಕೃಷ್ಣ ರಮೇಶ್, ಬಿ.ಸುರೇಶ್ ಅಭಿನಂದಿಸಿ, ಶುಭಾಶಯ ಕೋರಿದರು.

ಇಂದು ನವೋದ್ಯಮ ಪ್ರದರ್ಶನ ಕಾರ್ಯಕ್ರಮ

ಮೈಸೂರು, ನ.7(ಜಿಎ)– ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಸಂಸ್ಥೆಗಳ ಕ್ಯಾಂಪಸ್‌ನ ಆರ್.ಪಿ.ಸಿಂಘಾನಿಯಾ ಸಭಾಂಗಣದಲ್ಲಿ ನ.8ರಂದು ಬೆಳಗ್ಗೆ 10 ಗಂಟೆಗೆ ಜೆಎಸ್‌ಎಸ್ ತಾಂತ್ರಿಕ ಮತ್ತು ತಂತ್ರಜ್ಞಾನ ವಿವಿಯ ಸ್ಟೆಪ್ ವಿಭಾಗದ ವತಿಯಿಂದ ನವೋದ್ಯಮ ಪ್ರದರ್ಶನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಸ್ಟೆಪ್ ಸಿಇಓ ಶಿವಶಂಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಕಳೆದ 10 ವರ್ಷದಿಂದ ಸ್ಟಾರ್ಟ್ ಅಪ್ ಉದ್ಯಮ ಹೆಚ್ಚಳಗೊಂಡಿದ್ದು, ಅದಕ್ಕೆ ಅನುಗುಣವಾಗಿ ಸ್ಟೆಪ್ ವತಿಯಿಂದ ನವೋದ್ಯಮಿಗಳ ಸ್ಟಾರ್ಟ್ ಅಪ್‌ಗೆ ತರಬೇತಿ ಸಹಕಾರ ನೀಡಿದ್ದು, 20 ಮಂದಿ ವಿವಿಧ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಹೇಗೆ ಅಳವಡಿಸಿಕೊಳ್ಳಬಹುದು ಎಂಬ ಯೋಜನೆಗಳನ್ನು ರೂಪಿಸಿದ್ದಾರೆ. ಅದನ್ನು ಮತ್ತಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ವಿಶೇಷವಾಗಿ ಹೂಡಿಕೆದಾರರು, ಮಾರ್ಗದರ್ಶಕರ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದರು.

ಪ್ರದರ್ಶನದಲ್ಲಿ ನವೋದ್ಯಮಿಗಳು ತಮ್ಮ ಯೋಜನೆಗಳನ್ನು ಹೂಡಿಕೆದಾರರಿಗೆ ತಿಳಿಸಿ, ಅದನ್ನು ದೊಡ್ಡಮಟ್ಟದಲ್ಲಿ ರೂಪಿಸಿಕೊಳ್ಳಬಹುದು ಅಥವಾ ಹೂಡಿಕೆದಾರರೊಂದಿಗೆ ಕೈ ಜೋಡಿಸಬಹುದಾಗಿದೆ. ಇದರಿಂದ ನೂತನ ಉದ್ಯಮಿಗಳಿಗೆ ಹೊಸ ವೇದಿಕೆ ಸೃಷ್ಟಿಯಾಗಲಿದೆ ಎಂದು ತಿಳಿಸಿದರು.

ಈಗ ಶಿಕ್ಷಕರು ರಾಜಕೀಯ ಪಕ್ಷಗಳ ವಕ್ತಾರರಂತೆ ವರ್ತಿಸುತ್ತಿದ್ದಾರೆ

● ನಿವೃತ್ತ ಪ್ರಾಧ್ಯಾಪಕ ಪ್ರೊ. ಎಂ.ಕೃಷ್ಣೇಗೌಡ ವಿಷಾದ ● ಸರ್ಕಾರದ ಪಾಲಿಗೆ ವಿಶ್ವವಿದ್ಯಾನಿಲಯಗಳು ಈಗ ಆದ್ಯತಾ ವಲಯವಾಗಿಲ್ಲ ● ಪಿಡಿಓ, ವಿಎಗಳ ನೇಮಕಕ್ಕೆ ತೋರುವ ಆಸಕ್ತಿಯನ್ನ ವಿವಿ ಕುಲಪತಿ ನೇಮಕಕ್ಕೆ ತೋರುತ್ತಿಲ್ಲ

ಮೈಸೂರು, ನ.7(ವಿವಿಹೆಚ್)– ಶಿಕ್ಷಕರು ರಾಜಕೀಯ ಪಕ್ಷಗಳ ವಕ್ತಾರರಂತೆ ವರ್ತಿಸುತ್ತಿದ್ದಾರೆ. ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದವರು ಈಗ ರಾಜಕೀಯ ಪಕ್ಷಗಳ ಜಾಡು ಹಿಡಿಯುತ್ತಿದ್ದಾರೆ. ಇತಹವರಿಂದಾಗಿ ಶಿಕ್ಷಕರ ಮೇಲಿನ ಗೌರವ ಇಂದು ಕಡಿಮೆಯಾಗುತ್ತಿದೆ ಎಂದು ಸಾಹಿತಿ ಪ್ರೊ. ಎಂ.ಕೃಷ್ಣೇಗೌಡ ವಿಷಾಧಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಇಎಂಆರ್‌ಸಿ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಅಧ್ಯಾಪಕರ ಸಂಘದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಮೈಸೂರು ವಿಶ್ವವಿದ್ಯಾನಿಲಯ ಅಧ್ಯಾಪಕರ ಸಂಘ (ಎಂಯುಟಿಎ) ನೂತನ ಕಚೇರಿ ಉದ್ಘಾಟನೆ, ಶಿಕ್ಷಕರ ದಿನಾಚರಣೆ ಮತ್ತು ನಿವೃತ್ತ ಅಧ್ಯಾಪಕರುಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣಕಾರರಾಗಿ ಅವರು ಮಾತನಾಡಿದರು.



ಕಾರ್ಯಕ್ರಮ ಉದ್ದೇಶಿಸಿ ಸಾಹಿತಿ ಪ್ರೊ. ಎಂ.ಕೃಷ್ಣೇಗೌಡ ಮಾತನಾಡಿದರು.

ಸಮಾಜದಲ್ಲಿ ಸಾಹಿತಿಗಳು, ಚಿಂತಕರು, ವಿಚಾರವಾದಿಗಳು, ಬುದ್ಧಿಜೀವಿಗಳು, ಶಿಕ್ಷಕರು ಎಂದು ಗುರುತಿಸಿಕೊಂಡಿರುವವರು ಸಮಾಜದ ಪರವಾಗಿ ಧ್ವನಿ ಎತ್ತದೆ, ರಾಜಕೀಯ ಪಕ್ಷಗಳ ವಕ್ತಾರರಾಗಿ ಬದಲಾಗಿದ್ದಾರೆ. ಪ್ರಾಧ್ಯಾಪಕರುಗಳಾಗಿ ಸೇವೆ ಸಲ್ಲಿಸುತ್ತಿದ್ದವರು ಈಗ ರಾಜಕೀಯ ಪಕ್ಷಗಳ ಜಾಡು ಹಿಡಿಯುತ್ತಿದ್ದಾರೆ. ಇವರಿಂದ ಶಿಕ್ಷಕರ ಮೇಲಿನ ಗೌರವ ಇಂದು ಕಡಿಮೆಯಾಗುತ್ತಿದೆ ಎಂದು ಬೇಸರಿಸಿದರು.

ಇಂದಿನ ದಿನಗಳಲ್ಲಿ ಸರ್ಕಾರಗಳಿಗೆ ವಿವಿಗಳು ಆದ್ಯತೆಯ ವಲಯಗಳಾಗಿ ಉಳಿದಿಲ್ಲ. ಪಿಡಿಓ, ಕಂದಾಯ ಅಧಿಕಾರಿ, ವಿಎ ಅಧಿಕಾರಿ ನೇಮಿಸಲು ತೋರುವ ಆಸಕ್ತಿಯನ್ನು ವಿವಿ ಕುಲಪತಿ ನೇಮಿಸಲು ತೋರುವುದಿಲ್ಲ. ಇದನ್ನು ಪ್ರಶ್ನಿಸುವವರು ನಾವಾಗಬೇಕು. ಬದಲಾಗಿ ಅವರ ಹಂಗಿಗೆ ಬಿದ್ದು, ವಾಕ್ ಸ್ವಾತಂತ್ರ್ಯ ಕಳೆದುಕೊಂಡು ಸಮಾಜದ ಕೇಡಿಗೆ ಕಾರಣವಾಗಬಾರದು ಎಂದರು.

ನಾವುಗಳು ಮಾಡಿದ ತಪ್ಪುಗಳನ್ನು ಸಮರ್ಥಿಸಿಕೊಳ್ಳುವಷ್ಟು ದೊಡ್ಡವರಾಗಿದ್ದೇವೆ. ನಾವು ಬದುಕುವ ಮಾರ್ಗ, ಮಾಡುವ ಕೆಲಸ ಬೇರೆ ಬೇರೆ ಇದ್ದಾಗ ಸಮಾಜದಲ್ಲಿ ಗೌರವ ಸಿಗುವುದಿಲ್ಲ. ಮೊದಲು ನಾವು ಮಾಡುವ ಕೆಲಸಕ್ಕೆ ನಿಷ್ಠಾವಂತರಾಗಿರಬೇಕು ಎಂದರು.

ಶಿಕ್ಷಕರು ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡಬೇಕು. ಇಲ್ಲವಾದಲ್ಲಿ ನಿಮ್ಮ ವಿದ್ಯಾರ್ಥಿಗಳೇ ನಿಮ್ಮನ್ನು ಒಪ್ಪುವುದಿಲ್ಲ. ನಿಷ್ಕಾರಣವಾಗಿ ಸಮಾಜ ಕೆರಳುತ್ತಿದೆ. ಜೆನ್–ಝೀ ಅನಗತ್ಯವಾಗಿ ಕೆರಳುವ, ಜಾತಿ, ಮತ, ಜಿಲ್ಲೆ, ಭಾಷೆ ಯಾವುದೇ ಒಂದು ವಿಚಾರವಾಗಿ ಬಹುಬೇಗ ಪ್ರವೋಕ್ ಆಗುತ್ತಿದ್ದಾರೆ. ಇಂತಹ ಸಮಾಜದಲ್ಲಿ ಯಾರನ್ನೂ ಬೇಕಾದರೂ ಹೆದರಿಸುವುದು ತುಂಬಾ ಸುಲಭವಾಗಿದೆ.

ಕಾಲ ಬಹಳ ವೇಗವಾಗಿ ಸಾಗಿದೆ. ಎಐ ಆಯ್ತು, ಈಗ ಸಿಂಥೆಟಿಕ್ ಇಂಟೆಲಿಜೆನ್ಸ್ ಬರಲಿದೆ ಎಂದು ವಿಶ್ವದಾದ್ಯಂತ ಭಾರೀ ಚರ್ಚೆಯಾಗುತ್ತಿದೆ. ಮುಂದುವರಿದ ರಾಷ್ಟ್ರಗಳಲ್ಲಿ ಶಿಕ್ಷಕರ ಅವಶ್ಯಕತೆಯೇ ಇಲ್ಲ ಎಂದು ಹೇಳಲಾಗುತ್ತಿದೆ. ನಮ್ಮಲ್ಲಿ ಜ್ಞಾನವಿಲ್ಲದೇ ಹೋದಲ್ಲಿ, ಬಹುಮಾಧ್ಯಮಗಳನ್ನು ನಂಬಿ ಕೆಲಸ ಮಾಡಿದ್ದಲ್ಲಿ, ಶಿಕ್ಷಕರನ್ನು ಕೇವಲ ಸಹಾಯಕರನ್ನಾಗಿ ನೋಡುವ ಕಾಲ ದೂರವಿಲ್ಲ ಎಂದು ಎಚ್ಚರಿಸಿದರು.

ಮೈಸೂರು ವಿವಿ ಕುಲಪತಿ ಪ್ರೊ ಕೆಎನ್.ಲೋಕನಾಥ್ ಮಾತನಾಡಿ, ಮೈಸೂರು ವಿವಿ ಆಡಳಿತ ವರ್ಗ ಮತ್ತು ಅಧ್ಯಾಪಕ ವರ್ಗ ಒಂದಾಗುವ ಒಂದು ಕಾರ್ಯಕ್ರಮವಾಗಿದೆ. ಶತಮಾನಗಳ ಇತಿಹಾಸವಿರುವ ವಿವಿಯಲ್ಲಿ ನೂತನ ಸಂಘದಿಂದ ಮತ್ತಷ್ಟು ಕಾರ್ಯಕ್ರಮಗಳು ಆಯೋಜನೆಯಾಗಲಿ. ವಿವಿ ವತಿಯಿಂದ ಎಲ್ಲಾ ಸಹಕಾರ ಮತ್ತು ಬೆಂಬಲವನ್ನು ನೂತನ ಸಂಘಕ್ಕೆ ನೀಡುತ್ತೇವೆ. ವಿವಿಯ ಸಮಗ್ರ ಅಭಿವೃದ್ಧಿಗೆ ಸಂಘ ಶ್ರಮಿಸುವಂತಾಗಲಿ ಎಂದರು.

ಈ ವೇಳೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ ಅಧ್ಯಾಪಕರ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಸಚಿವೆ (ಆಡಳಿತ) ಎಂ.ಕೆ.ಸವಿತಾ, ಕುಲಸಚಿವ (ಪರೀಕ್ಷಾಂಗ) ಪ್ರೊ.ಎನ್.ನಾಗರಾಜು, ಹಣಕಾಸು ಅಧಿಕಾರಿ ಕೆ.ಎಸ್. ರೇಖಾ, ಎಂಯುಟಿಎ ಅಧ್ಯಕ್ಷ ಪ್ರೊ.ಎಂ.ಪಿ. ಸದಾಶಿವ, ಉಪಾಧ್ಯಕ್ಷರಾದ ಪ್ರೊ.ಆರ್.ಶೇಖರ್ ನಾಯಕ್, ಪ್ರೊ.ರಾಜಕುಮಾರ್ ಹೆಚ್. ಗಾರಂಪಳ್ಳಿ, ಖಜಾಂಚಿ ಪ್ರೊ.ಹೆಚ್.ಪಿ.ಜ್ಯೋತಿ, ಜಂಟಿ ಕಾರ್ಯದರ್ಶಿ ಪ್ರೊ.ನವಿತಾ ತಿಮ್ಮಯ್ಯ ಉಪಸ್ಥಿತರಿದ್ದರು.

ಸರ್ಕಾರ ಮಾಜಿ ಸೈನಿಕರ ಬೇಡಿಕೆ ಈಡೇರಿಸಲು ಎಂಎಲ್‌ಸಿ ಸಿ.ಎನ್.ಮಂಜೇಗೌಡ ಒತ್ತಾಯ




ಮೈಸೂರು, ನ.7– ದೇಶಕ್ಕಾಗಿ ಜೀವದ ಹಂಗು ತೊರೆದು ಸೇನೆಯಲ್ಲಿ ಸೇವೆ ಸಲ್ಲಿಸಿದ ಮಾಜಿ ಸೈನಿಕರಿಗೆ ಹಾಗೂ ವೀರ ಮರಣವನ್ನು ಹೊಂದಿದ ಸೈನಿಕರ ಪತ್ನಿಯರಿಗೆ ಸರ್ಕಾರ ಸ್ಪಂದಿಸಿ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಲು ಮಾಜಿ ಸೈನಿಕರ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ನಡೆದ ಸಭೆಯಲ್ಲಿ ಮೈಸೂರು ಜಿಲ್ಲೆಯಲ್ಲಿನ 3500 ಮಾಜಿ ಸೈನಿಕರು, 1200 ಮಾಜಿ ಸೈನಿಕರ ವಿಧವಾ ಪತ್ನಿಯರಿದ್ದಾರೆ, ಹಾಗೂ ಅವಲಂಬಿತರಿಗೆ ಜವಾನ್ ಸಮ್ಮಾನ್ ಬಡಾವಣೆ ನಿರ್ಮಿಸಿ ಉಚಿತ ನಿವೇಶನ ನೀಡಬೇಕು. ಸೈನಿಕರಿಗೆ ಹಾಗೂ ಅವಲಂಬಿತರಿಗೆ ಇಸಿಹೆಚ್‌ಎಸ್ ಆರೋಗ್ಯ ಕೇಂದ್ರ ಸ್ಥಾಪಿಸಲಾಗಿದೆ. ಆದರೆ ಕೆಲವು ಖಾಸಗಿ ಆಸ್ಪತ್ರೆಗಳು ಇಸಿಹೆಚ್‌ಎಸ್ ಸೇವೆ ನೀಡಲು ನಿರಾಕರಿಸುತ್ತಿವೆ. ಈ ಸಮಸ್ಯೆ ಬಗೆಹರಿಯಬೇಕು.

ಮೈಸೂರಿನಲ್ಲಿ ನಿರ್ಮಿಸುತ್ತಿರುವ ಯುದ್ಧ ಸ್ಮಾರಕವನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು. ಯುದ್ಧ ಸ್ಮಾರಕ ಸಮಿತಿಗೆ ಸಂಘದ ಅಧ್ಯಕ್ಷರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಬೇಕು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಮಾಜಿ ಸೈನಿಕರ ಕುಂದು ಕೊರತೆ 2019 ರಿಂದಲೂ ನಡೆದಿಲ್ಲ, ಪ್ರತಿ ವರ್ಷ ನಡೆಯಬೇಕು. ಉಚಿತ ನಿವೇಶನಕ್ಕೆ ಇದುವರೆಗೆ ಅರ್ಜಿ ನೀಡದ ಮಾಜಿ ಸೈನಿಕರಿಗೆ ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು. ಜಿಲ್ಲಾಧಿಕಾರಿಗಳು, ಮಾಜಿ ಸೈನಿಕರ ಸಂಘಕ್ಕೆ ಮಾನ್ಯತೆ ನೀಡುವ ಮುಖಾಂತರ ನಮ್ಮ ಸಂಘದ ಘನತೆಯನ್ನು ಹೆಚ್ಚಿಸಬೇಕು ಎಂದು ಒತ್ತಾಯಿಸಿದ ಅವರು ಈ ಸಂಬಂಧ ಕಂದಾಯ ಸಚಿವ ಕೃಷ್ಣಭೈರೇಗೌಡರಿಗೂ ಮನವಿ ಸಲ್ಲಿಸಲು ತೀರ್ಮಾನಿಸಿದರು.

ಸಭೆಯಲ್ಲಿ ಸಂಘದ ಅಧ್ಯಕ್ಷ ಕೆ.ಪಿ. ದಿವಾಕರ, ಕಾರ್ಯದರ್ಶಿ ಎಸ್. ನಟರಾಜು, ಖಜಾಂಚಿ ಬಿ.ಎಂ. ಚಿತ್ರ ಹಾಗೂ ಉಪಾಧ್ಯಕ್ಷರುಗಳಾದ ನೀಲಕಂಠ ಕುಮಾರ್ ಶೆಟ್ಟಿ, ಶಿವಕುಮಾರ್ ಎಸ್., ನಂಜುಂಡಸ್ವಾಮಿ ಹೆಚ್.ಎಸ್. ಉಪಸ್ಥಿತರಿದ್ದರು.

ಮೈಸೂರಿನಿಂದ ಬ್ರಾಹ್ಮಣ ಮಹಾಸಭೆಗೆ ನೂತನ ಅರ್ಜಿಗಳ ಹಸ್ತಾಂತರ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನೊಂದಾಯಿಸಿದ ನೂತನ ಅರ್ಜಿಗಳನ್ನು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್ ರಘುನಾಥ್ ಅವರಿಗೆ ಮೈಸೂರಿನ ಮಾಜಿ ಸಂಘಟನಾ ಕಾರ್ಯದರ್ಶಿ ಎಸ್.ರಂಗನಾಥ್ ನೇತೃತ್ವದ ತಂಡದಿಂದ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಮುಡಾ ಮಾಜಿ ಅಧ್ಯಕ್ಷರೂ ಆದ ಮಹಾಸಭಾ ಮಾಜಿ ರಾಜ್ಯ ಉಪಾಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ರಾಜ್ಯ ಉಪಾಧ್ಯಕ್ಷರಾದ ಹೆಚ್.ಜೆ.ಅನಿಲ್‌ಕುಮಾರ್, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯ ಎನ್.ವಿಶ್ವನಾಥ್, ವಿಪ್ರ ಮುಖಂಡರಾದ ಎನ್.ನಾಗಭೂಷಣ್, ಮಹೇಶ್ ಉಪಸ್ಥಿತರಿದ್ದರು.


ಕಾಡು, ವನ್ಯಜೀವಿಗಳಿಗೆ 'ಲಂಟಾನ ಕಳೆ' ಕಂಟಕವಾಗಿದೆ

- ಪ್ರಸ್ತುತ ಮಾನವ–ವನ್ಯಜೀವಿ ಸಂಘರ್ಷಕ್ಕೂ ಇದೇ ಕಾರಣ
- ಹುಲಿಗಳ ಸಂತತಿಯಲ್ಲಿ ಗಮನಾರ್ಹ ಏರಿಕೆ ಆಗಿರುವುದು ಎಲ್ಲರಿಗೂ ಗೊತ್ತಿದೆ
- ಆದರೆ, ಕಾಡಿನ ಪರಿಸ್ಥಿತಿಯನ್ನು ವೈಜ್ಞಾನಿಕವಾಗಿ ಅವಲೋಕಿಸುತ್ತಿಲ್ಲ
- ವನ್ಯಜೀವಿ ಛಾಯಾಗ್ರಾಹಕ, ಪರಿಸರ ತಜ್ಞ ಕೃಪಾಕರ್ ವಿಶ್ಲೇಷಣೆ

ಮೈಸೂರು, ನ.7(ಎಸ್‌ಬಿಡಿ)– ಅಪಾಯಕಾರಿ 'ಲಂಟಾನ ಕಳೆ'ಯೂ ಮಾನವ–ವನ್ಯಜೀವಿ ಸಂಘರ್ಷಕ್ಕೆ ಒಂದು ಪ್ರಮುಖ ಕಾರಣವಾಗಿದೆ ಎಂದು ಅಂತಾರಾಷ್ಟ್ರೀಯ ಖ್ಯಾತಿಯ ವನ್ಯಜೀವಿ ಛಾಯಾಗ್ರಾಹಕರೂ ಆದ ಪರಿಸರ ತಜ್ಞ ಕೃಪಾಕರ್ ಅಭಿಪ್ರಾಯಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ವನ್ಯಜೀವಿ–ಮಾನವ ಸಂಘರ್ಷ ಅದರಲ್ಲೂ ಹುಲಿ ದಾಳಿ ವಿಪರೀತವಾಗಿರುವ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ನಮ್ಮ ನಾಡು ಹಾಗೂ ದೇಶದಲ್ಲಿ ಹುಲಿ ಸಂತತಿ ಹೆಚ್ಚಾಗಿದೆ ಎಂದು ಪ್ರಧಾನ ಮಂತ್ರಿಗಳಿಂದ ಹಿಡಿದು ಪ್ರತಿಯೊಬ್ಬರೂ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಆದರೆ, ಅವುಗಳ ವಾಸಸ್ಥಾನ, ಕಾಡಿನ ಪರಿಸ್ಥಿತಿ ಬಗ್ಗೆ ಯಾರೂ ವೈಜ್ಞಾನಿಕವಾಗಿ ಚಿಂತನೆ ನಡೆಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮೊದಲಿಗೆ ಬಂಡೀಪುರ, ನಾಗರಹೊಳೆ, ಬಿಳಿಗಿರಿ ರಂಗನ ಬೆಟ್ಟ ಕಾಡಿನ ಆರೋಗ್ಯ ಪರಿಸ್ಥಿತಿ ಹೇಗಿದೆ ಎಂಬುದನ್ನು ಅವಲೋಕಿಸಬೇಕಿದೆ. ಶತಮಾನದ ಹಿಂದೆ ಬ್ರಿಟಿಷರ ಮೂಲಕ ಯಾವುದೋ ದೇಶದಿಂದ ಭಾರತಕ್ಕೆ ವಕ್ಕರಿಸಿದ ಲಂಟಾನ ಅಪಾಯಕಾರಿ ಕಳೆ, ಪ್ರಸ್ತುತ ಶೇ.60ರಷ್ಟು ಕಾಡನ್ನು ಆಕ್ರಮಿಸಿಕೊಂಡಿದೆ ಎಂಬ ಮಾಹಿತಿ ಇದೆ. ಹೂವು ಸುಂದರವಾಗಿದೆ ಎಂದು ಭಾವಿಸಿದ್ದ ಜನರಿಗೆ ಈ ಗಿಡ ಇಷ್ಟೊಂದು ಅಪಾಯಕಾರಿ ಎಂದು ತಿಳಿದಿರಲಿಲ್ಲ. ಈ ಪರಿಸ್ಥಿತಿ ಕೈಮೀರಿದೆ. ಲಂಟಾನ ಕಳೆ, ಇದು ದಟ್ಟ ಪೊದೆಗಳಾಗಿ ಬೆಳೆದು ಸ್ಥಳೀಯ ಜೀವವೈವಿಧ್ಯತೆಯನ್ನು ಹಾಳು ಮಾಡಿದೆ. ಹುಲ್ಲು ಇನ್ನಿತರೆ ಪರಿಸರ ಸ್ನೇಹಿ, ಪಶು ಆಹಾರವಾಗಿರುವಂತಹ ಗಿಡಗಳನ್ನು ಬೆಳೆಯಲು ಅವಕಾಶ ಮಾಡಿಕೊಡುವುದಿಲ್ಲ. ಇದರಿಂದ ಜಿಂಕೆ, ಕಡವೆ, ಕಾಡೆಮ್ಮೆಗಳಂತಹ ಪ್ರಾಣಿಗಳ ಸಂಖ್ಯೆ ಕಾಲಾಂತರದಲ್ಲಿ ಕಡಿಮೆ ಆಗುತ್ತಿದೆ. ಪರಿಣಾಮ ಮಾಂಸಾಹಾರಿ ಪ್ರಾಣಿಗಳಿಗೆ ಆಹಾರದ ಕೊರತೆ ಸೃಷ್ಟಿಯಾಗಿದೆ ಎಂದು ತಿಳಿಸಿದ್ದಾರೆ.



ಕೃಪಾಕರ್

ಲಂಟನಾ ಗಿಡಗಳು ಮೂರ್‍ನಾಲ್ಕು ದಶಕಗಳಿಂದಲೂ ಕಾಡನ್ನು ಆವರಿಸಿದ್ದು, ತಕ್ಷಣಕ್ಕೆ ಸುಲಭವಾಗಿ ನಿಯಂತ್ರಿಸುವುದು ಅಸಾಧ್ಯ. ಇದಕ್ಕೆ ಯಾವುದೆ ತಂತ್ರಜ್ಞಾನವೂ ಇಲ್ಲ. ಜೆಸಿಬಿಯಂತಹ ಯಂತ್ರೋಪಕರಣಗಳನ್ನೂ ಬಳಸಲಾಗದು. ಈ ಕಾರ್ಯವನ್ನು ಮ್ಯಾನ್ಯುಯಲ್ (ಕೈಯಿಂದ) ಆಗಿಯೇ ಮಾಡಬೇಕಿದೆ. ಆದ್ದರಿಂದ ತುಂಬಾ ಸಮಯ ಬೇಕಾಗಬಹುದು. ಈ ಕಾರ್ಯಕ್ಕೆ ಬುಡಕಟ್ಟು ಜನರನ್ನು ಬಳಸಿಕೊಳ್ಳ ಬೇಕು. ಇದರ ಬಗ್ಗೆ ಅವರಿಗೆ ತಿಳುವಳಿಕೆ ಇರುತ್ತದೆ. ಹೀಗೆ ಮಾಡುವುದರಿಂದ ಬುಡಕಟ್ಟು ಜನರಿಗೆ ವರ್ಷವಿಡೀ ಉದ್ಯೋಗ ನೀಡುವುದರ ಜೊತೆಗೆ ಕಾಡಿನ ಗುಣಮಟ್ಟ ಹಾಗೂ ಸಸ್ಯಾಹಾರ ಪ್ರಾಣಿಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ಈ ಮೂಲಕ ವನ್ಯಜೀವಿಗಳು ಹೊರಗೆ ಬಂದು ತಾಪತ್ರಯ ಮಾಡುವುದೂ ಕಡಿಮೆಯಾಗಬಹುದು ಎಂದು ಅಭಿಪ್ರಾಯಿಸಿದ್ದಾರೆ.

ನಾವೇ ಕಾಡಿನ ಗಡಿ ನಿರ್ಧರಿಸಿದ್ದೇವೆ!: ಹಿಂದೆ ರೈತರಿಗೆ ಮಂಜೂರು ಮಾಡಿದ್ದ ಕಾಡಂಚಿನ ಭೂಮಿಯನ್ನು ಬಹಳ ವರ್ಷಗಳಿಂದ ಹಾಗೆಯೇ ಬಿಟ್ಟಿದ್ದರಿಂದ ಅಲ್ಲಿ ಕುರುಚಲು ಕಾಡು ಬೆಳೆದಿತ್ತು. ಅಂತಹ ಭಾಗದಲ್ಲೂ ಒಂದಷ್ಟು ಪ್ರಾಣಿಗಳು ಓಡಾಡಿಕೊಂಡಿದ್ದವು. ಆದರೆ ಭೂಮಿಯ ಬೆಲೆ ಹೆಚ್ಚಾಗಿದ್ದರಿಂದ ಆ ಭೂಮಿಯೆಲ್ಲಾ ಬಟಾಬಯಲಾಗಿದೆ. ಪ್ರಾಣಿಗಳ ದೃಷ್ಟಿಯಲ್ಲಿ ಅಷ್ಟೂ ಕಾಡು ಹಾಳಾದಂತೆ. ಮನುಷ್ಯನಿಗೆ ಒಳ್ಳೆಯದಾಗಬೇಕು, ಅನುಕೂಲವಾಗಬೇಕು ಎಂಬ ದೃಷ್ಟಿಕೋನದಲ್ಲಿ ಮಾತ್ರ ಯೋಚಿಸಿ, ತಿಳುವಳಿಕೆ ಇಲ್ಲದೆ ನಾವೇ ಕಾಡಿನ ಗಡಿ ನಿಗದಿಪಡಿಸಿದ್ದೇವೆ. ಆದರೆ ತನ್ನ ಸಂತತಿ ಎಲ್ಲಾ ಕಡೆಯಲ್ಲೂ ವೃದ್ಧಿಸಬೇಕು ಎಂಬ ಮೂಲ ತತ್ವ ಹೊಂದಿರುವ ವನ್ಯಜೀವಿಗಳು, ಮರಿಗಳಿಗೆ ಜನ್ಮ ನೀಡಿದಾಗ ಅವು ಹೊಸ ಜಾಗ ಹುಡುಕುತ್ತವೆ.

ಹುಲಿಗಳು ವಯೋಸಹಜವಾಗಿ ಶಕ್ತಿ ಕಳೆದುಕೊಂಡಾಗ ಕಾಡಿನಲ್ಲಿ ಬೇಟೆಯಾಡುವುದು, ಬೇರೆ ಪ್ರಾಣಿಯೊಂದಿಗೆ ಸೆಣಸಾಡಿ ತನ್ನ ಸಾಮ್ರಾಜ್ಯ ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ. ಅಲ್ಲದೆ ಬೇರೆಡೆಯಿಂದ ಬರುವ ಗಂಡು ಹುಲಿ ಓಡಿಸಿಬಿಡುತ್ತವೆ. ಬೇರೆ ಜಾಗ ಹುಡುಕಿದರೂ ಸಿಗದಿದ್ದಾಗ ಕಾಡಂಚಿನ ಜಮೀನುಗಳ ಕಡೆ ಬರುತ್ತವೆ. ಕೆಲವೊಮ್ಮೆ ಮುಳ್ಳಂದಿ ಹಿಡಿದಾಗ ಬಾಯಿಗೆ ಮುಳ್ಳು ಚುಚ್ಚಿ ಕೀವುಕಟ್ಟಿ ಏನನ್ನೂ ತಿನ್ನಲಾಗದ ಸ್ಥಿತಿ ತಲುಪುತ್ತವೆ. ಪ್ರೌಢಾವಸ್ಥೆಯಲ್ಲಿರುವ ಹುಲಿಗಳೂ ಈ ರೀತಿ ಗಾಯದಿಂದಾಗಿ ಕಾಡು ಪ್ರಾಣಿಗಳ ಹಿಡಿಯುವ ಸಾಮರ್ಥ್ಯ ಕಳೆದುಕೊಳ್ಳುತ್ತವೆ. ಆಗ ಸುಲಭವಾಗಿ ಲಭ್ಯವಾಗಬಹುದಾದ ಮನುಷ್ಯರನ್ನು ಗುರಿಯಾಗಿಸಿಕೊಳ್ಳುತ್ತವೆ. ಸರಗೂರು ಭಾಗದ ಎರಡು ಪ್ರಕರಣಗಳನ್ನು ಗಮನಿಸಿದರೆ ಹುಲಿಗಳು ದಾಳಿ ನಡೆಸಿವೆಯೇ ಹೊರತು ತಿಂದಿಲ್ಲ. 10–12 ವರ್ಷದ ಹಿಂದೆ ಇದೇ ರೀತಿಯ ಪ್ರಕರಣ ನಡೆದಿತ್ತು. ದಾಳಿ ನಡೆಸುತ್ತಿದ್ದ ಹುಲಿ, ಬೇಟೆಯನ್ನು ತಿನ್ನಲಾಗದೆ ಒಂದು ದಿನ ಹಸಿವಿನಿಂದಲೇ ಸಾವನ್ನಪ್ಪಿತು.

ರೆಸಾರ್ಟ್‌ಗಳೇ ಕಾರಣ ಎನ್ನಲಾಗದು: ಈಗ ಹುಲಿಗಳು ಕಾಡಿನಿಂದ ಹೊರ ಬಂದಿರುವುದಕ್ಕೆ ಟ್ರೆಕ್ಕಿಂಗ್, ಸಫಾರಿ, ರೆಸಾರ್ಟ್‌ಗಳು ನೇರ ಕಾರಣ ಎನ್ನಲಾಗದು. ಆದರೆ ಕಾಡಿಗಾಗಿ ನಾವು ಸ್ವಲ್ಪ ಜಾಗವನ್ನೇ ಮೀಸಲಿಟ್ಟಿರುವುದರಿಂದ ಈ ರೀತಿಯ ಚಟುವಟಿಕೆಗಳನ್ನು ನಿಯಂತ್ರಿಸಲೇಬೇಕು. ರೆಸಾರ್ಟ್‌ಗಳ ಪರಿಶೀಲನೆ ಮಾಡಿ, ಅಗತ್ಯವಿದ್ದರೆ ತೆರವು ಮಾಡಬೇಕಿದೆ. ಇದೇ ಕಾರಣಕ್ಕೆ ಹುಲಿಗಳು ಹೊರ ಬಂದಿದೆ ಎಂದು ಹೇಳುವುದು ಅಸಾಧ್ಯವಾದರೂ ಈ ಸಮಯದಲ್ಲಿ ಪ್ರಶ್ನೆ ಎದ್ದಿರುವುದು ಬಹಳ ಮುಖ್ಯವೆನಿಸುತ್ತದೆ ಎಂದು ತಿಳಿಸಿದ್ದಾರೆ.

ಮಾಜಿ ಸಚಿವ ರಾಜಣ್ಣ ಔತಣಕೂಟದ ಅಹಿಂದ ಸಭೆ ಹಠಾತ್ ರದ್ದು

ಬೆಂಗಳೂರು, ನ.7(ಕೆಎಂಶಿ)– ಅಧಿಕಾರ ಹಸ್ತಾಂತರ ಕೂಗಿನ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಹಾಗೂ ಮಾಜಿ ಸಚಿವ ಕೆ.ಎನ್.ರಾಜಣ್ಣ ತುಮಕೂರಿನ ತಮ್ಮ ನಿವಾಸದಲ್ಲಿ ಶುಕ್ರವಾರ ಕರೆದಿದ್ದ ಔತಣಕೂಟದ ಅಹಿಂದ ಸಭೆ ಹಠಾತ್ ರದ್ದಾಗಿದೆ.

ರಾಜಣ್ಣ ಕರೆದಿದ್ದ ಭೋಜನಕೂಟದ ಸಭೆಗೆ ಸಿದ್ದರಾಮಯ್ಯ ಸೇರಿದಂತೆ ಸಂಪುಟದ ಹಲವು ಸಹೋದ್ಯೋಗಿಗಳು ಮತ್ತು ಶಾಸಕರು ಭಾಗಿಯಾಗಬೇಕಿತ್ತು.

ಕಬ್ಬು ದರ ಹೆಚ್ಚಳಕ್ಕೆ ಬೆಳೆಗಾರರು ನಡೆಸುತ್ತಿರುವ ಧರಣಿ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಇಂದು ಮಾಲೀಕರು ಮತ್ತು ರೈತ ಮುಖಂಡರೊಂದಿಗೆ ಸಮಾಲೋಚಿಸಿ, ನಂತರ ರಾಜಣ್ಣ ಅವರ ಭೋಜನಕೂಟ ಹಾಗೂ ಸರ್ಕಾರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಗುರುವಾರ ಸಂಜೆ ನಿರ್ಧರಿಸಿದ್ದರು.

ತುಮಕೂರು ಪ್ರವಾಸಕ್ಕೆಂದೇ ಹೆಲಿಕಾಪ್ಟರ್ ಸಹ ಸಿದ್ಧಪಡಿಸಿದ್ದರು. ಆದರೆ, ಇಂದು ಮಧ್ಯಾಹ್ನದ ವೇಳೆಗೆ ತುಮಕೂರು ಜಿಲ್ಲಾ ಪ್ರವಾಸ ರದ್ದು ಮಾಡಿ ಕಬ್ಬು ಬೆಳೆಗಾರರ ಜೊತೆ ಸಮಾಲೋಚನೆ ಮುಂದುವರೆಸಿದರು.



ಕೆ.ಎನ್. ರಾಜಣ್ಣ

ಸಂಪುಟದಿಂದ ವಜಾಗೊಂಡಿರುವ ರಾಜಣ್ಣ ಅವರ ನಿವಾಸದಲ್ಲಿ ಮುಖ್ಯಮಂತ್ರಿಯಾದಿಯಾಗಿ ಸಚಿವರು ಮತ್ತು ಶಾಸಕರು ಸಭೆ ನಡೆಸಿದರೆ ಸಾರ್ವಜನಿಕವಾಗಿ ತಪ್ಪು ಸಂದೇಶ ಹೋಗುತ್ತದೆ ಎಂದು ಕಾಂಗ್ರೆಸ್ ವರಿಷ್ಠರು ಸಿದ್ದರಾಮಯ್ಯ ಅವರಿಗೆ ಸೂಚಿಸಿದರು.

ಗುರುವಾರದ ಸಂಪುಟ ಸಭೆ ಮುಗಿಯುತ್ತಿದ್ದಂತೆ ರಾಜ್ಯ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಅವರನ್ನು ಸಂಪರ್ಕಿಸಿ ಸಭೆಗೆ ಹೋಗುವುದು ಅನಿವಾರ್ಯವೇ ಎಂದಿದ್ದರು.

ತುಮಕೂರು ಜಿಲ್ಲಾ ಪ್ರವಾಸ ಕೈಗೊಂಡ ಸಂದರ್ಭದಲ್ಲೆಲ್ಲಾ ರಾಜಣ್ಣ ನಿವಾಸಕ್ಕೆ ತೆರಳಿ ಭೋಜನ ಮಾಡುತ್ತೇನೆ. ಶುಕ್ರವಾರ ಪ್ರವಾಸ ವೇಳೆಯೂ ಊಟಕ್ಕೆ ಕರೆದಿದ್ದಾರೆ ಬೇರೇನಿಲ್ಲ ಎಂದು ಹೇಳಿ ಪ್ರವಾಸ ಕೈಗೊಳ್ಳುವುದಾಗಿ ತಿಳಿಸಿದ್ದರು.

ಈ ಬೆಳವಣಿಗೆ ನಂತರ ಮುಖ್ಯಮಂತ್ರಿ ಸಚಿವಾಲಯ ಪ್ರವಾಸದ ಪಟ್ಟಿ ಪರಿಷ್ಕರಿಸಿ, ರಾಜಣ್ಣ ನಿವಾಸ ಮತ್ತು ಒಂದು ಸರ್ಕಾರಿ ಕಾರ್ಯಕ್ರಮದ ವಿವರ ನೀಡಿತ್ತು.

ಆದರೆ, ಇಂದು ಮುಖ್ಯಮಂತ್ರಿ ಮಧ್ಯಾಹ್ನದ ವೇಳೆಗೆ ಏಕಾಏಕಿ ಪ್ರವಾಸ ರದ್ದು ಮಾಡಿದ್ದರಿಂದ ರಾಜಣ್ಣ ಮನೆಯಲ್ಲಿ ಊಟದ ಸಿದ್ಧತೆ ಇದ್ದರೂ ಯಾರೂ ತೆರಳಲಿಲ್ಲ, ಸಭೆಯೂ ನಡೆದಿಲ್ಲ.

ಸೆಸ್ಕ್‌ನಿಂದ ವಿದ್ಯುತ್ ಬಿಲ್ ಬಾಕಿ ವಸೂಲಾತಿ ಅಭಿಯಾನ

ಮೈಸೂರು, ನ.7– ಅವಧಿ ಮೀರಿದ್ದರೂ ವಿದ್ಯುತ್ ಶುಲ್ಕ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಂದ ವಿದ್ಯುತ್ ಬಾಕಿ ವಸೂಲಿಗೆ ಬಾಕಿ ವಸೂಲಾತಿ ಅಭಿಯಾನ ನಡೆಸಲು ಸೆಸ್ಕ್ ತೀರ್ಮಾನಿಸಿದೆ.



ಮುನಿಗೋಪಾಲರಾಜು

ಗ್ರಾಹಕರಿಗೆ ನೀಡುವ ಮಾಸಿಕ ಬಿಲ್‌ನ ಹಿಂಬದಿಯ ಸೂಚನೆ 1ರಲ್ಲಿ ನಿಗದಿತ ದಿನದೊಳಗೆ ಬಿಲ್ ಪಾವತಿಸದಿದ್ದಲ್ಲಿ ಈ ಬಿಲ್ ಅನ್ನೇ ವಿದ್ಯುತ್ ಸರಬರಾಜು ನಿಲ್ಲಿಸುವ 15 ದಿನಗಳ ನೋಟೀಸ್ ಎಂದು ಪರಿಗಣಿಸಬೇಕು ಎಂದು ನಮೂದಿಸಲಾಗಿದೆ ಹಾಗೂ ಹಿಂದಿನ ಬಾಕಿಗೆ ವಾಯ್ದೆ ದಿನಾಂಕ ಅನ್ವಯಿಸುವುದಿಲ್ಲ ಎಂದು ತಿಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ನ.14 ರಂದು ಬಾಕಿ ವಸೂಲಾತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಪ್ರವರ್ಗದ ವಿದ್ಯುತ್ ಗ್ರಾಹಕರು, ಸರ್ಕಾರಿ ಇಲಾಖೆ ಒಳಗೊಂಡಂತೆ ತಮ್ಮ ಮೀಟರ್/ಮಾಪಕಗಳ ವಿದ್ಯುತ್ ಶುಲ್ಕ ಬಾಕಿಯನ್ನು ನ.14ರೊಳಗೆ ಸೆಸ್ಕ್‌ನ ಅಧಿಕೃತ ನಗದು ಕೌಂಟರ್ ಅಥವಾ ಆನ್ ಲೈನ್ ಮೂಲಕ ಪಾವತಿ ಸುವಂತೆ ಕೋರಲಾಗಿದೆ.

ನಿಗದಿತ ದಿನಾಂಕದೊಳಗೆ ವಿದ್ಯುತ್ ಶುಲ್ಕ ಬಾಕಿ ಪಾವತಿಸದ ಮೀಟರ್/ಮಾಪಕ ಗಳಿಗೆ ನ.14ರ ನಂತರ ಯಾವುದೇ ಮುನ್ಸೂಚನೆ ನೀಡದೆ ವಿದ್ಯುತ್ ಕಡಿತಗೊಳಿಸು ವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ ಗ್ರಾಹಕರು ಈ ಕ್ರಮಕ್ಕೆ ಆಸ್ಪದ ನೀಡದೆ ತಮ್ಮ ವಿದ್ಯುತ್ ಮೀಟರ್/ಮಾಪಕಗಳ ವಿದ್ಯುತ್ ಶುಲ್ಕದ ಬಾಕಿಯನ್ನು ತುರ್ತಾಗಿ ಪಾವತಿಸುವಂತೆ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಮೂರನೇ ಪುಟದಿಂದ

ಮತ್ತೊಬ್ಬ ರೈತ ಬಲಿ

ಗ್ರಾಮಸ್ಥರು ರಕ್ತದ ಕಲೆಯನ್ನೇ ಹಿಂಬಾಲಿಸಿ ಹೋಗಿ ನೋಡಿದಾಗ ಅರಣ್ಯ ಪ್ರದೇಶಕ್ಕೆ ಹೊಂದಿ ಕೊಂಡಂತೆ ಇರುವ ಹಳ್ಳದಲ್ಲಿ ಚೌಡ ನಾಯಕ ಅವರ ದೇಹ ಪತ್ತೆಯಾಗಿದೆ.

ಕಾಡಾನೆಯಿಂದ ಎಸೆಯಲ್ಪಟ್ಟಿದ್ದ: ಕಳೆದ ಎರಡು ವರ್ಷದ ಹಿಂದೆ ತಮ್ಮದೆ ಭೂಮಿಯಲ್ಲಿ ಕೆಲಸ ಮಾಡುವಾಗ ಕಾಡಾನೆ ದಾಳಿ ಮಾಡಿ ಚೌಡನಾಯಕನನ್ನು ಸೊಂಡಿಲಿನಿಂದ ಎಸೆದು ಗಂಭೀರವಾಗಿ ಗಾಯಗೊಳಿಸಿತ್ತು. ಆದರೆ ಅವರು ಕೂದಲೆಳೆ ಅಂತರದಲ್ಲಿ ಪಾರಾಗಿ ಬಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಸುದೀರ್ಘ ಚಿಕಿತ್ಸೆ ಪಡೆದು ಕೆಲ ತಿಂಗಳ ಹಿಂದೆಯಷ್ಟೇ ಮತ್ತೆ ಕೃಷಿ ಕೆಲಸ ಮಾಡುತ್ತಿದ್ದರು. ಆದರೆ, ದುರದೃಷ್ಟವಶಾತ್ ಇಂದು ಹುಲಿಗೆ ಬಲಿಯಾಗಿದ್ದಾರೆ.

ಕುಟುಂಬಸ್ಥರ ಆಕ್ರಂದನ: ದೇಹವಿದ್ದ ಸ್ಥಳದಲ್ಲಿ ಚೌಡನಾಯಕ ಅವರ ತಾಯಿ ಮಹದೇವಮ್ಮ, ಪತ್ನಿ ರುಕ್ಮಿಣಿ, ಮಕ್ಕಳಾದ ಶಿಲ್ಪ, ಶೀಲಾ ಹಾಗೂ ಶೈಲಜಾ(ಶೈಲು) ಅವರ ಆಕ್ರಂದನ ಮುಗಿಲು ಮುಟ್ಟಿತ್ತು. ಚೌಡ ನಾಯಕ ಅವರ ಹಿರಿಯ ಮಗಳನ್ನು ಕೆಲ ತಿಂಗಳ ಹಿಂದಷ್ಟೇ ವಿವಾಹ ಮಾಡಿಕೊಡಲಾಗಿದ್ದು, ಎರಡನೇ ಮಗಳು ಪ್ರಥಮ ಪಿಯುಸಿ ಹಾಗೂ ಮೂರನೇ ಮಗಳು ಎಂಟನೆ ತರಗತಿ ವ್ಯಾಸಂಗ ಮಾಡುತ್ತಿದ್ದಾರೆ.

ಹುಲಿಯನ್ನ ಸಮೀಪದಿಂದಲೇ ನೋಡುತ್ತಿದ್ದ ಗ್ರಾಮಸ್ಥರು: ಇಂದು ಹುಲಿ ದಾಳಿ ನಡೆಸಿದ ಸ್ಥಳಕ್ಕೆ ಹೊಂದಿಕೊಂಡಂತಿರುವ ಅರಣ್ಯ ಪ್ರದೇಶದಲ್ಲಿ ಹುಲಿ, ಚಿರತೆ, ಕಾಡಾನೆಗಳನ್ನು ಗ್ರಾಮಸ್ಥರು ಸಮೀಪದಿಂದಲೇ ಸಾಕಷ್ಟು ಬಾರಿ ನೋಡಿ, ಜೋರಾಗಿ ಕೂಗಿ ಅರಣ್ಯ ಪ್ರದೇಶಕ್ಕೆ ಓಡಿಸಿದ್ದಾರೆ. ಆದರೆ, ಇಂದು ನಡೆದ ದಾಳಿಯಿಂದ ಓರ್ವ ಬಲಿಯಾಗಿರುವುದು ಗ್ರಾಮಸ್ಥರನ್ನು ಆತಂಕಕ್ಕೆ ದೂಡಿದೆ.

ಗ್ರಾಮಸ್ಥರ ಆಕ್ರೋಶ; ಅರಣ್ಯ ಸಿಬ್ಬಂದಿಗೆ ಥಳಿತ: ಹುಲಿಗೆ ರೈತ ಬಲಿಯಾದ ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳದಲ್ಲಿ ನೆರೆದ ಗ್ರಾಮಸ್ಥರು, ಅರಣ್ಯ ಇಲಾಖೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ದರು. ರೊಚ್ಚಿಗೆದ್ದ ಕೆಲ ಗ್ರಾಮಸ್ಥರು ಮಳೆಯೂರು ವಲಯದ ಆರ್‌ಎಫ್‌ಓ ಅಮೃತ ಮಾಯಪ್ಪ ಹ್ಯಾಂಡ್ ಪೋಸ್ಟ್ ಎಸ್‌ಟಿಪಿಎಫ್ ಆರ್‌ಎಫ್‌ಓ ರಾಮಾಂಜನೇಯ ಮತ್ತು ಗಾರ್ಡ್ ನಾಗರಾಜು ಅವರ ಮೇಲೆ ಹಲ್ಲೆ ಮಾಡಿದ್ದಾರೆ. ಅವರ ರಕ್ಷಣೆಗೆ ಪೊಲೀಸರು ಹರಸಾಹಸಪಟ್ಟಿದ್ದಾರೆ. ಬಳಿಕ ಮೂವರನ್ನು ಸರಗೂರು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ.

ಬಿಗಿಪಟ್ಟು: ಘಟನಾ ಸ್ಥಳಕ್ಕೆ ಬಂಡೀಪುರ ಹುಲಿ ಸಂರಕ್ಷಿತ ನಿರ್ದೇಶಕ ಎಸ್.ಪ್ರಭಾಕರನ್, ಹೆಡಿಯಾಲ ಎಸಿಎಫ್ ಡಿ.ಪರಮೇಶ್, ವಿವಿಧ ವಲಯಗಳ ಆರ್‌ಎಫ್‌ಓ ಸೇರಿದಂತೆ ಇನ್ನಿತರರು ಬೆಳಗ್ಗೆಯೇ ಬಂದರಾದರೂ ಗ್ರಾಮಸ್ಥರ ಮನವೊಲಿಸಲಾಗಲಿಲ್ಲ. ಸಂಜೆ ಶಾಸಕ ಅನಿಲ್ ಚಿಕ್ಕಮಾದು ಗ್ರಾಮಸ್ಥರೊಂದಿಗೆ ಚರ್ಚಿಸಿದರು. ಆದರೂ ಮೃತದೇಹವನ್ನು ಸ್ಥಳಾಂತರಿಸಲು ಗ್ರಾಮಸ್ಥರು ಅವಕಾಶ ನೀಡಲಿಲ್ಲ.

ಸಫಾರಿ, ಟ್ರೆಕ್ಕಿಂಗ್ ಸ್ಥಗಿತ

ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಆದೇಶಿಸಿದ್ದಾರೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಲಿಖಿತ ಆದೇಶ ನೀಡಿರುವ ಅವರು, ಸರಗೂರು ತಾಲೂಕು ಮೊಳೆಯೂರು ವಲಯದ ಹಳೆ ಹೆಗ್ಗೂಡಿಲು ಗ್ರಾಮದ ಬಳಿ ಇಂದು ಬೆಳಗ್ಗೆ ಚೌಡಯ್ಯ ನಾಯ್ಕ ಹುಲಿ ದಾಳಿಯಿಂದ ಮೃತಪಟ್ಟಿರುವುದಕ್ಕೆ ತೀವ್ರ ವಿಷಾದ ವ್ಯಕ್ತಪಡಿಸಿದ್ದು, ಮುಂದಿನ ಆದೇಶದವರೆಗೆ ಎರಡೂ ಕಡೆ ಸಫಾರಿ ಬಂದ್ ಮಾಡಿ, ಅಧಿಕಾರಿ ಮತ್ತು ಸಿಬ್ಬಂದಿಯ ಸೇವೆಯನ್ನು ಹುಲಿ ಸೆರೆ ಕಾರ್ಯಾಚರಣೆ ಬಳಸಿಕೊಳ್ಳುವಂತೆ ತಿಳಿಸಿದ್ದಾರೆ.

ಮುಂದಿನ ಆದೇಶದವರೆಗೆ ನಾಗರಹೊಳೆ ಮತ್ತು ಬಂಡೀಪುರದಲ್ಲಿ ಸಫಾರಿ ಬಂದ್ ಮಾಡಲು ಮತ್ತು ಮಾನವ–ವನ್ಯಜೀವಿ ಸಂಘರ್ಷ ಇರುವ ಪ್ರದೇಶದಲ್ಲಿ ಟ್ರೆಕ್ಕಿಂಗ್ (ಚಾರಣ) ಸ್ಥಗಿತಗೊಳಿ ಸಲು ಸೂಚಿಸಲಾಗಿದೆ. ಅಲ್ಲದೆ ಬಂಡೀಪುರ, ನಾಗರಹೊಳೆ ಸಫಾರಿಗೆ ನಿಯೋಜನೆಗೊಂಡಿರುವ ಅಧಿಕಾರಿಗಳು ಮತ್ತು ವಾಹನ ಚಾಲಕರ ಸಹಿತ ಎಲ್ಲಾ ಸಿಬ್ಬಂದಿಯನ್ನೂ ಹುಲಿ ಸೆರೆ ಕಾರ್ಯಾ ಚರಣೆಗೆ ನಿಯೋಜನೆ ಮಾಡಿ, ವನ್ಯಜೀವಿ ವಿಭಾಗದ ಎಪಿಸಿಸಿಎಫ್ ಮತ್ತು ಹುಲಿ ಯೋಜನೆಯ ನಿರ್ದೇಶಕರು ಸ್ಥಳದಲ್ಲೇ ಮೊಕ್ಕಾಂ ಹೂಡಿ ಪದೇ ಪದೆ ದಾಳಿ ಮಾಡುತ್ತಿರುವ ಹುಲಿ ಸೆರೆಗೆ ಕ್ರಮ ಕೈಗೊಳ್ಳುವಂತೆ ಅರಣ್ಯ ಸಚಿವರು ಸ್ಪಷ್ಟ ಸೂಚನೆ ನೀಡಿದ್ದಾರೆ.

ಟನ್ ಕಬ್ಬಿಗೆ 3300 ರೂ. ದರ ನಿಗದಿ

ತೀರ್ಮಾನವನ್ನು ಎಲ್ಲರೂ ಅನುಮೋದಿಸಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಸರ್ಕಾರಕ್ಕೆ 300 ಕೋಟಿ ಹೊರೆ: ನೂರು ರೂಪಾಯಿ ಹೆಚ್ಚಳದಿಂದ ರಾಜ್ಯ ಸರ್ಕಾರಕ್ಕೆ ಸುಮಾರು 300 ಕೋಟಿ ಹೊರೆ ಆಗಲಿದೆ. ಸರ್ಕಾರ ನಿಗದಿಪಡಿಸಿದ ದರವನ್ನು ರೈತರು ಒಪ್ಪಿಕೊಳ್ಳುತ್ತಾರೆ ಎಂಬ ವಿಶ್ವಾಸ ಇದೆ ಎಂದು ಸಿಎಂ ಸಿದ್ದರಾಮಯ್ಯ ಇದೇ ವೇಳೆ ವಿಶಾಸ ವ್ಯಕ್ತಪಡಿಸಿದ್ದಾರೆ.

ಪ್ರತಿಭಟನೆ ಹಿಂಪಡೆಯುವಂತೆ ಮನವಿ: ಇದೇ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಅವರು, ಬೆಳಗಾವಿ ಕಬ್ಬು ಬೆಳೆಗಾರರ ಪ್ರತಿಭಟನೆ ವಾಪಸ್ ಪಡೆಯಬೇಕೆಂದು ರೈತರಲ್ಲಿ ಮನವಿ ಮಾಡಿದರು. ಪ್ರತಿ ಜಿಲ್ಲೆಗೆ ಇಳುವರಿ ಪ್ರಮಾಣ ಭಿನ್ನವಾಗಿದೆ. ಆದರೆ ನೂರು ರೂಪಾಯಿ ಹೆಚ್ಚಳ ನಿರ್ಧಾರ ಎಲ್ಲಾ ಜಿಲ್ಲೆಗಳಿಗೂ ಅನ್ವಯ ಆಗಲಿದೆ. ಇದರಲ್ಲಿ ಕಟಾವು ಹಾಗೂ ಸಾಗಣೆ ವೆಚ್ಚ ಹೊರತಾಗಿದೆ ಎಂದು ಸಿಎಂ ಸ್ಪಷ್ಟಪಡಿಸಿದರು.

ಕಬ್ಬು ಬೆಳೆಗಾರರ ಪ್ರತಿಭಟನೆ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದ ಸುದೀರ್ಘ ಸಭೆ ನಡೆಸಲಾಗಿದೆ. ಈ ಸಭೆಯಲ್ಲಿ ಬಹುತೇಕ ಸಕ್ಕರೆ ಕಾರ್ಖಾನೆ ಮಾಲೀಕರು ಭಾಗವಹಿಸಿದ್ದರು. ರಾಜ್ಯದಲ್ಲಿ ಒಟ್ಟು 81 ಸಕ್ಕರೆ ಕಾರ್ಖಾನೆಗಳು ಇವೆ. ಈ ಪೈಕಿ 11 ಸಹಕಾರಿ ವಲಯದಲ್ಲಿ ಇವೆ. ಒಂದು ಸರ್ಕಾರಿ ಸಕ್ಕರೆ ಕಾರ್ಖಾನೆ ಹಾಗೂ ಉಳಿದವು ಖಾಸಗಿ ಸಕ್ಕರೆ ಕಾರ್ಖಾನೆಗಳಾಗಿವೆ ಎಂದು ಮುಖ್ಯಮಂತ್ರಿ ವಿವರಿಸಿದರು. ಇದಕ್ಕೂ ಮುನ್ನ ಮುಖ್ಯಮಂತ್ರಿಗಳು ನಡೆಸಿದ ಸಭೆಯಲ್ಲಿ ತಮ್ಮ ಸಮಸ್ಯೆ ಬಗ್ಗೆ ವಿವರಿಸಿದ ಮಾಲೀಕರು, ಸಕ್ಕರೆ ಕಾರ್ಖಾನೆ ನಡೆಸುವುದು ಬಹಳ ಕ್ಲಿಷ್ಟಕರವಾಗಿದೆ. ಸಕ್ಕರೆ, ಎಥೆನಾಲ್, ವಿದ್ಯುತ್ ಉತ್ಪಾದನೆ ಮಾಡಿದರೂ ನಾವು ಸಂಕಷ್ಟದಲ್ಲಿದ್ದೇವೆ. ಜೊತೆಗೆ ರೈತರಿಂದ ಕೆಟ್ಟ ಬೈಗುಳ ಕೇಳುತ್ತಿದ್ದೇವೆ. ನಾವು ಉದ್ಯೋಗ ಸೃಷ್ಟಿಸಿ ಗ್ರಾಮೀಣ ಆರ್ಥಿಕತೆಗೆ ಅಪಾರ ಕೊಡುಗೆ ನೀಡುತ್ತಿದ್ದೇವೆ. ಆದರೂ, ಕೇಂದ್ರದ ನೀತಿಗಳಿಂದಲೂ ನಮಗೆ ನಷ್ಟ ಆಗುತ್ತಿದೆ. ರೈತರಿಂದಲೂ ಒತ್ತಡ ಇದೆ. ನಾವು ಕಾರ್ಖಾನೆ ನಡೆಸುವುದೇ ಕಷ್ಟ ಆಗುತ್ತಿದೆ. ಬೇಕಿದ್ದರೆ ಸರ್ಕಾರವೇ ನಮ್ಮ ಕಾರ್ಖಾನೆಗಳನ್ನು ನಡೆಸಲಿ ಎಂದು ಸಂಕಷ್ಟ ಹೇಳಿಕೊಂಡರು.

ಮಾಲೀಕರ ಜೊತೆ ಚರ್ಚೆ ನಡೆಸಿದ ನಂತರ ರೈತ ಮುಖಂಡರ ಜೊತೆ ಮಾತುಕತೆ ನಡೆಸಿದ ಸಂದರ್ಭದಲ್ಲಿ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಮಸ್ಯೆ ಬಗೆಹರಿಸಲು ನಾವು ಸಿದ್ಧರಿದ್ದೇವೆ ಎಂದು ತಿಳಿಸಿದ್ದಾರೆ.

ಆದರೆ, ಕೇಂದ್ರ ಸರ್ಕಾರ ಪರಿಹರಿಸಬೇಕಾದ ಸಮಸ್ಯೆಗೂ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರೆ ಹೇಗೆ ಎಂದು ರೈತ ಮುಖಂಡರನ್ನು ಪ್ರಶ್ನೆ ಮಾಡಿ, ನೀವು ಕೇಂದ್ರದ ಮೇಲೆ ಒತ್ತಡ ಹೇರಿ ಸಮಸ್ಯೆ ಬಗೆಹರಿಸಿಕೊಳ್ಳಬೇಕು ಎಂದಿದ್ದಾರೆ. ಕಾರ್ಖಾನೆಗಳು ತೂಕದಲ್ಲಿ ಮೋಸ ಮಾಡುತ್ತಿವೆ, ಇಳುವರಿ ಕಡಿಮೆ ತೋರಿಸುತ್ತಿವೆ ಎಂಬುದೂ ಸೇರಿದಂತೆ ನಮ್ಮ ವ್ಯಾಪ್ತಿಯಲ್ಲಿ ಬರುವ ಸಮಸ್ಯೆಗಳನ್ನು ಬಗೆರಹರಿಸುವುದಾಗಿಯೂ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಅರಣ್ಯ ಸಿಬ್ಬಂದಿ ಮೇಲೆ ಹಲ್ಲೆಗೆ ಪ್ರಚೋದನೆ

ಮೈಸೂರು, ನ.7(ಎಂಟಿವೈ)– ಹುಲಿ ದಾಳಿ ಪ್ರಕರಣದಿಂದ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಅರಣ್ಯ ಇಲಾಖೆ ಹಾಗೂ ಅದರ ಸಿಬ್ಬಂದಿ ವಿರುದ್ಧ ಅವಾಚ್ಯ ಪದ ಪ್ರಯೋಗ ಮಾಡಿ, ಹಲ್ಲೆಗೆ ಪ್ರಚೋದನೆ ನೀಡುವ ಹೇಳಿಕೆಗಳ ರೀಲ್ಸ್ ವೈರಲ್ ಮಾಡುತ್ತಿರುವುದು ಕೂಂಬಿಂಗ್ ಕಾರ್ಯಾಚರಣೆಯಲ್ಲಿ ತೊಡಗಿರುವ ಅರಣ್ಯ ಸಿಬ್ಬಂದಿಗೆ ಆತಂಕಕಾರಿಯಾಗಿ ಪರಿಣಮಿಸಿದೆ.

ವನ್ಯಜೀವಿಗಳ ದಾಳಿ ಆಕಸ್ಮಿಕವಾಗಿ ನಡೆದರೂ ಕೆಲವರು ಅರಣ್ಯ ಸಿಬ್ಬಂದಿಗಳನ್ನೇ ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸುತ್ತಿದ್ದಾರೆ. ತಮ್ಮ ಪ್ರಾಣ ಲೆಕ್ಕಿಸದೆ, ಕುಟುಂಬ ಸದಸ್ಯರ ಹಿತವನ್ನೂ ಬದಿಗಿಟ್ಟು ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದರೂ, ಕೆಲವರು ಪ್ರಚೋಧನೆ ನೀಡಿ ನಮ್ಮ ಮೇಲೆ ಹಲ್ಲೆಗೆ ಪ್ರೇರಣೆ ನೀಡುತ್ತಿದ್ದಾರೆ. ಸಾಕು ಪ್ರಾಣಿಗಳೇ ಕೆಲವೊಮ್ಮೆ ಮಾಲೀಕರ ಮೇಲೆ ದಾಳಿ ಮಾಡುತ್ತವೆ ಇಂತಹ ಸಂದರ್ಭದಲ್ಲಿ ವನ್ಯಜೀವಿಗಳನ್ನು ನಿಯಂತ್ರಿಸಲು ಸಾಧ್ಯವೇ? ಆದರೂ, ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಶ್ರಮಿಸುತ್ತಿದ್ದರೂ ಅರಣ್ಯ ಸಿಬ್ಬಂದಿಗಳ ಮೇಲೆ ದಾಳಿ ನಡೆಸುವ ಪ್ರಚೋಧನಾತ್ಮಕ ಹೇಳಿಕೆ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಅರಣ್ಯ ಸಿಬ್ಬಂದಿಗೆ ತೊಂದರೆಯಾದರೆ, ಪ್ರಚೋದನೆ ಮಾಡಿದವರನ್ನೇ ಹೊಣೆಯಾಗಿಸಬೇಕಾಗುತ್ತದೆ ಎಂದು ಕೂಂಬಿಂಗ್‌ನಲ್ಲಿ ತೊಡಗಿರುವ ಅರಣ್ಯ ಸಿಬ್ಬಂದಿ ಎಚ್ಚರಿಕೆ ನೀಡಿದ್ದಾರೆ.

ಅಧಿಕಾರಿಗಳ ವರ್ಗಾವಣೆ

ಇಬ್ಬರು ಆರ್‌ಎಫ್‌ಓ ಬದಲು: ಹುಲಿ ಹಾವಳಿ ಇರುವ ಪ್ರದೇಶವಾದ ಮೊಳೆಯೂರು ವಲಯದ ಆರ್‌ಎಫ್‌ಓ ಅಮೃತಾ ಎ.ಮಾಯಪ್ಪ ಅವರನ್ನು ಕೊಡಗು ಜಿಲ್ಲಾ ಆನೆ ಕಾರ್ಯಪಡೆಗೆ ವರ್ಗಾಯಿಸಲಾಗಿದೆ. ಹೆಡಿಯಾಲ ಆರ್‌ಎಫ್‌ಓ ವಿ.ಮುನಿರಾಜುವನ್ನು ಮೈಸೂರು ಇಲವಾಲದ ಅರಣ್ಯ ತರಬೇತಿ ಕೇಂದ್ರಕ್ಕೆ ವರ್ಗಾಯಿಸಲಾಗಿದೆ.

ಬಂಡೀಪುರದ ಮೊಳೆಯೂರು ವಲಯದ ಆರ್‌ಎಫ್‌ಓ ಆಗಿ ಕೊಡಗು ಜಿಲ್ಲೆಯ ಆನೆ ಕಾರ್ಯಪಡೆಯಲ್ಲಿದ್ದ ಕೆ.ಆರ್.ನಾರಾಯಣ ಹಾಗೂ ಶಿವಮೊಗ್ಗ ಕಾರ್ಯಯೋಜನೆಯಲ್ಲಿದ್ದ ಬಿ.ಸಿ.ಲೋಕೇಶ್ ಅವರನ್ನು ಹೆಡಿಯಾಲ ಆರ್‌ಎಫ್‌ಓ ಆಗಿ ನಿಯೋಜಿಸಲಾಗಿದೆ.

ಇ–ಆಡಳಿತ ವ್ಯವಸ್ಥೆ ಜಾರಿ

ಅಭಿಯಾನ ಮಾದರಿ ವಿಲೇವಾರಿ: ಜನ ಕಚೇರಿಗಳಿಗೆ, ತಹಶೀಲ್ದಾರ್ ಹಾಗೂ ಎಸಿ ಕೋರ್ಟ್‌ಗಳಿಗೆ, ದಾಖಲೆಗಳನ್ನು ಪಡೆಯುವುದಕ್ಕೆ, ಸರ್ಕಾರದಿಂದ ಮಂಜೂರಾದ ಜಮೀನಿನ ಪೋಡಿಗೆ, ಪೌತಿ ಖಾತೆಗೆ ಅಲೆದಾಡುವುದನ್ನು ತಪ್ಪಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಸಾಕಷ್ಟು ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ನಮ್ಮ ಸರ್ಕಾರ ಬಂದಾಗ ತಹಶೀಲ್ದಾರ್ ಕೋರ್ಟ್‌ನಲ್ಲಿ ಅವಧಿ ಮೀರಿದ 10774 ಪ್ರಕರಣಗಳು ನಾಲ್ಕೈದು ವರ್ಷಗಳಿಂದ ಬಾಕಿ ಇದ್ದವು. ಎರಡು ವರ್ಷದಲ್ಲಿ ತ್ವರಿತವಾಗಿ ವಿಲೇವಾರಿ ಮಾಡಿದ್ದರ ಪರಿಣಾಮ ಸದ್ಯ 620 ಪ್ರಕರಣಗಳು ಮಾತ್ರ ಬಾಕಿ ಇವೆ. ತಹಶೀಲ್ದಾರ್ ಕೋರ್ಟ್‌ನಲ್ಲಿ 90 ದಿನಗಳಲ್ಲಿ ಪ್ರಕರಣ ವಿಲೇವಾರಿಯಾಗಬೇಕು. ಆದರೆ ಹಿಂದಿನ ಸರ್ಕಾರದಲ್ಲಿ 212 ದಿನ ಆಗುತ್ತಿತ್ತು. ನಾವು ಅವಧಿ ಪೂರ್ವವಾಗಿಯೇ 87 ದಿನಗಳಲ್ಲಿ ವಿಲೇವಾರಿ ಮಾಡುತ್ತಿದ್ದೇವೆ. ಇನ್ನು ಎಸಿ ಕೋರ್ಟ್‌ನಲ್ಲಿ ನಿಗಧಿತ ಆರು ತಿಂಗಳಿಗಿಂತ ಹೆಚ್ಚು ಅವಧಿಯ ಒಟ್ಟು 67,857 ಪ್ರಕರಣಗಳು ಬಾಕಿ ಇದ್ದವು. ಇವುಗಳಲ್ಲಿ 32 ಸಾವಿರ ಪ್ರಕರಣ ಐದು ವರ್ಷಗಳನ್ನು ಮೀರಿದ್ದವು. ನಮ್ಮ ಸರ್ಕಾರ ಬಂದ ನಂತರ ಸವಾಲಾಗಿ ಸ್ವೀಕರಿಸಿ, ಅಭಿಯಾನದ ಮಾದರಿ ಯಲ್ಲಿ ವಿಲೇವಾರಿ ಮಾಡಿದ್ದರಿಂದ ಸದ್ಯ 12,633 ಪ್ರಕರಣಗಳು ಮಾತ್ರ ಬಾಕಿ ಇವೆ ಎಂದು ತಿಳಿಸಿದರು.

ಪೋಡಿ–ದರ್ಖಾಸ್ತು: ಹಿಂದಿನ ಸರ್ಕಾರದ ಐದು ವರ್ಷಗಳ ಅವಧಿಯಲ್ಲಿ ಕೇವಲ 8 ಸಾವಿರ ಪೋಡಿ ದರ್ಖಾಸ್ತು ಮಾಡಲಾಗಿತ್ತು. ಪ್ರಸಕ್ತ ವರ್ಷದಲ್ಲಿ ಜನವರಿಯಿಂದ ಅಕ್ಟೋಬರ್‌ವರೆಗೆ 1.40 ಲಕ್ಷ ಜಮೀನು ಪೋಡಿ ದರ್ಖಾಸ್ತು ಮಾಡಲಾಗಿದೆ. ಲಕ್ಷಾಂತರ ಜಮೀನುಗಳು ಮರಣಿತರ ಹೆಸರಲ್ಲಿದ್ದು, ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ವಾರಸುದಾರರ ಹೆಸರಿಗೆ ಖಾತೆ ಬದಲಾಯಿಸಲಾಗುತ್ತಿದೆ ಎಂದರು.

ಬೆರಳ ತುದಿಯಲ್ಲಿ ದಾಖಲೆ: ಹಳೆ ದಾಖಲೆಗಳನ್ನು ಶಾಶ್ವತವಾಗಿ ರಕ್ಷಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದ್ದು, ಎಲ್ಲಾ ಆಸ್ತಿಗಳ ಮೂಲ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ ಗಣಕೀಕರಣಗೊಳಿಸಲಾಗುತ್ತಿದೆ. ಈಗಾಗಲೇ 49.68 ಕೋಟಿ ಪುಟಗಳನ್ನು ಸ್ಕ್ಯಾನಿಂಗ್ ಮಾಡಲಾಗಿದ್ದು, ಮುಂದಿನ ಫೆಬ್ರವರಿಯೊಳಗೆ ಇನ್ನೂ 50 ಕೋಟಿ ಪುಟ ಸ್ಕ್ಯಾನಿಂಗ್ ಮಾಡುವ ಗುರಿ ಹೊಂದಲಾಗಿದೆ. ಈ ಗಣಕೀರಣ ಪೂರ್ಣಗೊಂಡ ಬಳಿಕ ಅರ್ಜಿಕೊಟ್ಟು ಏಜೆಂಟ್ ಮೂಲಕ ದಾಖಲೆ ಪಡೆಯುವ ಅವಶ್ಯಕತೆ ಬರುವುದಿಲ್ಲ. ಎಲ್ಲಾ ದಾಖಲೆಗಳ ಪ್ರಮಾಣೀಕೃತ ಪ್ರತಿಯನ್ನು ಸಾರ್ವಜನಿಕರ ಬೆರಳ ತುದಿಗೆ ಸಮರ್ಪಿಸಲಾಗುವುದು. ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅತ್ಯಂತ ಸುಲಭವಾಗಿ ತಮಗೆ ಅಗತ್ಯವಿ ರುವ ದಾಖಲೆಗಳನ್ನು ಕೆಲವೇ ನಿಮಿಷಗಳಲ್ಲಿ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಹೀಗೆ ಜನರು ಎಲ್ಲೆಲ್ಲಿ ಕಷ್ಟ–ನಷ್ಟ ಅನುಭವಿಸುತ್ತಿದ್ದಾರೆ ಎಂಬುದನ್ನು ಗುರುತಿಸಿ, ಅಭಿಯಾನ ಮಾದರಿಯಲ್ಲಿ ಪರಿಹಾರ ಕ್ರಮ ಕೈಗೊಳ್ಳಲಾಗುತ್ತಿದೆ. ಕಂದಾಯ ಗ್ರಾಮ ರಚನೆ, ಪೋಡಿ, ಇ–ಖಾತಾ ಸೇರಿದಂತೆ ಮೈಸೂರು ಜಿಲ್ಲೆಯಲ್ಲಿ ಬಾಕಿ ಉಳಿದಿರುವ ಎಲ್ಲಾ ಕೆಲಸ ಕಾರ್ಯಗಳನ್ನೂ ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದರು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ. ತಿಮ್ಮಯ್ಯ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಜಿಲ್ಲಾ ಪಂಚಾಯ್ತಿ ಸಿಇಓ ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿಷ್ಣುವರ್ಧನ್ ಸೇರಿದಂತೆ ಕಂದಾಯ ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳು ಹಾಜರಿದ್ದರು.

ಪರಿಹಾರಕ್ಕೆ ಕೇಂದ್ರಕ್ಕೆ ಮನವಿಗೆ ಸಿದ್ಧತೆ

ಮೈಸೂರು: ಪ್ರಕೃತಿ ವಿಕೋಪದಿಂದಾದ ನಷ್ಟ ಭರಿಸಲು ಎನ್‌ಡಿಆರ್‌ಎಫ್ ನಿಯಮದಡಿ 1545 ಕೋಟಿ ರೂ. ಪರಿಹಾರ ಕೋರಿ ಕೇಂದ್ರಕ್ಕೆ ಮನವಿ ಸಲ್ಲಿಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಮುಂಗಾರು ಹಂಗಾಮಿನಲ್ಲಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಒಟ್ಟು 14.58 ಲಕ್ಷ ಹೆಕ್ಟೇರ್ ಬೆಳೆ ನಷ್ಟವಾಗಿದ್ದು, 14 ಲಕ್ಷಕ್ಕೂ ಹೆಚ್ಚು ರೈತರು ಬಾಧಿತರಾಗಿದ್ದಾರೆ. 2,798 ಕೋಟಿ ಪರಿಹಾರ ನೀಡಬೇಕಿದ್ದು, ಈಗಾಗಲೇ ಎಸ್‌ಡಿಆರ್‌ಎಫ್ ನಿಧಿಯಿಂದ ಪರಿಹಾರ ನೀಡುವ ಕಾರ್ಯವನ್ನು ಆರಂಭಿಸಲಾಗಿದೆ. ಇನ್ನು ಹತ್ತು ದಿನಗಳಲ್ಲಿ ಎಲ್ಲಾ ಬಾಧಿತರ ಖಾತೆಗೆ ನೇರವಾಗಿ ಪರಿಹಾರದ ಹಣ ವರ್ಗಾವಣೆಯಾಗಲಿದೆ. ಹಲವು ರಸ್ತೆ, ಸೇತುವೆ, ಶಾಲೆ, ಅಂಗನವಾಡಿಗಳು ಹಾನಿಗೊಳಗಾಗಿದ್ದು, ಅವುಗಳನ್ನು ಮರುನಿರ್ಮಿಸುವ ಅವಶ್ಯಕತೆ ಇದೆ. ಎನ್‌ಡಿಆರ್‌ಎಫ್ ನಿಯಮದಡಿ ರಾಜ್ಯ ಸರ್ಕಾರಕ್ಕೆ ಅನುದಾನ ಒದಗಿಸುವುದು ಕೇಂದ್ರದ ಜವಾಬ್ದಾರಿ ಎಂದರು.

ಈ ನಿಟ್ಟಿನಲ್ಲಿ ನಿಯಮಾನುಸಾರ 1,545 ಕೋಟಿ ಪರಿಹಾರ ನೀಡುವಂತೆ ಮನವಿ ಸಿದ್ಧಪಡಿಸಿ, ಸಂಪುಟದಲ್ಲೂ ಚರ್ಚಿಸಲಾಗಿದೆ. ಕೇಂದ್ರದ ಗೃಹ ಸಚಿವರ ಭೇಟಿಯ ದಿನಾಂಕ ನಿಗಧಿಯಾದ ಕೂಡಲೇ ಅವರಿಗೆ ಮುಖ್ಯಮಂತ್ರಿಗಳೇ ಮನವಿ ಸಲ್ಲಿಸಲಿದ್ದಾರೆ. ಬರಗಾಲದ ನಷ್ಟ ಭರಿಸಲು ನಾಲ್ಕೈದು ಬಾರಿ ಮನವಿ ಮಾಡಿದರೂ ಕೇಂದ್ರದಿಂದ ಪರಿಹಾರ ಸಿಗದಿದ್ದಾಗ ಸುಪ್ರೀಂಕೋರ್ಟ್ ಮೆಟ್ಟಿಲೇರಿ ಕಾನೂನು ಹೋರಾಟದ ಮೂಲಕ ಪಡೆಯಬೇಕಾಯಿತು. ಆ ಪರಿಸ್ಥಿತಿ ಮತ್ತೆ ಬರುವುದಿಲ್ಲ, ಕೇಂದ್ರ ಸರ್ಕಾರ ಪರಿಹಾರದ ಹಣ ನೀಡಲಿದೆ ಎಂಬ ಭರವಸೆ ಇದೆ ಎಂದು ಹೇಳಿದರು.

ಅಧಿಕಾರಿಗಳ ಚಳಿ ಬಿಡಿಸಿದ ಕಂದಾಯ ಸಚಿವ ಕೃಷ್ಣಭೈರೇಗೌಡ

ಮೈಸೂರು, ನ.7– ಬಡವರ ಕೆಲಸಕ್ಕೆ ನಾವೇ ಏಜೆಂಟ್ ನೇಮಿಸಬೇಕಾ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ಮೈಸೂರಿನಲ್ಲಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕಂದಾಯ ಗ್ರಾಮ, ಇ–ಖಾತಾ, ಪೋಡಿ ದರ್ಖಾಸ್ತು, ಪೌತಿ ಖಾತೆ ಸೇರಿದಂತೆ ವಿವಿಧ ಸೇವೆಗಳ ಮಾಹಿತಿ ಪಡೆದು, ಗುರಿ ಸಾಧನೆಯಲ್ಲಿ ಹಿಂದೆ ಬಿದ್ದಿರುವ ಆರ್‌ಐ, ವಿಎಗಳ ಚಳಿ ಬಿಡಿಸಿದರು.

ಕಂದಾಯ ಇಲಾಖೆ ಜನರ ಜೀವನದ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ. ಒಂದಲ್ಲ ಒಂದು ಕಾರಣಕ್ಕೆ ಜನ ಇಲಾಖೆಯ ಮೇಲೆ ಅವಲಂಭಿತರಾಗಿರುತ್ತಾರೆ. ನಮ್ಮ ಇಲಾಖೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಿದರೆ ಸರ್ಕಾರದ ಅರ್ಧ ಜವಾಬ್ದಾರಿ ನಿರ್ವಹಣೆಯಾದಂತೆ. ಇಲ್ಲಿ ರೈತರು ಹಾಗೂ ಬಡವರ ಕೆಲಸವೇ ಹೆಚ್ಚು. ಅಧಿಕಾರಿಗಳು ಸ್ವಯಂ ಪ್ರೇರಿತರಾಗಿ ಕೆಲಸ ನಿರ್ವಹಿಸಬೇಕು. ಆದರೆ ನಿಮಗೆ ಬಡವರ ಕೆಲಸ ಎಂದರೆ ಉದಾಸೀನ ಎಂದು ಬೇಸರ ವ್ಯಕ್ತಪಡಿಸಿದರು.

ಗೋಮಾಳದಲ್ಲಿ ವಾಸಕ್ಕೆ ಯೋಗ್ಯವಾದ ಮನೆಯನ್ನು ಅನಧಿಕೃತವಾಗಿ ಕಟ್ಟಿಕೊಂಡಿರುವುದನ್ನು ಸಕ್ರಮಗೊಳಿಸಲು ಅವಕಾಶವಿಲ್ಲ ಎಂದು ಬರೆದಿದ್ದೀರಿ. ಈ ನಿಯಮ ಯಾವ ಕಾನೂನು ಅಥವಾ ಆದೇಶದಲ್ಲಿದೆ. ಇಲ್ಲದಿರುವ ನಿಯಮವನ್ನು ಸೃಷ್ಟಿ ಮಾಡಿ, ನಮಗೂ ಅದೇ ರೀತಿ ಉತ್ತರ ಬರೆಯುತ್ತೀರಿ. ಕೆರೆ, ನಕ್ಷೆಯಲ್ಲಿರುವ ರಸ್ತೆ ಅರಣ್ಯ, ಕಾಲುವೆ ಹೊರತುಪಡಿಸಿ ಇನ್ನ್ಯಾವುದೇ ಸರ್ಕಾರಿ ಭೂಮಿಯಲ್ಲಿ ವಾಸದ ಮನೆ ನಿರ್ಮಿಸಿದ್ದರೆ 94–ಸಿ ಇಲ್ಲವೇ 94–ಬಿ ನೀಡಲು ತಾಕೀತು ಮಾಡಿದರು.

1 ಲಕ್ಷ ಫಿಕ್ಸ್?: 1–5 ಮಾಡಲು ಒಂದು ಲಕ್ಷ ಫಿಕ್ಸ್ ಆಗಿದೆ. ಕನಿಷ್ಟ 25 ಸಾವಿರ ಕೊಡದಿದ್ದರೆ ಹೇಗೆ ಎಂದು ಅಧಿಕಾರಿಗಳು ಕೇಳುತ್ತಾರೆ ಎಂದು ನಾನು ಬರುವಾಗ ರೈತರು ಹೇಳುತ್ತಿದ್ದರು. ಹಾಗಾದರೆ ಇದಕ್ಕಾಗಿಯೇ ಅರ್ಜಿ ಬಾಕಿ ಉಳಿಸಿಕೊಂಡಿದ್ದೀರಾ?. ಪೋಡಿ–ದರ್ಖಾಸ್ತು ಬಾಕಿ ಇಷ್ಟೊಂದು ಸಂಖ್ಯೆಯಲ್ಲಿ ಏಕೆ ಬಾಕಿ ಇದೆ ವಿಎಗಳು ಏನು ಮಾಡುತ್ತಿದ್ದಾರೆ ಎಂದು ಸಚಿವರು ಪ್ರಶ್ನಿಸಿದರು.

ಮೈಸೂರು ಮಿತ್ರ

ವೈದ್ಯರ ನಿರ್ಲಕ್ಷ್ಯದಿಂದ ಯುವಕನ ಸಾವು: ಕ್ಲಿನಿಕ್ ಮುಂಭಾಗ ತೀವ್ರ ಪ್ರತಿಭಟನೆ



ಸುಂಟಿಕೊಪ್ಪ, ನ.7– ಖಾಸಗಿ ಕ್ಲಿನಿಕ್ ವೈದ್ಯರ ನಿರ್ಲಕ್ಷ್ಯದಿಂದ ಯುವಕನೊಬ್ಬ ಮೃತಪಟ್ಟಿದ್ದು, ಮೃತರ ಕುಟುಂಬಸ್ಥರು ಮತ್ತು ಸಾರ್ವಜನಿಕರು ಶುಕ್ರವಾರ ಮಧ್ಯಾಹ್ನ ಸುಂಟಿಕೊಪ್ಪದ ಕ್ಲಿನಿಕ್ ಮುಂಭಾಗದಲ್ಲಿ ತೀವ್ರ ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ.

ಪಟ್ಟಣದ ನಿವಾಸಿ ಸ್ವಾಮಿ ಮತ್ತು ಸುಂದರಿ ದಂಪತಿ ಪುತ್ರ ವಿನೋದ್(34) ಗುರುವಾರ ಸಂಜೆ ತೀವ್ರ ತರಹದ ಸೊಂಟ ಹಾಗೂ ಕೈನೋವಿನ ಹಿನ್ನೆಲೆಯಲ್ಲಿ ಕನ್ನಡ ವೃತ್ತದ ಬಳಿಯಿರುವ ಉಮಾ ಕ್ಲಿನಿಕ್‌ಗೆ ಬಂದಿದ್ದರು. ಪರೀಕ್ಷಿಸಿದ ವೈದ್ಯ ಡಾ.ಯಶೋಧರ ಪೂಜಾರಿ ಅವರು 2 ಚುಚ್ಚು ಮದ್ದುಗಳ ಸಹಿತ ಕೆಲವು ಮಾತ್ರೆಗಳನ್ನು ನೀಡಿ ಮನೆಗೆ ಹೋಗಿ ವಿಶ್ರಾಂತಿ ಪಡೆಯುವಂತೆ ಸಲಹೆ ನೀಡಿದ್ದರೆನ್ನಲಾಗಿದೆ. ಅದರಂತೆ ಮನೆಗೆ ಬಂದ ಕೆಲ ಸಮಯದಲ್ಲೇ ವಿನೋದ್ ಅವರ ಆರೋಗ್ಯ ತೀವ್ರ ಹದಗೆಟ್ಟ ಹಿನ್ನೆಲೆಯಲ್ಲಿ ಕುಟುಂಬಸ್ಥರು ಮಡಿಕೇರಿ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಜಿಲ್ಲಾಸ್ಪತ್ರೆಯಲ್ಲಿ ಪರೀಕ್ಷಿಸಿದ ವೈದ್ಯರು ವಿನೋದ್ ಮೃತಪಟ್ಟಿರುವುದಾಗಿ ಘೋಷಿಸಿದರು.

ವೈದ್ಯರ ವಿರುದ್ಧ ಆಕ್ರೋಶ: ಮೃತ ಯುವಕನ ಶವವನ್ನು ಮರಣೋತ್ತರ ಪರೀಕ್ಷೆ ಬಳಿಕ ಅಂಬ್ಯುಲೆನ್ಸ್ ವಾಹನದಲ್ಲಿ ಸುಂಟಿಕೊಪ್ಪಕ್ಕೆ ತಂದು ಕ್ಲಿನಿಕ್ ಮುಂಭಾಗ ವಾಹನ ನಿಲ್ಲಿಸಿ ವೈದ್ಯರ ವಿರುದ್ಧ ಮೃತನ ಕುಟುಂಬಸ್ಥರು ಆಕ್ರೋಶ ಹೊರ ಹಾಕಿದರು. ವೈದ್ಯರ ವಿರುದ್ಧ ಕಾನೂನ ಕ್ರಮ ಜರುಗಿಸಿ ಯುವಕನ ಕುಟುಂಬಸ್ಥರಿಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆ ಆರಂಭವಾಗುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ವೃತ್ತನಿರೀಕ್ಷಕ ದಿನೇಶ್, ಪ್ರತಿಭಟನಾಕಾರರ ಮನವೊಲಿಸುವ ಪ್ರಯತ್ನ ನಡೆಸಿದರು. ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗಿದ್ದರಿಂದ ಹೆದ್ದಾರಿ ತಡೆ ನಡೆಸದಂತೆ ಪ್ರತಿಭಟನಾಕಾರರನ್ನು ಮನವೊಲಿಸಲು ಪ್ರಯತ್ನಿಸಿದರೂ ಪ್ರತಿಭಟನೆಯಿಂದ ಹಿಂದೆ ಸರಿಯಲಿಲ್ಲ. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಾರಿಕೆ ದಿನೇಶ್‌ಕುಮಾರ್ ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರ ಜೊತೆ ಮಾತುಕತೆ ನಡೆಸಿ ಠಾಣೆಗೆ ಕರೆದೊಯ್ದು ಸಂಧಾನ ಸಭೆಗೆ ಮುಂದಾದರು.

ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಮೋಹನ್‌ರಾಜ್, ತಾಲೂಕು ಆರೋಗ್ಯ ವೈದ್ಯಾಧಿಕಾರಿ ಡಾ.ಇಂದೂಧರ್, ಆರ್‌ಸಿಹೆಚ್ ಡಾ.ಮಧುಸೂದನ್, ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ಮೆಹರೋಜ್ ಅವರು ಸ್ಥಳಕ್ಕಾಗಮಿಸಿ ಖಾಸಗಿ ಕ್ಲಿನಿಕ್‌ಗೆ ಬೀಗ ಹಾಕಿದರು. ವೈದ್ಯರಿಗೆ ಶೋಕಾಸ್ ನೋಟಿಸ್ ನೀಡಲಾಗುವುದು. ಪ್ರಕರಣದ ವಿರುದ್ಧ ಈಗಾಗಲೇ ಮೊಕದ್ದಮೆ ದಾಖಲಾಗಿದೆ. ಶವ ಪರೀಕ್ಷೆ ವರದಿ ಬಂದ ಬಳಿಕ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಡಾ.ಇಂದೂಧರ್ ಪ್ರತಿಭಟನಾಕಾರರಿಗೆ ಭರವಸೆ ನೀಡಿದರು.

ಮಧ್ಯಾಹ್ನದಿಂದ ಸಂಜೆಯವರೆಗೂ ಅಂಬ್ಯುಲೆನ್ಸ್ ವಾಹನದಲ್ಲಿ ಮೃತ ಶರೀರವನ್ನು ಕ್ಲಿನಿಕ್ ಮುಂಭಾಗದಲ್ಲೇ ಇರಿಸಿದ್ದರು. ಪ್ರತಿಭಟನೆ ಆರಂಭದಲ್ಲೇ ಗ್ರಾಪಂ ಅಧ್ಯಕ್ಷ ಪಿ.ಆರ್.ಸುನಿಲ್ ಕುಮಾರ್, ಉಪಾಧ್ಯಕ್ಷೆ ಶಿವಮ್ಮ ಮಹೇಶ್ ಹಾಗೂ ಸದಸ್ಯರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿ.ಜಿ.ಲೋಕೇಶ್ ಪ್ರತಿಭಟನಾಕಾರರನ್ನು ಸಮಾಧಾನಿಸಲು ಸಾಕಷ್ಟು ಪ್ರಯತ್ನ ನಡೆಸಿದ್ದರೂ ಪ್ರಯೋಜನವಾಗಲಿಲ್ಲ. ಅಂತಿಮವಾಗಿ ಪೊಲೀಸ್ ಮತ್ತು ಗ್ರಾಮ ಪಂಚಾಯಿತಿ ಮಧ್ಯಸ್ಥಿಕೆಯಲ್ಲಿ ವಿನೋದ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಸಲು ಕುಟುಂಬಸ್ಥರು ಒಪ್ಪಿಗೆ ನೀಡಿದರು.

ನ.13ರಂದು ಪೊಲೀಸ್ ಠಾಣೆಯಲ್ಲಿ ಆರೋಪಿತ ವೈದ್ಯರ ಸಮ್ಮುಖದಲ್ಲಿ ಕುಟುಂಬಸ್ಥರು ಸಭೆ ನಡೆಸುವ ಲಿಖಿತ ಒಪ್ಪಂದದೊಂದಿಗೆ ಪ್ರತಿಭಟನೆ ಕೈಬಿಡಲಾಯಿತು. ಬಳಿಕ ಮೃತ ದೇಹದ ಅಂತ್ಯಕ್ರಿಯೆ ಹಿಂದೂ ರುದ್ರಭೂಮಿಯಲ್ಲಿ ಶುಕ್ರವಾರ ಸಂಜೆ ನೆರವೇರಿತು.

ರಸ್ತೆಯಲ್ಲಿ ಮಲಗುವ ಬದಲು ಬಿಜೆಪಿ ನಾಯಕರು ದೆಹಲಿಗೆ ತೆರಳಿ ಪರಿಹಾರ ಹುಡುಕಲಿ

ಮಡಿಕೇರಿ, ನ.7– ಬಿಜೆಪಿ ನಾಯಕರು ರಾಜ್ಯದ ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಕೆಗೆ ರೈತರೊಂದಿಗೆ ರಸ್ತೆಯಲ್ಲಿ ಮಲಗುವ ಬದಲು ದೆಹಲಿಗೆ ತೆರಳಿ ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಲಿ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಟಾಂಗ್ ನೀಡಿದ್ದಾರೆ.



ಸಚಿವ ಕೃಷ್ಣ ಭೈರೇಗೌಡ ಪೊನ್ನಂಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಶಾಸಕ ಎ.ಎಸ್. ಪೊನ್ನಣ್ಣ ಸಚಿವರೊಂದಿಗಿದ್ದರು.

ಕಬ್ಬು ಬೆಳೆಗಾರರ ಹೋರಾಟದ ಕುರಿತು ಮುಖ್ಯಮಂತ್ರಿಗಳು ಸಕ್ಕರೆ ಕಾರ್ಖಾನೆ ಮಾಲೀಕರ ಸಭೆ ಕರೆದು ರೈತರ ಬೇಡಿಕೆ ಈಡೇರಿಸುವಂತೆ ಮನ ವೊಲಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಇದರಲ್ಲಿ ಮುಖ್ಯಮಂತ್ರಿಗಳು ಫಲಪ್ರದವಾಗುವ ವಿಶ್ವಾಸವಿದೆ ಎಂದರು. ಕಬ್ಬು ಬೆಳೆಗಾರರ ಹೋರಾಟ, ಬೇಡಿಕೆಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಸಮಯವನ್ನೂ ಕೋರಿದ್ದಾರೆ. ಇದರಲ್ಲಿ ರಾಜ್ಯ ಸರ್ಕಾರದ ಯಾವುದೇ ಪಾತ್ರವಿಲ್ಲ. ಸಕ್ಕರೆ ರಫ್ತು ಪ್ರಮಾಣ ಏರಿಕೆಯಾದಲ್ಲಿ ಸಕ್ಕರೆ ದರ ಏರಿಕೆಯಾಗಿ ಕಬ್ಬು ಬೆಳೆಗಾರರಿಗೆ ಅನುಕೂಲವಾಗುತ್ತದೆ. ಮಾತ್ರವಲ್ಲದೇ ನ್ಯಾಯ ಸಮ್ಮತ ಮತ್ತು ಪ್ರೋತ್ಸಾಹದಾಯಕ ದರವನ್ನೂ ಕೇಂದ್ರವೇ ನಿಗಧಿ ಮಾಡುತ್ತದೆ ಎಂದರು.

ರಾಜ್ಯ ಸರಕಾರ ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಕೆಗೆ ಸಾಕಷ್ಟು ಪ್ರಯತ್ನಗಳನ್ನು ನಡೆಸುತ್ತಿದೆ. ರೈತರ ಜೊತೆಯಲ್ಲಿ ಮಾತುಕತೆ ನಡೆಸುವ ಪ್ರಯತ್ನ ನಡೆಸಿದೆ. ಆದರೆ ಕೇಂದ್ರ ಕೃಷಿ ಸಚಿವರು ಒಂದು ಸಭೆ ನಡೆಸಿದ್ದಾರೆಯೇ? ಪ್ರಧಾನಿಗಳು ದೇಶದ ಯಾವುದೋ ವಿಚಾರಗಳ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡುತ್ತಾರೆ. ರೈತರ ಪ್ರತಿಭಟನೆ ಕುರಿತು ಪ್ರಧಾನಿಗಳ ಪ್ರತಿಕ್ರಿಯೆ ಏನು? ಇವರಿಗೆ ರೈತರು ಲೆಕ್ಕಕ್ಕಿಲ್ಲವೇ? ಎಂದು ಖಾರವಾಗಿ ಪ್ರಶ್ನಿಸಿದರು. ಬಿಜೆಪಿ ನಾಯಕರು ರೈತರ ಜೊತೆಯಲ್ಲಿ ರಸ್ತೆಯಲ್ಲಿ ಮಲಗುವ ಬದಲು ದೆಹಲಿಗೆ ತೆರಳಿ ಕಬ್ಬು ಬೆಳೆಗಾರರ ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಲಿ. ಇಂತಹ ನಾಟಕಗಳಿಂದ ರಾಜಕೀಯ ಬೇಳೆ ಬೇಯಬಹುದು, ಇದೊಂದು ರಾಜಕೀಯ ನಾಟಕವಾಗುತ್ತದೆ ಅಷ್ಟೇ. ಆದರೆ ರೈತರಿಗೆ ಇದರಿಂದ ಯಾವುದೇ ಪ್ರಯೋಜನವಾಗಲಾರದು ಎಂದು ಟೀಕಿಸಿದರು.

ಅಧಿಕಾರಿಗಳಿಂದ ತಡೆ ಅಕ್ರಮ ಕಲ್ಲು ಗಣಿಗಾರಿಕೆ ಕಾಮಗಾರಿ ಸ್ಥಗಿತ



ನಾಪೋಕ್ಲು, ನ.7–ನಾಲಡಿ ಗ್ರಾಮದ ಹೊಳೆಯಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿದೆ ಎಂಬ ದೂರಿನ ಹಿನ್ನಲೆಯಲ್ಲಿ ಅಧಿಕಾರಿಗಳು ಕಾಮಗಾರಿಯನ್ನು ಸ್ಥಗಿತಗೊಳಿಸಿದ ಘಟನೆ ಶುಕ್ರವಾರ ಜರುಗಿದೆ.

ಕಂದಾಯ ಇಲಾಖೆಯ ನಾಪೋಕ್ಲು ವ್ಯಾಪ್ತಿಯ ನಾಲಡಿ ಗ್ರಾಮದ ಹೊಳೆಯಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು ಸೂಕ್ತ ಕ್ರಮ ಕೈಗೊಳ್ಳುವಂತೆ ಅಲ್ಲಿಯ ಸ್ಥಳೀಯರು ಒತ್ತಾಯಿಸಿದ್ದರು. ದೂರಿನ ಅನ್ವಯ ತಹಸೀಲ್ದಾರರ ಆದೇಶದಂತೆ ಕಂದಾಯ ಪರಿವೀಕ್ಷಕ ರವಿಕುಮಾರ್ ಹಾಗೂ ಸಿಬ್ಬಂದಿ ಮತ್ತು ಗಣಿ ಮತ್ತು ಭೂವಿಜ್ಞಾನ ಅಧಿಕಾರಿಗಳಾದ ರಾಹುಲ್ ಹಾಗೂ ರಾಯಲ್ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಸ್ಥಗಿತಗೊಳಿಸಿ ಕಾನೂನಿನ ಕ್ರಮ ಕೈಗೊಂಡಿದ್ದಾರೆ.

ಮಳೆಗಾಲದಲ್ಲಿ ನಾಲಡಿ ಹೊಳೆ ತುಂಬಿ ಹರಿಯುವುದರಿಂದ ರಸ್ತೆ ಸಂಪರ್ಕ ಸ್ಥಗಿತಗೊಂಡು ಸಂಕಷ್ಟದ ಹಿನ್ನೆಲೆಯಲ್ಲಿ ಅಲ್ಲಿಯ ಸ್ಥಳೀಯರು ಸ್ವಂತ ಖರ್ಚಿನಿಂದ ಸೇತುವೆ ನಿರ್ಮಾಣಕ್ಕೆ ಅಡಿಪಾಯ ಹಾಕಲು ಮುಂದಾಗಿದ್ದರು. ಕೊಡಗು ಸೂಕ್ಷ್ಮ ಪರಿಸರ ಪ್ರದೇಶವಾದ್ದರಿಂದ ಹಾಗೂ ನದಿ ಸಂರಕ್ಷಣೆಯ ಹಿತದೃಷ್ಟಿಯಿಂದ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಕೇಳಿ ಬಂದಿತ್ತು.

ನಾಳೆ ಮೇಲುಕೋಟೆಗೆ ಉಪರಾಷ್ಟ್ರಪತಿ ಭೇಟಿ

ಹೆಲಿಕಾಪ್ಟರ್ ಲ್ಯಾಂಡಿಂಗ್, ಟೇಕಾಫ್ ಪರಿಶೀಲಿಸಿದ ಅಧಿಕಾರಿಗಳ ತಂಡ



ಮಂಡ್ಯ: ಇದೇ ಭಾನುವಾರ ಉಪರಾಷ್ಟ್ರಪತಿ ರಾಧಾಕೃಷ್ಣನ್ ಮಂಡ್ಯ ಜಿಲ್ಲೆಯ ಮೇಲುಕೋಟೆಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಮೇಲುಕೋಟೆಯ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗದ ಮೈದಾನದಲ್ಲಿ ಹೆಲಿಕ್ಯಾಪ್ಟರ್ ಲ್ಯಾಂಡಿಂಗ್ ಹಾಗೂ ಟೇಕಾಫ್ ಮಾಡುವ ಮೂಲಕ ಭದ್ರತಾ ಪರಿಶೀಲನೆಯನ್ನು ಜಿಲ್ಲಾಧಿಕಾರಿ ಡಾ.ಕುಮಾರ ನಡೆಸಿದರು.

ಶುಕ್ರವಾರ ಜಿಲ್ಲಾಧಿಕಾರಿ ಡಾ.ಕುಮಾರ, ಮೇಲುಕೋಟೆಯ ಹೆಲಿಕಾಪ್ಟರ್ ಲ್ಯಾಂಡಿಂಗ್ ಸ್ಥಳಕ್ಕೆ ಭೇಟಿ ನೀಡಿ ಭಾರತೀಯ ವಾಯುಸೇನೆಯ ಅಧಿಕಾರಿಗಳ ಜೊತೆಗೂಡಿ ಹೆಲಿಕ್ಯಾಪ್ಟರ್ ಅನ್ನು ಇಳಿಸಿ ನೋಡಿ ಹಾಗೂ ಟೇಕಾಫ್ ಮಾಡುವ ಮೂಲಕ ಪರೀಕ್ಷೆ ನಡೆಸಿ ಸುರಕ್ಷತೆಯ ಕುರಿತಾಗಿ ಪರಿಶೀಲನೆ ಮಾಡಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಅವರ ಸಲಹೆಯಂತೆ ವಾಯುಪಡೆಯ ಅಧಿಕಾರಿಗಳು ಹಲವಾರು ಸಲ ಮೈದಾನದಲ್ಲಿ ಹೆಲಿಕ್ಯಾಪ್ಟರ್ ಇಳಿಸಿ ನಂತರ ಟೇಕಾಫ್ ಮಾಡಿ ಪರೀಕ್ಷಿಸುವ ಮೂಲಕ ಸುರಕ್ಷತೆ ಖಚಿತಪಡಿಸಿಕೊಂಡರು. ಉಪರಾಷ್ಟ್ರಪತಿಯವರು ಭಾರತೀಯ ವಾಯು ಸೇನೆಯ ವಿಶೇಷ ಹೆಲಿಕಾಪ್ಟರ್ ಮೂಲಕ ಮೇಲು ಕೋಟೆಗೆ ಆಗಮಿಸಿ ಇದೇ ಹೆಲಿಪ್ಯಾಡ್‌ನಲ್ಲಿ ಇಳಿಯಲಿದ್ದಾರೆ ಎಂದು ಮಾಹಿತಿ ನೀಡಿದರು.

ಮೇಲುಕೋಟೆಯ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗದ ಮೈದಾನದಲ್ಲಿ ಉಪರಾಷ್ಟ್ರಪತಿಗಳ ಹೆಲಿಕ್ಯಾಪ್ಟರ್ ಲ್ಯಾಂಡಿಂಗ್ ಮಾಡಲು ಮಾತ್ರ ಸ್ಥಳಾವಕಾಶವಿದ್ದು ಉಪರಾಷ್ಟ್ರಪತಿಯವರೊಂದಿಗೆ ಆಗಮಿಸುವ ಬೆಂಗಾವಲುಪಡೆಯ ಸೇನಾ ಹೆಲಿಕ್ಯಾಪ್ಟರ್‌ಗಳನ್ನು ಲ್ಯಾಂಡಿಂಗ್ ಮಾಡಲು ಎಸ್.ಇ.ಟಿ ಪಾಲಿಟೆಕ್ನಿಕ್ ಮೈದಾನದಲ್ಲಿ ಅವಕಾಶ ಮಾಡಲಾಗಿದೆ. ಯೋಗನರಸಿಂಹಸ್ವಾಮಿ ಬೆಟ್ಟದ ಹಿನ್ನೆಲೆಯಲ್ಲಿ ಹೆಲಿಕಾಪ್ಟರ್ ಹಾರಾಟ ಮಾಡುತ್ತಿರುವ ಮತ್ತು ಟೇಕಾಫ್ ಆಗುವುದನ್ನು ನೂರಾರು ಸಂಖ್ಯೆಯಲ್ಲಿ ಸೇರಿದ ನಾಗರೀಕರು ಮತ್ತು ವಿದ್ಯಾರ್ಥಿಗಳು ವೀಕ್ಷಿಸಿ ಆನಂದ ಅನುಭವಿಸಿದರು.

ಉಪರಾಷ್ಟ್ರಪತಿ ಭೇಟಿ ಭಾರಿ ಭದ್ರತೆ: ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನ.9ರಂದು ಹೆಲಿಪ್ಯಾಡ್‌ನಲ್ಲಿ ಹಾಜರಿದ್ದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್‌ರನ್ನು ಸ್ವಾಗತಿಸಿ ಚೆಲುವನಾರಾಯಣಸ್ವಾಮಿ ದೇವಾಲಯದ ದರ್ಶನ ಪಡೆಯುವವರೆಗೂ ಇರಲಿದ್ದಾರೆ. ಉಪರಾಷ್ಟ್ರಪತಿಯ ಭೇಟಿಯ ಹಿನ್ನೆಲೆ ಮೇಲುಕೋಟೆಯಲ್ಲಿ ಭಾರಿ ಭದ್ರತೆ ನಿಯೋಜಿಸಲಾಗುತ್ತಿದೆ. ಇದರೊಟ್ಟಿಗೆ ಭಾರತೀಯ ಸೇನಾಪಡೆ, ಉಪರಾಷ್ಟ್ರಪತಿಗಳ ಬೆಂಗಾವಲು ಪಡೆಗಳು ರಕ್ಷಣಾಕಾರ್ಯ ನಿರ್ವಹಿಸಲಿದೆ. ಇದರೊಟ್ಟಿಗೆ ಬಾಂಬ್ ನಿಷ್ಕ್ರಿಯ ದಳ, ಕ್ಷಿಪ್ರ ಕಾರ್ಯಚರಣೆಪಡೆ, ರ್‍ಯಾಪಿಡ್ ಫೋರ್ಸ್, ಅಗ್ನಿಶಾಮಕದಳ, ಗೃಹರಕ್ಷಕ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಜಿಪಂ ಸಿಇಓ ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿಗೆ ವಾಯುಪಡೆಯ ಅಧಿಕಾರಿಗಳು ಹೆಲಿಕ್ಯಾಪ್ಟರ್ ಚಲನವಲನದ ಹಾಗೂ ಸುರಕ್ಷತೆಯ ಬಗ್ಗೆ ಮಾಹಿತಿ ನೀಡಿದರು.

ಡ್ರೋಣ್ ಕ್ಯಾಮರಾ ನಿಷೇಧ: ಭಾರತದ ಉಪರಾಷ್ಟ್ರಪತಿಯವರು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮೇಲುಕೋಟೆಯ ಶ್ರೀ ಚಲುವನಾರಾಯಣಸ್ವಾಮಿ ದೇವಾಲಯಕ್ಕೆ ನ.9 ರಂದು ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಸದರಿ ದಿನದಂದು ಸನ್ಮಾನ್ಯರು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಮಾಡುವ ಸ್ಥಳಗಳಲ್ಲಿನ 15 ಕಿ.ಮೀ ವ್ಯಾಪ್ತಿಯಲ್ಲಿ ಮಾನವ ರಹಿತ ಏರ್–ಕ್ರಾಫ್ಟ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಿ ಆದೇಶಿಸಲಾಗಿದೆ.

ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದು ತಪ್ಪಿದಲ್ಲಿ ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ರೀತ್ಯಾ ಅಗತ್ಯ ಕ್ರಮ ವಹಿಸಲು ಪೊಲೀಸ್ ಇಲಾಖೆಗೆ ಸೂಚಿಸಿ ಜಿಲ್ಲಾಧಿಕಾರಿಗಳ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ಈ ವೇಳೆ ದೇವಾಲಯದ ಆಡಳಿತಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿ ಡಾ.ಶ್ರೀನಿವಾಸ್, ತಹಶೀಲ್ದಾರ್ ಬಸವರೆಡ್ಡಪ್ಪ, ಮುಜರಾಯಿ ತಹಶೀಲ್ದಾರ್ ತಮ್ಮೇಗೌಡ, ಉಪತಹಶೀಲ್ದಾರ್ ರಾಜೇಶ್, ಗ್ರಾಮಾಧಿಕಾರಿ ರಮೇಶ್, ದೇವಾಲಯದ ಇಓ ಶೀಲಾ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಭವಾನಿ ಹರಿಧರ್, ಉಪಾಧ್ಯಕ್ಷ ಜಿ.ಕೆ.ಕುಮಾರ್ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.



ಮೇಲುಕೋಟೆಯಲ್ಲಿ ಹಾರಾಟ ನಡೆಸುತ್ತಿರುವ ಹೆಲಿಕಾಪ್ಟರ್.



ಇಂದು ಪಾಂಡವಪುರದಲ್ಲಿ ಕನಕದಾಸರ ಜಯಂತಿ

ಪಾಂಡವಪುರ: ಪಟ್ಟಣದ ತಾಲೂಕು ಕಚೇರಿಯಲ್ಲಿ ನಾಡಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಆಡಳಿತ ವತಿಯಿಂದ ನ.8ರಂದು ಶನಿವಾರ ಬೆಳಿಗ್ಗೆ 10.30ಕ್ಕೆ ಭಕ್ತ ಕನಕದಾಸರ ಜಯಂತಿಯನ್ನು ಆಚರಿಸಲಾಗುವುದು ಎಂದು ತಹಶೀಲ್ದಾರ್ ಬಸವರೆಡ್ಡಪ್ಪರೋಣದ ತಿಳಿಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಉಪವಿಭಾಗಾಧಿಕಾರಿ ಕೆಆರ್.ಶ್ರೀನಿವಾಸ್ ಉದ್ಘಾಟಿಸಲಿದ್ದಾರೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಸಚಿವ ಎನ್.ಚಲುವರಾಯಸ್ವಾಮಿ, ವಿಧಾನಪರಿಷತ್ ಸದಸ್ಯರಾದ ಕೆ.ವಿವೇಕಾನಂದ, ದಿನೇಶ್‌ಗೂಳಿಗೌಡ, ಮಧು ಜಿ.ಮಾದೇಗೌಡ, ಕುರುಬ ಸಂಘದ ಅಧ್ಯಕ್ಷ ಡಿ.ಹುಚ್ಚೇಗೌಡ, ಉಪಾಧ್ಯಕ್ಷ ಕರೀಗೌಡ ಭಾಗವಹಿಸಲಿದ್ದಾರೆ. ನಿವೃತ್ತ ಕನ್ನಡ ಉಪನ್ಯಾಸಕ ಎನ್.ಚಲುವೇಗೌಡ ಅವರು ಪ್ರಧಾನ ಭಾಷಣ ಮಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು, ವಿವಿಧ ಇಲಾಖೆಯ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ನ.12 ರಂದು ಕುಂದುಕೊರತೆ ಸಭೆ

ಮಂಡ್ಯ, ನ.7– ಮಂಡ್ಯ ಲೋಕಾಯುಕ್ತ ವಿಭಾಗದ ಅಧಿಕಾರಿಗಳು ಕೆ.ಆರ್.ಪೇಟೆ ತಾಲೂಕಿನಲ್ಲಿ ನ.12 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಕೆ.ಆರ್.ಪೇಟೆ ತಾಲೂಕು ಕಚೇರಿ ಆವರಣದಲ್ಲಿ ಸಾರ್ವಜನಿಕರ ಕುಂದುಕೊರತೆ ಸಭೆ ನಡೆಸಲಿದ್ದಾರೆ. ಕುಂದು ಕೊರತೆ ಸಭೆಯಲ್ಲಿ ಸಾರ್ವಜನಿಕರಿಂದ ದೂರು, ಅಹವಾಲು ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ದೂರುಗಳನ್ನು ಸ್ವೀಕರಿಸಲಿದ್ದಾರೆ.

ಪಿಎಸ್‌ಎಸ್‌ಕೆ ಕಾರ್ಮಿಕರ ಬ್ಯಾಂಕ್ ಮುಚ್ಚದಂತೆ ಆಗ್ರಹಿಸಿ ಪ್ರತಿಭಟನೆ



ಪಟ್ಟಣದಲ್ಲಿ ಪಿಎಸ್‌ಎಸ್‌ಕೆ ನಿವೃತ್ತ ನೌಕರರು ಹಾಗೂ ಸಾರ್ವಜನಿಕರು ಪಿಎಸ್‌ಎಸ್‌ಕೆ ಕಾರ್ಮಿಕ ಬ್ಯಾಂಕ್ ಮುಚ್ಚದಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಪಾಂಡವಪುರ, ನ.7: ಪಿಎಸ್‌ಎಸ್‌ಕೆ ಕಾರ್ಮಿಕರ ಬ್ಯಾಂಕ್‌ನ್ನು ಮುಚ್ಚದಂತೆ ಆಗ್ರಹಿಸಿ ಕಾರ್ಖಾನೆಯ ನಿವೃತ್ತ ನೌಕರರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿಯ ಎದುರು ನಿವೃತ್ತ ನೌಕರರು ಸೇರಿ ಈಗಿನ ಆಡಳಿತ ಮಂಡಳಿಯಾದ ನಿರಾಣಿ ಶುಗರ್ಸ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆಯ ಹಿಂದಿನ ಆಡಳಿತ ಮಂಡಳಿಯೂ ಕಾರ್ಖಾನೆಯಲ್ಲಿ ಕೆಲಸ ಮಾಡುವ ನೌಕರರ ಆರ್ಥಿಕ ವ್ಯವಹಾರ ನಡೆಸಲು ಪಿಎಸ್ ಎಸ್‌ಕೆ ಕಾರ್ಮಿಕರ ಬ್ಯಾಂಕ್ ಆರಂಭಿಸಿದ್ದರು. ಅಂದಿನಿಂದಲೂ ಅಲ್ಲಿ ಕೆಲಸ ಮಾಡುವ ಎಲ್ಲಾ ಕಾರ್ಮಿಕರು, ನಿವೃತ್ತ ಕಾರ್ಮಿಕರು ಬ್ಯಾಂಕ್‌ನಲ್ಲಿ ವ್ಯವಹರಿಸಿಕೊಂಡು ಬಂದಿದ್ದಾರೆ. ಆದರೆ, ಇದೀಗ ಕಾರ್ಖಾನೆ ಯನ್ನು ಗುತ್ತಿಗೆ ಪಡೆದಿರುವ ನಿರಾಣಿ ಶುಗರ್ಸ್‌ನವರು ಕಾರ್ಮಿಕರ ಬ್ಯಾಂಕ್‌ನನ್ನು ಸರಿಯಾಗಿ ನಿರ್ವಹಣೆ ಮಾಡದೆ ಬ್ಯಾಂಕ್‌ನ್ನು ಮುಚ್ಚುವ ಹಂತಕ್ಕೆ ತಂದು ನಿಲ್ಲಿಸಿದ್ದಾರೆ.

ಇದರಿಂದ ಮೊದಲಿಂದಲೂ ವ್ಯವಹರಿಸಿಕೊಂಡು ಬಂದಿರುವ ಕಾರ್ಮಿಕರಿಗೆ ಅನಾನೂಕೂಲ ಉಂಟಾಗಲಿದೆ, ಈಗ ಕೆಲಸ ಮಾಡುತ್ತಿರುವ ನೌಕರರಿಗೆ ಅನಾನೂಕೂಲ ಉಂಟಾಗಲಿದೆ ಹಾಗಾಗಿ ಈಗಿನ ಆಡಳಿತ ಮಂಡಳಿಯೂ ಯಾವುದೇ ಕಾರಣಕ್ಕೂ ಕಾರ್ಮಿಕ ಬ್ಯಾಂಕನ್ನು ಮುಚ್ಚಬಾರದು, ಒಂದು ವೇಳೆ ಬ್ಯಾಂಕ್ ಮುಚ್ಚಲು ಮುಂದಾದರೆ ಮುಂದಿನ ದಿನಗಳಲ್ಲಿ ಉಗ್ರಸ್ವರೂಪದ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದ ಉಪ ತಹಶೀಲ್ದಾರ್ ಸಂತೋಷ್ ಅವರು ಕಾರ್ಖಾನೆಯ ನಿವೃತ್ತ ನೌಕರರ ಮನವಿಯನ್ನು ಸಂಬಂಧಿಸಿದ ಮೇಲಾಧಿಕಾರಿಗಳಿಗೆ ತಲುಪಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ನಿವೃತ್ತ ನೌಕರ ಎಂ.ನಂಜೇಗೌಡ, ಬೋರೇಗೌಡ, ಸರೋಜಮ್ಮ, ಜಯಮ್ಮ, ನಿಂಗೇಗೌಡ, ಕರೀಗೌಡ, ಕೆಂಪೇಗೌಡ, ಎಚ್.ನಿಂಗೇಗೌಡ, ಭಾಗ್ಯಮ್ಮ, ಶಿವಮ್ಮ ಲಕ್ಷ್ಮಮ್ಮ, ಚಿಕ್ಕತಾಯಮ್ಮ, ಗಂಗಾಧರ್, ನರಸಿಂಹೇಗೌಡ, ಸೇರಿದಂತೆ ಅನೇಕ ಕಾರ್ಮಿಕರು ಇದ್ದರು.

ಬಂಡೀಪುರ ಅರಣ್ಯದಲ್ಲಿ ಕಾರು, ರಿವಾಲ್ವಾರ್ ಪತ್ತೆ





ಮಂಗಲ ರಸ್ತೆಯ ಅರಣ್ಯ ಪ್ರದೇಶದಲ್ಲಿ ಪತ್ತೆಯಾದ ಕಾರು ಹಾಗೂ ಅದರೊಳಗೆ ಇದ್ದ ಪಿಸ್ತೂಲ್.

ಗುಂಡ್ಲುಪೇಟೆ, ನ.7 (ಸೋಮ್.ಜಿ)– ಬಂಡೀಪುರ ಅರಣ್ಯ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶಿಸಿದ್ದ ಕಾರು ಮತ್ತು ಅದರೊಳಗಿದ್ದ ಪಿಸ್ತೂಲ್ ಅನ್ನು ಅರಣ್ಯಾಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ.

ಬಂಡೀಪುರದ ಮಂಗಲ ರಸ್ತೆಯ ಸೊಳ್ಳೆ ಕಟ್ಟೆಯ ಸಮೀಪ ಚರಂಡಿಯ ಪಕ್ಕದಲ್ಲಿ ಪತ್ತೆಯಾದ ಕಾರನ್ನು ಅರಣ್ಯ ಸಿಬ್ಬಂದಿ ಪರಿಶೀಲಿಸಿದಾಗ ಅದರೊಳಗೆ ಯಾರೂ ವ್ಯಕ್ತಿಗಳು ಇರಲಿಲ್ಲ. ಆದರೆ ಒಂದು ಪಿಸ್ತೂಲ್ ಪತ್ತೆಯಾಗಿದೆ. ಕಾರಿನ ಕೀ ಅಲ್ಲಿಯೇ ಇದ್ದುದರಿಂದ ಅದನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಆರ್‌ಸಿ ಪರಿಶೀಲಿಸಿದಾಗ ಚನ್ನಪಟ್ಟಣ ಮೂಲದ ಬೋರಯ್ಯ ಎಂಬುವರಿಗೆ ಸೇರಿದ್ದೆನ್ನಲಾಗಿದೆ ಅವರಿಗೆ ಕರೆ ಮಾಡಿದಾಗ ತಮ್ಮ ಮಗ ಕಾರನ್ನು ತೆಗೆದುಕೊಂಡುಹೋಗಿದ್ದು ಸದ್ಯ ಅವನ ಮೊಬೈಲ್ ಸ್ವಿಚಾಫ್ ಆಗಿದೆ ಎಂದು ತಿಳಿಸಿದ್ದಾರೆ. ಈ ಬಗ್ಗೆ ಅಕ್ರಮ ಪ್ರವೇಶ ಹಾಗೂ ಅಕ್ರಮ ಶಸ್ತ್ರಾಸ್ತ್ರ ಹೊಂದಿರುವ ಬಗ್ಗೆ ಪ್ರಕರಣ ದಾಖಲಿಸಲಾಗಿದೆ ಎಂದು ಬಂಡೀಪುರ ವಲಯದ ಆರ್‌ಎಫ್‌ಓ ಎನ್.ಸಿ.ಮಹದೇವ ತಿಳಿಸಿದ್ದಾರೆ.

ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಬಂಡೀಪುರದ ಚೆಕ್‌ಪೋಸ್ಟ್‌ಗಳನ್ನು ರಾತ್ರಿ 9 ಗಂಟೆಗೆ ಬಂದ್ ಮಾಡಲಾಗುತ್ತದೆ. ಆದರೆ ಮಧ್ಯರಾತ್ರಿ ಒಂದು ಗಂಟೆ ವೇಳೆಗೆ ನೆರೆರಾಜ್ಯಗಳಿಗೆ ಹೋಗುವ ಹಾಗೂ ಅಲ್ಲಿಂದ ಬರುವ ಬಸ್ಸುಗಳಿಗಾಗಿ ಗೇಟ್ ತೆರೆಯಲಾಗುತ್ತದೆ.

ಈ ಸಂದರ್ಭದಲ್ಲಿ ಚೆಕ್ ಪೋಸ್ಟ್ ಸಿಬ್ಬಂದಿಯ ಕಣ್ತಪ್ಪಿಸಿ ಅಕ್ರಮವಾಗಿ ಬಂಡೀಪುರ ಪ್ರವೇಶಿಸಿದ್ದ ಕಾರು ಮಂಗಲ ರಸ್ತೆಯ ಸೊಳ್ಳೆಕಟ್ಟೆ ಅರಣ್ಯ ಪ್ರದೇಶದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಚಕ್ರಗಳು ಚರಂಡಿಯೊಳಗೆ ಸಿಲುಕಿದೆ. ಆದರೆ ಅದರಲ್ಲಿದ್ದವರು ತಡರಾತ್ರಿಯಲ್ಲಿ ಎಲ್ಲಿಹೋದರು ಎಂಬುದು ಪತ್ತೆಯಾಗಿಲ್ಲ. ಈ ಬಗ್ಗೆ ತನಿಖೆ ನಡೆಯುತ್ತಿದೆ.

ಕಬ್ಬಿನ ದರ ಹೆಚ್ಚಳಕ್ಕೆ ಒತ್ತಾಯಿಸಿ ರೈತರ ಪ್ರತಿಭಟನೆ

ಚಾಮರಾಜನಗರ,ನ.7–ಪ್ರತಿ ಟನ್ ಕಬ್ಬಿಗೆ ಕಟಾವು ಮತ್ತು ಸಾಗಾಣಿಕೆ ಕೂಲಿಯನ್ನು ಬಿಟ್ಟು 3500 ರೂ. ನಿಗದಿಗೊಳಿಸಬೇಕು ಎಂದು ಒತ್ತಾಯಿಸಿ ರೈತ ಸಂಘ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ನಗರದ ಹೊರವಲಯದ ದೊಡ್ಡರಾಯನಪೇಟೆ ಗೇಟ್ ಬಳಿ ಪ್ರತಿಭಟನೆ ನಡೆಸಿದರು.




ರೈತ ಸಂಘ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಸಿದರು.

ರೈತ ಮುಖಂಡರಾದ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಮಹೇಶ್‌ಪ್ರಭು ಹಾಗೂ ಮಹೇಶ್ ಕುಮಾರ್ ನೇತೃತ್ವದಲ್ಲಿ ಜಮಾಯಿಸಿದ ನೂರಾರು ರೈತರು ತಮಿಳುನಾಡು ಮತ್ತು ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿಯನ್ನು ತಾಸಿಗೂ ಹೆಚ್ಚು ಕಾಲ ತಡೆದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಬ್ಬಿನ ಬೆಲೆ ಹೆಚ್ಚಳ ಕುರಿತು ಸಿಎಂ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಸರ್ಕಾರ ಆದಷ್ಟು ಬೇಗ ಟನ್ ಕಬ್ಬಿಗೆ 3,500 ರೂ. ಬೆಲೆ ನಿಗದಿಪಡಿಸುವಂತೆ ಪಟ್ಟು ಹಿಡಿದಿರುವ ಬೆಳೆಗಾರರು ರೈತರ ಜೊತೆಗಿನ ಸಂಧಾನ ವಿಫಲವಾದರೇ ಉಗ್ರ ಹೋರಾಟ ಮಾಡುತ್ತೇವೆ. ಪ್ರತಿ ಜಿಲ್ಲಾ ಕೇಂದ್ರಗಳಲ್ಲೂ ಹೋರಾಟ ನಡೆಯಲಿದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಹಾಲಿನ ನಾಗರಾಜ್, ಆಲೂರ್ ಮಹೇಶ್‌ಪ್ರಭು, ಜ್ಯೋತಿಗೌಡನಪುರ ಸಿದ್ದರಾಜು, ಮಹೇಶ್, ಕೆರೆಹುಂಡಿ ರಾಜಣ್ಣ, ಮಲಿಯೂರು ಮಹೇಂದ್ರ, ಪ್ರಕಾಶ್ ಗಾಂಧಿ, ಸತೀಶ್, ಹೊನ್ನಗೌಡನಹಳ್ಳಿ ಮಹೇಶ್, ಮುದ್ದಳ್ಳಿ ಮಧು, ಚಿದಂಬರ, ಗುರುವಿನಪುರ ಚಂದ್ರು, ಮೋಹನ್, ಜನ್ನೂರು ಶಾಂತರಾಜು, ಅಂಬಳೆ ಶಿವರಾಜು, ಮಹೇಶ್, ರಾಜು, ಪುಟ್ಟಮಲ್ಲೇಗೌಡ, ರಾಮಣ್ಣ, ಬಸವರಾಜು, ನಾಗರಾಜಪ್ಪ, ಶ್ರೀಕಂಠ ಸೇರಿದಂತೆ ಹಲವು ಮಂದಿ ರೈತರು ಹಾಜರಿದ್ದರು.

ಟೋಲ್ ಗೇಟ್ ಬಂದ್: ಸಾಮೂಹಿಕ ನಾಯಕತ್ವದಲ್ಲಿ ರೈತ ಸಂಘವು ತಾಲೂಕಿನ ಅಟ್ಟಗೂಳಿಪುರದ ಟೋಲ್‌ಗೇಟ್‌ನಲ್ಲಿ ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿತು. ಕಬ್ಬು ಬೆಳೆಗಾರರ ಹೋರಾಟಕ್ಕೆ ಬೆಂಬಲ ಹಾಗೂ ಸ್ಥಳೀಯ ವಾಹನಗಳಿಗೂ ಟೋಲ್ ವಿಧಿಸುತ್ತಿರುವುದನ್ನು ಖಂಡಿಸಿ ರಸ್ತೆ ತಡೆ ನಡೆಸಿ ಆಕ್ರೋಶ ಹೊರಹಾಕಿದರು.



ದಿಕ್ಕೆಟ್ಟು ಬಂದ ಆನೆಯಿಂದ ಗುಂಡ್ಲುಪೇಟೆ ಪಟ್ಟಣ ಜನತೆ ದಿಗ್ಮೂಢರಾದರು!

ಆವೇಶದಿಂದ ಓಡಾಡಿದರೂ ಜನ, ವಾಹನಗಳಿಗೆ ಹಾನಿ ಮಾಡದ ಪಾರ್ಥಸಾರಥಿ

ಗುಂಡ್ಲುಪೇಟೆ, ನ. 7(ಸೋಮ್‌ಜಿ, ಎಂಟಿವೈ)– ಸೂರ್ಯ ಮುಳುಗುವ ವೇಳೆ ತಂಪಾದ ಗಾಳಿ ಬೀಸುತ್ತಿತ್ತು. ಪಟ್ಟಣದಲ್ಲಿ ಕೆಲಸ ಮುಗಿಸಿ ತಮ್ಮ ಗ್ರಾಮಗಳಿಗೆ ತೆರಳುತ್ತಿದ್ದ ಪ್ರಯಾಣಿಕರಿಂದ ಬಸ್ ನಿಲ್ದಾಣ ಗಿಜಿಗುಡುತ್ತಿತ್ತು. ಅಲ್ಲದೇ, ಬಸ್ ನಿಲ್ದಾಣದ ಮುಂಭಾಗವೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಓಡಾಡುತ್ತಿದ್ದರು. ವಾಹನಗಳ ಸಂಖ್ಯೆಗೂ ಕೊರತೆ ಇರಲಿಲ್ಲ. ಸಂಜೆ 6.30ರ ಸುಮಾರಿನಲ್ಲಿ ಗಜರಾಜ ನುಗ್ಗಿ ಬಂದಿದ್ದಾನೆ.

ಹಠಾತ್ತನೇ ಆನೆ ಬರುತ್ತಿರುವುದನ್ನು ಕಂಡ ಸಾರ್ವಜನಿಕರು ದಿಗ್ಭ್ರಾಂತರಾದರು. ಕೆಲವರಂತೂ ಓಡಲಾರಂಭಿಸಿದರು. ಆದರೆ, ಆವೇಶದಿಂದ ಬಂದ ಆನೆ, ರಸ್ತೆ ವಿಭಜಕದ ಬಳಿ ನಿಂತಿದ್ದ ವೃದ್ಧೆಯ ಪಕ್ಕದಲ್ಲೇ ಹಾದು ಹೋಯಿತಾದರೂ ಆಕೆಗೆ ಏನೂ ಮಾಡಿಲ್ಲ. ಅದೇ ರೀತಿ ರಸ್ತೆಯಲ್ಲಿ ಸಂಚರಿಸುತ್ತಿದ್ದ ವಾಹನಗಳಿಗೂ ತೊಂದರೆ ಕೊಡದೆ ಅವುಗಳನ್ನೂ ದಾಟಿ ಓಡುತ್ತಿತ್ತು.

ಭಯಭೀತರಾಗಿದ್ದರೂ ಆನೆ ಜನಗಳಿಗಾಗಲೀ, ವಾಹನಗಳಿಗಾಗಲೀ ಏನನ್ನೂ ಮಾಡದೇ ತನ್ನಷ್ಟಕ್ಕೆ ತಾನು ಗಾಬರಿಯಿಂದ ಓಡುತ್ತಿದ್ದುದ್ದನ್ನು ಕಂಡ ಜನರು ಆಶ್ಚರ್ಯಚಕಿತರಾದರು. ಆ ಆನೆಯ ಕಾಲಿನಲ್ಲಿ ಸರಪಳಿ ಸುತ್ತಿರುವುದನ್ನು ಗಮನಿಸಿದ ಕೆಲವರು, ಇದು ಕಾಡಾನೆಯಲ್ಲ ಸಾಕಾನೆ ಎಂದು ಉದ್ಗರಿಸಿ ನಿಟ್ಟುಸಿರು ಬಿಟ್ಟರು. ಕೆಲ ಹೊತ್ತಿನಲ್ಲೇ ಅರಣ್ಯ ಇಲಾಖೆ ಸಿಬ್ಬಂದಿ ಆನೆಯನ್ನು ಹುಡುಕಿಕೊಂಡು ಬಂದು ವಿಚಾರಿಸಿದಾಗಲೇ ಈ ಆನೆ ಹುಲಿ ಸೆರೆ ಕಾರ್ಯಾಚರಣೆಗಾಗಿ ಬಂಡೀಪುರ ಶಿಬಿರದಿಂದ ಕರೆತರಲಾಗಿತ್ತು ಎಂಬುದು ಗೊತ್ತಾಗಿದೆ.

ಅರಣ್ಯ ಸಿಬ್ಬಂದಿ ಬರುವಷ್ಟರಲ್ಲಿ 'ಪಾರ್ಥಸಾರಥಿ' ಎಂಬ ಈ ಆನೆಯು ಬಸ್ ನಿಲ್ದಾಣ ಬಳಿಯಿಂದ ಪೊಲೀಸ್ ಠಾಣೆ ಹಿಂಭಾಗ ತೆರಳಿ ಮಡಹಳ್ಳಿ ಗುಡ್ಡದ ಕಡೆಗೆ ಸಾಗಿತ್ತು. ಆನೆಗಾಗಿ ಅದರ ಮಾವುತರು ಮತ್ತು ಅರಣ್ಯ ಸಿಬ್ಬಂದಿ ರಾತ್ರಿವರೆಗೂ ಹುಡುಕಾಡಿದರೂ ಅದು ಪತ್ತೆಯಾಗಿಲ್ಲ. ಈ ಆನೆ ಗುಂಡ್ಲುಪೇಟೆ–ಕೇರಳ ರಸ್ತೆ ದಾಟಿ ಮಲ್ಲಯ್ಯನಪುರ, ಶ್ರೀರಾಮಪುರ ಮೂಲಕ ಮಡಹಳ್ಳಿ ಕಡೆಗೆ ಹೋಗಿ ಹಿಮವದ್ ಗೋಪಾಲಸ್ವಾಮಿ ಬೆಟ್ಟ ತಲುಪಿರಬಹುದು ಎಂದು ಶಂಕಿಸಲಾಗಿದ್ದು, ಪಾರ್ಥಸಾರಥಿ ಪತ್ತೆಗೆ ಸಿಬ್ಬಂದಿ ಹುಡುಕಾಟ ನಡೆಸುತ್ತಿದ್ದಾರೆ.

ಕಡಜದ ಕಡಿತಕ್ಕೆ ಕಂಗಾಲಾದ ಪಾರ್ಥಸಾರಥಿ: ಗುಂಡ್ಲುಪೇಟೆ ತಾಲೂಕು ಇಂಗಲವಾಡಿ, ಪಡಗೂರು, ಕಲ್ಲಳ್ಳಿ ಸುತ್ತಮುತ್ತಲ ಗ್ರಾಮಗಳಲ್ಲಿ ಕಳೆದ 15 ದಿನಗಳಿಂದ ಹುಲಿ ಸಂಚರಿಸಿ ಜಾನುವಾರುಗಳನ್ನು ಬೇಟೆಯಾಡುತ್ತಿದೆ ಎಂಬ ಮಾಹಿತಿ ಮೇರೆಗೆ ಹುಲಿ ಸೆರೆಗಾಗಿ ಹಳೇ ಬಂಡೀಪುರ ಕ್ಯಾಂಪ್‌ನಿಂದ ಪಾರ್ಥಸಾರಥಿ ಯನ್ನು ಕರೆತಂದು ಕಲ್ಲಳ್ಳಿ ಬಳಿ ಇರಿಸಲಾಗಿತ್ತು. ಶುಕ್ರವಾರ ಸಂಜೆ ಮಾವುತ ಚೇತನ್ ಆನೆಗೆ ನೀರು ಕುಡಿಸಿ ವಾಪಸ್ ಕರೆತರುವಾಗ ಕಾಡು ಕಡಜ ನೊಣಗಳು ಆನೆಗೆ ಕಚ್ಚಿವೆ. ನೋವಿನಿಂದ ನರಳಿದ ಆನೆ ದಿಕ್ಕೆಟ್ಟು ಓಡಲಾರಂಭಿಸಿದ್ದು, ಈ ವೇಳೆ ಮಾವುತ ಚೇತನ್ ಆನೆ ಮೇಲಿಂದ ಕೆಳಗೆ ಬಿದ್ದಿದ್ದಾರೆ.

ಒಂದು ಬಾರಿ ದಸರಾ ಮಹೋತ್ಸವದಲ್ಲೂ ಪಾಲ್ಗೊಂಡಿದ್ದ ಸೌಮ್ಯ ಸ್ವಭಾವದ ಪಾರ್ಥಸಾರಥಿ, ತನ್ನನ್ನು ನಿಯಂತ್ರಿಸುವ ಮಾವುತನಿಲ್ಲದೇ, ಪಟ್ಟಣದೊಳಗೆ ಅಡ್ಡಾದಿಡ್ಡಿ ಓಡಾಡಿತ್ತಾದರೂ, ಯಾರಿಗೂ ಯಾವುದೇ ರೀತಿಯ ತೊಂದರೆ ಕೊಡದೇ ಕಾಡು ಸೇರಿಕೊಂಡಿರುವುದು ವಿಶೇಷ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

Civil Construction
SKANDA PROPERTIES
Services:
1) Plan as per Vasstu 2D & 3D
2) Elevation Design
3) Online Plan Approval
4) Building Maintenance
5) Civil Construction work
Mob: 9964541740

ವಿವಾಹ ವೇದಿಕೆ
ಆಫೀಸ್ (Matrimony) ಗಳಲ್ಲಿ ಕೆಲಸ ಮಾಡಿರುವಂತಹ ಅನುಭವವುಳ್ಳ ಮಹಿಳೆ ಅಥವಾ ಪುರುಷ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ.
Mob: 9900502224

MUDA Site for Sale
ಮೈಸೂರಿನ ಪ್ರತಿಷ್ಠಿತ BVL PREMIO ಬಡಾವಣೆಯಲ್ಲಿ 40x60 ಸೈಟ್.
Mob: 9886048471

SITES FOR SALE
30x40, 40x60
Vishwa Prajna Layout
Dhanvith Properties
Mob: 9740088990

MUDA Site for Sale
ವಿಜಯನಗರ 4ನೇ ಹಂತ ಮಾದಗಳ್ಳಿಯ "ಶೌರ್ಯ ಲೇಔಟ್" 30x40 North Face ಸೈಟ್.
Mob: 9886048471

WANTED
airtel
Sim sales Executive
salary 15,000
Incentive up to 10,000
9591501305

SITE FOR SALE
Teacher's Layout 30x40
Bannur Road 40x60
King City 30x40
Mob: 9448447035

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಪಾರ್ಟ್ ಟೈಮ್ ಅಥವಾ ಫುಲ್ ಟೈಮ್ ಕೆಲಸಕ್ಕೆ ಮಹಿಳೆಯರು / ಪುರುಷರು ಬೇಕಾಗಿದ್ದಾರೆ.
8898858814

MUDA & RERA Approved
Site For Sale
Shree Sapthamathruka Layout, E-Khata & Bank Loan Available, 30x40 West Facing -30Lakhs* South & Park Facing - 32Lakhs*
Contact: 7795 609 173

SITE FOR SALE
30x40, MUDA Approved, East face with bore, Paramananda Sagara-1, Huilalu, Elwala, Mysore.
Mob: 82178 51695

ವೆಜ್ ಹೋಟೆಲ್ ಮಾರಾಟಕ್ಕಿದೆ
ಸಂಪೂರ್ಣ ಸೌಲಭ್ಯಗಳೊಂದಿಗೆ, ಉತ್ತಮ ಸ್ಥಳದಲ್ಲಿ, ದಿನನಿತ್ಯ ಉತ್ತಮ ಗ್ರಾಹಕರ ಸಂಪರ್ಕ, ತಕ್ಷಣ ವ್ಯವಹಾರ ಆರಂಭಿಸಲು ಸಿದ್ಧ
ಮೈಸೂರು ನಗರ
ಬೆಲೆ: 8,00,000
9241734399

EAST FACE MUDA APPROVED
40x60
SITE FOR SALE
NITYANANDASAGARA HUILALU, MYSORE
Mob: 8217851695

MUDA Site for SALE
ಕ್ರೈಸ್ತ್ ಪಬ್ಲಿಕ್ ಸ್ಕೂಲ್ ಪಕ್ಕ ನ್ಯಾಯಾಂಗ ಬಡಾವಣೆಯಲ್ಲಿ ಸೈಟ್‌ಗಳು ಲಭ್ಯ
Mob: 9886048471

SITE FOR SALE
30x40 NORTH Site for sale in SUNCITY HOME IN ELWALA, MYSORE
READY TO BUILT WITH BORE.
Mob: 8217851695

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666



SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಹಾಗೂ ಸೋಲಾರ್ ಸರ್ವೀಸ್
Mob: 9964733988

ತಿರುಪತಿ – ಕಾಳಹಸ್ತಿ ಪ್ಯಾಕೇಜ್
ನವೆಂಬರ್ 14 ಮತ್ತು 17 ಹೊರಡುವುದು.
ಗೋ ಮೈಸೂರ್ ಹಾಲಿಡೇಸ್
Mob: 9036154302
90361 54301, 94487 38617
ಕೆಲವೇ ಸೀಟುಗಳು ಇರುತ್ತದೆ

SITE FOR SALE
30x40
(MUDA Approved)
Just 1 Km to Sri Rampura Ring Road Circle, Mysuru
8050345574

RERA APPROVED — RAI ESTATES — MUDA APPROVED
E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ–
Rs. 11,200 (24 CT)
9108146123

WANTED
Sri Sapthagiri Builders & Developers
Mysuru hebbal 1st Stage
1) Driver - 02
2) Tele calling -02
9591828444
9980524644

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 8197383645

ಮಾರಾಟಕ್ಕಿದೆ
ಪ್ರೀಮಿಯಂ ಸೈಟುಗಳು
30x40, 30x50, 40x60 ಅಳತೆಯುಳ್ಳ ಎಲ್ಲಾ ರೀತಿಯ ಸೌಲಭ್ಯಗಳಿರುವ ನಿವೇಶನಗಳು. ಶೆಟ್ಟಿನಾಯಕನಹಳ್ಳಿಯಲ್ಲಿ DTCP & RERA Approved, ಕೆ.ಹೆಮ್ಮನಹಳ್ಳಿ ಹತ್ತಿರ, ಬೋಗಾದಿಯಿಂದ ಹುಯಿಲಾಳು ಕಡೆಗೆ
8050681613

COMMERCIAL SPACE FOR RENT
1st Floor Office Space, Roof Top Café Space, Next to Aishwarya Hospital, Vijayanagar 3rd Stage. Contact:
9141789977

ಉದ್ಯೋಗವಕಾಶ
ಕಂಪನಿ ಮತ್ತು ಆಫೀಸ್‌ಗಳಿಗೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್ / ಫೇಲ್ ಆದಂತಹ ಯುವಕರು, ಯುವತಿಯರಿಗೆ 20,000 ದಿಂದ 45,000 + ಓಟಿ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿ ಯೂಟವಿದೆ. ಸಂಪರ್ಕಿಸಿ:
Mob: 99167 44622

ಕೆಲಸ ಖಾಲಿ ಇದೆ
ಮೈಸೂರಿನಲ್ಲಿರುವ ಮಹಿಳೆಯರಿಗೆ ಪುರುಷರಿಗೆ ಮತ್ತು ವಿದ್ಯಾರ್ಥಿಗಳಿಗೆ ಆಫೀಸ್ ಕೆಲಸಗಳಿಗೆ ನೇರವಾಗಿ ಆಯ್ಕೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್ / ಫೇಲ್ ಆದಂತಹವರಿಗೆ. ಸಂಬಳ: 20,000 ದಿಂದ 45,000. ಸಂಪರ್ಕಿಸಿ:
Mob: 80951 33188

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064

ಹೊಸ ಮನೆ ಮಾರಾಟಕ್ಕಿದೆ (Hurry)
20x30, 3 BHK, 3 floor E/F ಸುಂದರ ಮನೆ, ಲಲಿತಾದ್ರಿನಗರ ರಿಂಗ್ ರಸ್ತೆ (ಬಾಲಾಜಿ ಲೇಔಟ್)ನಲ್ಲಿ ಮಾರಾಟಕ್ಕಿದೆ. Good location. Best price.
Contact:
7760065890, 9480222708

ಯಾತ್ರಿಕ ಭವನ ಬಾಡಿಗೆಗೆ ದೊರೆಯುತ್ತದೆ
ಮದುವೆ ಸಮಾರಂಭದ ಸಭಾಂಗಣ ಅಡುಗೆ ಮನೆ, ಊಟದ ಮನೆ ಇರುವ ಯಾತ್ರಿಕ ಭವನ (ಛತ್ರ) ಬಾಡಿಗೆಗೆ ದೊರೆಯುತ್ತದೆ. ಹೋಟೆಲ್, ಗಾರ್ಮೆಂಟ್ಸ್, ಗೋಡೌನ್, ಶೋರೂಂ ಹಾಗೂ ಶುಭ ಸಮಾರಂಭದ ಕಾರ್ಯಕ್ರಮಗಳಿಗೆ ಬಾಡಿಗೆಗೆ ನೀಡಲಾಗುವುದು. ಸ್ಥಳ: ಪಾಲಹಳ್ಳಿ, ಕೆ.ಆರ್.ಎಸ್. ಮುಖ್ಯರಸ್ತೆ (ಪೆಟ್ರೋಲ್ ಬಂಕ್ ಎದುರು), ಪಶ್ಚಿಮ ವಾಹಿನಿ ಹತ್ತಿರ, ಶಿವಜ್ಯೋತಿ ಯಾತ್ರಿಕ ಭವನ.
Mob: 7204441949

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ತಕ್ಷಣ ಬೇಕಾಗಿದೆ
ವಾಣಿಜ್ಯ ಬಳಕೆಗಾಗಿ 3 ರಿಂದ 5 ಸಾವಿರ ಅಡಿ ಇರುವ ಕಟ್ಟಡ/ಖಾಲಿ ಜಾಗ ದಟ್ಟಗಳ್ಳಿ, RR ನಗರ, ರಾಮಕೃಷ್ಣನಗರ, ಶ್ರೀರಾಂಪುರ, ನಿವೇದಿತನಗರದಲ್ಲಿ Ground Floor ಬಾಡಿಗೆಗೆ ಬೇಕಾಗಿದೆ
7019012485

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

New Gurukula International School , Vijayanagar,
Mahadeshwara Badavane, Mysore. (Preference for the candidates surrounding Vijaynagar and Hebbal mysore) Wanted teachers for the subject– Science, English and Mathematics
Mob: 9741875540

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಅಡುಗೆ ಭಟ್ಟರು ಬೇಕಾಗಿದ್ದಾರೆ
ಮಿಲ್ಟ್ರಿ ಹೋಟೆಲ್‌ನಲ್ಲಿ ನಾನ್‌ವೆಜ್ ಅಡುಗೆ ಮಾಡುವ ಕೆಲಸಗಾರರು, ಸಂಪರ್ಕಿಸಿ
9740279617

ಮನೆ ಬಾಡಿಗೆಗೆ ಇದೆ
ಸಸ್ಯಾಹಾರಿಗಳಿಗೆ ಮಾತ್ರ, ಕಚೇರಿಗೆ/ ಚಿಕ್ಕ ಸಂಸಾರಕ್ಕೆ ಸೂಕ್ತವಾದ ತಾರಸಿ ಮನೆ. ಎರಡನೇ ಅಂತಸ್ತಿನಲ್ಲಿದೆ. ದೇವಿರಮ್ಮಣ್ಣಿ ಅಗ್ರಹಾರ–ರಾಮಾನುಜ ರೋಡ್, ವಿದ್ಯಾಪೀಠದ ಎದುರು, ಗನ್‌ಹೌಸ್ ಸರ್ಕಲ್ ಬಳಿ
9449886322

SITE FOR SALE
South Face MUDA Approved 50x38 TSK Serenity Belevadi, Mysore
Mob: 8971192531

HOUSE FOR SALE
20x30, ground floor single house and first floor duplex (South facing) J.P. Nagar, behind JSS Public School.
Mob: 9980861876
NO BROKERS

ಹೊಸ ಮನೆ ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ 3 ಬೆಡ್‌ರೂಂ, ಇಟಾಲಿಯನ್ ಕಿಚನ್, ಆಲ್ ಟೀಕ್ ವುಡ್ ಮತ್ತು ಗ್ರಾನೈಟ್ ಸ್ನಾನದ ಟಬ್ ಹೊಂದಿರುವ ಮನೆ. ರೂ. 90 ಲಕ್ಷ.
Mob: 9945042875

Urgent Site for sale
ANANDA SAGARA, MUDA Approved 30x40 East facing Price: Rs. 48 Lakhs. Site No. 368. Contact:
JK, 8951144240

We are hiring join our team
Position Available: Graphic Designer: Male-1, Female-1. Basic knowledge Coreldraw & Photoshop in 1 year experience. Flex Printing Machine Operator-1. LED Board Maker-1. Newly opening flex printing shop request. Salary best in industry. Interested candidates send your resume
7204935087, 7306811538

DOCUMENT LOST
ABSOLUTE SALE DEED
MYN-1-19727 2012-13
ಸ್ಥಿರ ಸ್ವತ್ತಿನ ಶುದ್ಧ ಕ್ರಯಪತ್ರ
MYN-1-04019-2011-12
ಕಳೆದುಹೋದ ದಿನಾಂಕ 6–11–2025
ಕಳೆದುಹೋದ ಸ್ಥಳ : ದೇವರಾಜ ಅರಸ್ ರೋಡ್, ಮೈಸೂರು, ಸಿಕ್ಕಿದಲ್ಲಿ ಈ ನಂಬರ್‌ಗೆ ಕಾಂಟ್ಯಾಕ್ಟ್ ಮಾಡಿ :
9148671977

SITE FOR SALE
E/F 30x50 Bhoomika PR Valley, Hunsur Road
43x40 S/W Corner KHB Kenchalagudu
6361194562, 9731112182

ಸೈಟು ಮಾರಾಟಕ್ಕಿದೆ
30x50 E/F
ಸುವರ್ಣನಗರ, ಭೋಗಾದಿ.
9742421313, 9945779947

SITE FOR SALE
40x60 North site sale, Roopa Nagar.
Call: 98802 73834

SITE FOR SALE
30x40 W/F
28x30 S/West Corner
Serena Bloosam Layout
Attached to V.Nagar 4th Stage.
Mob: 8861137033

HOUSE FOR RENT
2 BHK between Vijaynagar 3rd Stage and Hunasur Main Road, Mysore Vegetarians only. Call
9611073195

ಕಳೆದು ಹೋಗಿದೆ
ಶಾಂತಪ್ಪ. A MIG '1' 401. ರಾಜೀವನಗರ, 1ನೇ ಹಂತ, ಈ ಮನೆಯ ಮೂಲ ದಾಖಲೆ ಪತ್ರಗಳಾದ, ಮಂಜೂರಾತಿ ಪತ್ರ, ಸ್ವಾಧೀನ ಪತ್ರ ಮತ್ತು ಟೈಟಲ್ ಡೀಡ್ ಪತ್ರಗಳು ಕಳೆದುಹೋಗಿರುತ್ತದೆ. ಸಿಕ್ಕಿದವರು ಈ ನಂಬರಿಗೆ ಸಂಪರ್ಕಿಸಿ
8105491965, 9448023146

ಸೈಟುಗಳು ಬೇಕಾಗಿವೆ
ವರುಣ JSS ರಾಜೇಂದ್ರನಗರ/ JSS 3ನೇ ಹಂತ, ವರುಣ, ಬಸವೇಶ್ವರ/ ನಿರ್ಮಾಣ್ ಲೇಔಟ್ ಬ್ಯಾಂಕರ್ಸ್ ಲೇಔಟ್ ಹಾಗೂ ಸುತ್ತಮುತ್ತ ಇರುವ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ/ ಬನ್ನೂರು ರಸ್ತೆ
9686071750

ಮನೆ ಮಾರಾಟಕ್ಕಿದೆ
20x30 ಗೊರೂರು (N/F) (ಆಶ್ರಯ) ಬ್ಲಾಕ್ ನಂ. 4, ರಾಷ್ಟ್ರೋತ್ಥಾನ ಸ್ಕೂಲ್ ಹತ್ತಿರ, (ರಾಮಪ್ರಸಾದ್ ಲೇಔಟ್ ಪಕ್ಕ)
₹ 20,00,000
9620563026

ಭೋಗ್ಯಕ್ಕೆ
2 BHK ಇಂಡಿಪೆಂಡೆಂಟ್ ವಿತ್ ಕಾರ್ ಪಾರ್ಕಿಂಗ್ ಮನೆ ಬೋಗ್ಯಕ್ಕೆ ದೊರೆಯುತ್ತದೆ. K.R.S. ರೋಡ್ ವರುಣಾ ನಾಲೆ ಹತ್ತಿರ, ಮಾರುತಿ ದೇವಸ್ಥಾನದ ಹಿಂಭಾಗ,
7349409838, 9731000761

MUDA AUCTION CORNER SITE FOR SALE
20X30, S/W, Vijayanagar 4th Stage
2 year New House, G+1+1,
Price: 87 Lakhs (Neg), Contact :
8861325971

FOR RENT
RCC commercial building measuring 2000sq ft along with 2000sq ft front lawn in Vishnu Vardhana road, door no 1058, facing Manuvana park is available for rent. Please contact owner
9448303685

ಕಳೆದು ಹೋಗಿದೆ
ಎಂ.ಬಿ. ವೀರಭದ್ರಪ್ಪ, # 332, 1ನೇ ಹಂತ, ವಿಶ್ವೇಶ್ವನಗರ, ಮೈಸೂರು –8. ಈ ಮನೆಯ ಮೂಲ ದಾಖಲೆ ಪತ್ರಗಳಾದ ಮಂಜೂರಾತಿ ಪತ್ರ, ಸ್ವಾಧೀನ ಪತ್ರ ಮತ್ತು ಟೈಟಲ್ ಡೀಡ್ ಪತ್ರಗಳು ಕಳೆದುಹೋಗಿರುತ್ತದೆ. ಸಿಕ್ಕಿದವರು ಈ ನಂಬರಿಗೆ ಸಂಪರ್ಕಿಸಿ
9901900990, 9986647545

ಜಮೀನು ಬಾಡಿಗೆಗಿದೆ
ಎಲ್ಲಾ ಸೌಕರ್ಯವಿರುವ ಅಲಿನೇಶನ್ ಆಗಿರುವ 1 ¼ ಎಕರೆ ಜಮೀನು ಬೋಗಾದಿ–ಗದ್ದಿಗೆ ರಸ್ತೆಯಲ್ಲಿ ಸಿಗ್ನಲ್ ಲೈಟ್‌ನಿಂದ 3 ½ ಕಿಮೀ ದೂರದಲ್ಲಿ ಬಾಡಿಗೆಗಿರುತ್ತೆ, ರೆಸಾರ್ಟ್ ಕೈಗಾರಿಕೆ ಶಾಲೆ ಇತರೆ ಉದ್ದೇಶಕ್ಕೆ ಬಾಡಿಗೆಗಿದೆ.
ಸಂಪರ್ಕಿಸಿ: 8197609290

ಟೀಚರ್ಸ್ ಟ್ರೈನಿಂಗ್
ನೀವೂ ಒಬ್ಬ ಟೀಚರ್ ಆಗ ಬೇಕಲ್ಲವೇ ? SSLC, ಪಾಸ್ ಸಾಕು PUC, Degree Pass/Fail, NURSERY TEACHERS TRAINING, PRIMARY TEACHERS TRAINING, ಟ್ರೈನಿಂಗ್ ನಂತರ ತಕ್ಷಣ ಕೆಲಸ. ಬನ್ನಿ, ಸೇರಿ, ಪಾಸಾಗಿ, ಸಂಪಾದಿಸಿ
I PUC ಓದುತ್ತಿರುವವರು ಸಹ ಸೇರಬಹುದು
Jnana Gangotri Convent
Watsapp/Call
9113980741

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree, ಪಾಸ್/ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI, PF, ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 - 86000
7892046990

FOR RENT
2 BHK, N/F, # 36/B, ಸಾಯಿಸದನ, 4th Main, 26th Cross, Behind Maruthi Store, Vidyaranyapuram, Mysore.
9343031452
9739039595

ಮನೆ ಬಾಡಿಗೆಗೆ ಇದೆ
1 BHK ಗ್ರೌಂಡ್ ಫ್ಲೋರ್ 24 ಘಂಟೆ ನೀರಿನ ಸೌಲಭ್ಯವುಳ್ಳ ಮನೆಯು ವಿಜಯನಗರ 4ನೇ ಹಂತದಲ್ಲಿ ಬಾಡಿಗೆಗೆ ದೊರೆಯುತ್ತದೆ.
7349409838, 9731000761

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತಮುತ್ತ ಇರುವ ಲೇಔಟ್‌ಗಳಲ್ಲಿ.
9844436672

ಜಮೀನು ಬೇಕಾಗಿದೆ
10–15 ಕುಂಟೆ
ಗೆಜ್ಜಗಳ್ಳಿ, ಮಂಡಕಳ್ಳಿ ಸುತ್ತಮುತ್ತ
Contact : 9632020620

ವಧು ಬೇಕಾಗಿದೆ
ಬ್ರಾಹ್ಮಣ ವರನಿಗೆ ಬ್ರಾಹ್ಮಣ ಅಥವಾ ಯಾವುದೇ ಸಸ್ಯಾಹಾರಿ ವಧು ಬೇಕಾಗಿದೆ. ಡೈವೋರ್ಸ್ ಅಥವಾ ವಿಧವೆಯರೂ ನೇರವಾಗಿ ಸಂಪರ್ಕಿಸಬಹುದು.
9341208567
ಮೈಸೂರು.

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಶನಿ ದೋಷ ಪೀಡಾ ಪರಿಹಾರ
ಸಾಡೇಸಾತಿ, ಅಷ್ಟಮ, ವಾಹನ ಅಪಘಾತ, ಶನಿದೋಷ ಪೀಡಾ ಪರಿಹಾರಕ್ಕೆ ಕಪ್ಪು ಮತ್ತು ಬಿಳಿ ಕುದುರೆ ಲಾಳದಿಂದ ಉಂಗುರ, ಬಳೆ ಮಾಡಿಕೊಡಲಾಗುತ್ತದೆ.
ಪಂ॥ ಎಂ.ಆರ್.ದಿನೇಶ್ ಆಚಾರ್
9972650168

New House for Sale
30x40 E/F
Ground, 1st & 2nd Floor, 1 room with attach bath @ Aravinda Nagara, Mysore.
9972554154, 9886676431

MUDA Approved SITES FOR SALE
30x40 West facing 2 sites for sale at Bramhananda Sagara (Nesara) Layout, Off Yelwala to Srirangapatna Road & suitable for immediate construction.
Contact: Mysore Estates
Vishwanath Gowda
Mob: 9590911111

20x30 Old house for sale
20x30 West facing North door 10 years old house for sale at Vijayanagar 4th Stage, 3rd Phase, near 2nd Marimallappa's School.
Contact: Mysore Estates
Vishwanth Gowda
Mob: 95909 11111

ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ, ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ, ಎಲೆಕ್ಟ್ರಿಕಲ್ ಕೆಲಸ, ಇಂಟೀರಿಯರ್ ಕೆಲಸ, ಹಾಗೂ ಸಿವಿಲ್ ಆಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ... ಕರೆ ಮಾಡಿ,
VASANTHA BUILDERS
Mob: 8151035074,
9035012579, 9164573142

WANTED
Billing Executive - 1
Accountant - 1
Store Manager - 1
Car Driver - 1
Email: job.btcmysore@gmail.com
Whatsapp resume:
9019323999

ಬೇಕಾಗಿದ್ದಾರೆ
ಸೋನಾಲಿಕಾ ಟ್ರ್ಯಾಕ್ಟರ್ ಷೋರುಂ ಶ್ರೀ ಮಂಜುನಾಥ ಟ್ರ್ಯಾಕ್ಟರ್ಸ್, ಮೈಸೂರು ಬೋಗಾದಿ ರಿಂಗ್‌ರೋಡ್ ಜಂಕ್ಷನ್ ಮೈಸೂರು, ನಂಜನಗೂಡು, ಟಿ.ನರಸೀಪುರ ಶಾಖೆಗಳಿಗೆ ಸೇಲ್ ಎಕ್ಸಿಕ್ಯೂಟಿವ್ ಮತ್ತು ಮೆಕ್ಯಾನಿಕ್‌ಗಳು ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ವೇತನ ಮತ್ತು ಟಿ.ಎ. ಡಿ.ಎ ನೀಡಲಾಗುತ್ತದೆ. ಆಸಕ್ತರು ಸಂಪರ್ಕಿಸಿ
9880111933, 9880999411

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಹೌಸ್ ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಜೆ.ಪಿ. ನಗರ, ಸಿದ್ಧಾರ್ಥ ಲೇಔಟ್ ಮತ್ತು ಮೈಸೂರು ಸುತ್ತ ಮುತ್ತ ESI ಮತ್ತು PF ಸೌಲಭ್ಯವಿರುತ್ತದೆ.
9901607889
8710040058

ಬೇಕಾಗಿದ್ದಾರೆ
ನಮ್ಮದೇ ಬ್ರ್ಯಾಂಡಡ್ ಇರುವ ಟೀ ಪೌಡರ್, ಕಾಫಿ ಪೌಡರ್ ಸಾವಯವ ಬೆಲ್ಲದ ಪೌಡರ, ಅಗರ್‌ಬತ್ತಿ ಮತ್ತು ರೈಸ್‌ಗಾಗಿ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ವಿತರಕರು ಬೇಕಾಗಿದ್ದಾರೆ. ಅಧಿಕ ಲಾಭ ಪಡೆಯಿರಿ
6361740552, 9449408551

ಬೇಕಾಗಿದ್ದಾರೆ
ಅನುಭವವುಳ್ಳ ಡ್ರೈವರ್ ಬೇಕಾಗಿದ್ದಾರೆ.
ವಯಸ್ಸು : 40-50(Age)
ಹೆಬ್ಬಾಳ್, ಮೈಸೂರು
ಸ್ಥಳೀಯರಿಗೆ ಮೊದಲ ಆದ್ಯತೆ
9901212321, 8880883339

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ






ಬೆಳಗಾವಿ ರೈತರ ಹೋರಾಟವನ್ನು ಬೆಂಬಲಿಸಿ ನಂಜನಗೂಡು, ಕೆ.ಆರ್.ನಗರ, ಹುಣಸೂರು, ಹೆಚ್.ಡಿ.ಕೋಟೆಯಲ್ಲಿ ರೈತರು ಹೆದ್ದಾರಿ ತಡೆ, ಪ್ರತಿಭಟನೆ ನಡೆಸುವ ಮೂಲಕ ತಮ್ಮ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು.

ಬೆಳಗಾವಿ ರೈತರ ಹೋರಾಟ ಬೆಂಬಲಿಸಿ ಮೈಸೂರು ಜಿಲ್ಲೆಯಾದ್ಯಂತ ಪ್ರತಿಭಟನೆ

ನಂ.ಗೂಡು, ಕೆ.ಆರ್.ನಗರದಲ್ಲಿ ಹೆದ್ದಾರಿ ತಡೆ, ಹುಣಸೂರು, ಹೆಚ್.ಡಿ.ಕೋಟೆಯಲ್ಲಿ ಪ್ರತಿಭಟನೆ, ಮನವಿ ಸಲ್ಲಿಕೆ

ಮೈಸೂರು: ಪ್ರತಿ ಟನ್ ಕಬ್ಬಿಗೆ 3500 ರೂ. ದರ ನಿಗದಿಪಡಿಸುವಂತೆ ಆಗ್ರಹಿಸಿ ಬೆಳಗಾವಿಯಲ್ಲಿ ರೈತರು ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಿ ಮೈಸೂರು ಜಿಲ್ಲೆಯಾದ್ಯಂತ ರೈತರು ಬೀದಿಗಿಳಿದು ಪ್ರತಿಭಟನೆ ನಡೆಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ನಂಜನಗೂಡು ಪಟ್ಟಣದ ದೇವರಾಜ ಅರಸು ಸೇತುವೆ ಬಳಿ ಜಮಾವಣೆಗೊಂಡ ರೈತ ಸಂಘದ ಪದಾಧಿಕಾರಿಗಳು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸುವ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ರೈತ ಸಂಘದ ಅಧ್ಯಕ್ಷ ಸತೀಶ್ ರಾವ್ ಮಾತನಾಡಿ, ತಾಲೂಕಿನ ಅಳಗಂಚಿಯ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಗೆ ರೈತರು ಸರಬರಾಜು ಮಾಡುವ ಪ್ರತಿ ಟನ್ ಕಬ್ಬಿಗೆ 3,290 ದರ ನೀಡುತ್ತಿದೆ, ಪ್ರತಿ ಟನ್ ಕಬ್ಬಿಗೆ 3,500 ರೂಗಳನ್ನು ರೈತರ ಖಾತೆಗೆ ಮುಂಗಡವಾಗಿ ಜಮಾ ಮಾಡಬೇಕು. ಕಬ್ಬು ಕಟಾವಿನ ಕೂಲಿ, ಸಾಗಾಣಿಕ ವೆಚ್ಚವನ್ನು ಕಾರ್ಖಾನೆ ಭರಿಸಬೇಕು ಎಂದರು.

ರೈತರು ನಂಜನಗೂಡು–ಮೈಸೂರು ಹೆದ್ದಾರಿಯಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿದ್ದರಿಂದ ಸಂಚಾರ ಅಸ್ತವ್ಯಸ್ತಗೊಂಡು ವಾಹನ ಸವಾರರು ಪರದಾಡಿದರು. ಡಿವೈಎಸ್‌ಪಿ ರಘು ಅವರ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು. ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಉಪಾಧ್ಯಕ್ಷರಾದ ನಂಜುಂಡ, ದೊಡ್ಡಯ್ಯ, ಶಿವಣ್ಣ, ಮಹದೇವ ನಾಯಕ, ಶಂಕರನಾಯ್ಕ, ಸಿದ್ದಪ್ಪಾಜಿ, ರವಿ, ಗಜ, ಕುಮಾರ, ದೇವ ನಾಯಕ, ಶ್ವೇತ, ಸವಿತಾ, ಸಾಕಮ್ಮ ನಂಜುಂಡಸ್ವಾಮಿ, ನಾಗೇಂದ್ರ, ಗೋವಿಂದ ನಾಯಕ, ವರದರಾಜು, ತಿಮ್ಮನಾಯಕ, ಶೋಭಾ, ಸೇರಿದಂತೆ ಹಲವಾರು ರೈತ ಮುಖಂಡರು ಉಪಸ್ಥಿತರಿದ್ದರು.

ಕೆ.ಆರ್.ನಗರ: ಕಬ್ಬಿಗೆ ಹೆಚ್ಚಿನದರ ನಿಗದಿಗೆ ಆಗ್ರಹಿಸಿ ನಡೆಯುತ್ತಿರುವ ಕಬ್ಬು ಬೆಳೆಗಾರರ ಹೋರಾಟವನ್ನು ಬೆಂಬಲಿಸಿ, ರಾಜ್ಯ ಸರ್ಕಾರ ಕೂಡಲೇ ಕಬ್ಬು ಬೆಳೆಗಾರರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕ ಹಾಗೂ ವಿವಿಧ ರೈತ ಸಂಘಟನೆಗಳು ಪಟ್ಟಣದ ತಾಲೂಕು ಆಡಳಿತ ಸೌಧದ ಮುಂದೆ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಅವರಿಗೆ ಮನವಿ ಪತ್ರ ನೀಡಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ತಾಲೂಕು ಯುವ ರೈತ ವೇದಿಕೆಯ ಅಧ್ಯಕ್ಷ ಅರ್ಜುನಹಳ್ಳಿ ರಾಮ್ ಪ್ರಸಾದ್ ಮಾತನಾಡಿದರು.

ಇದಕ್ಕೂ ಮೊದಲು ರೈತ ಮುಖಂಡರು ಗರುಡಗಂಭ ವೃತ್ತದಿಂದ ಬೈಕ್ ರ‍್ಯಾಲಿ ಮೂಲಕ ಪುರಸಭೆ ವೃತ್ತದಲ್ಲಿ ಜಮಾವಣೆಗೊಂಡು ಹಾಸನ– ಮೈಸೂರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿ ನಂತರ ತಾಲೂಕು ಆಡಳಿತ ಸೌಧದ ಕಚೇರಿಗೆ ಆಗಮಿಸಿ ತಹಸೀಲ್ದಾರ್ ಜೆ.ಸುರೇಂದ್ರ ಮೂರ್ತಿ ಮನವಿ ಪತ್ರ ನೀಡಲಾಯಿತು.

ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ರಾಜ್ಯ ರೈತ ಸಂಘದ ವರಿಷ್ಠ ಸರಗೂರು ನಟರಾಜ್, ಜಿಲ್ಲಾ ಉಪಾಧ್ಯಕ್ಷ ಎಂ.ಎಸ್.ನಟರಾಜ್ ಮಾತನಾಡಿದರು.

ತಾಲೂಕು ಅಧ್ಯಕ್ಷ ಎಂ.ಜೆ.ಮಲ್ಲೇಶ್, ಹೊಂಬಾಳೇಗೌಡ, ರಾಜ್ಯ ರೈತ ಪರ್ವ ಸಂಘದ ಗೌರವಾಧ್ಯಕ್ಷ ಜೆ.ಎಂ.ಕುಮಾರ್, ರೈತ ಮುಖಂಡರಾದ ಗರುಡಗಂಭ ಸ್ವಾಮಿ, ಕುಬೇರಪ್ಪ, ವೀಣಾ, ಸುಜಾತ, ರೋಹಿತ್, ಶಿವಶಂಕರ್, ಕಗ್ಗರೆ ಮಹದೇವ, ನಟರಾಜ್, ಎ.ಡಿ.ಮಂಜುನಾಥ್, ಕಾಮೇನಹಳ್ಳಿ ಹರೀಶ್, ಕಂಠೇನಹಳ್ಳಿ ನಾಗರಾಜ್, ರಮೇಶ್, ಕಳ್ಳಿಮುದ್ದನಹಳ್ಳಿ ಚಂದ್ರು ಸೇರಿದಂತೆ ವಿವಿಧ ರೈತ ಸಂಘಟನೆಯ ಮುಖಂಡರು ಭಾಗಿಯಾಗಿದ್ದರು.

ಹುಣಸೂರು ಪ್ರತಿಭಟನೆ: ಕಬ್ಬಿನ ದರ ಪ್ರತಿ ಟನ್ನಿಗೆ 3500 ರೂ. ನಿಗದಿಗೊಳಿಸಬೇಕೆಂದು ಒತ್ತಾಯಿಸಿ ಬೆಳಗಾಂನಲ್ಲಿ ಹೋರಾಟ ಮಾಡುತ್ತಿರುವ ರೈತರ ಧರಣಿಯನ್ನು ಬೆಂಬಲಿಸಿ ಇಂದು ಹುಣಸೂರಿನಲ್ಲಿ ರೈತ ಸಂಘ ಹಾಗೂ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಹುಣಸೂರು ತಾಲೂಕು ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ರಸ್ತೆತಡೆ ಚಳುವಳಿ ಮಾಡಿ ತಹಸೀಲ್ದಾರ್ ಅವರ ಮುಖಾಂತರ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಹೊಸೂರ್ ಕುಮಾರ್ ಮಾತನಾಡಿ, ಸರ್ಕಾರವು ಕೂಡಲೇ ರೈತರ ಬೇಡಿಕೆಯನ್ನು ಈಡೇರಿಸಿ ಕಬ್ಬಿಗೆ ಪ್ರತಿ ಟನ್‌ಗೆ 3500 ರೂ.ರಂತೆ ದರವನ್ನು ನಿಗಧಿಗೊಳಿಸಿ ಸರ್ಕಾರವು ರೈತರ ನೆರವಿಗೆ ಬರಬೇಕಾಗಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಹೊಸೂರ್ ಕುಮಾರ್, ತಾಲೂಕು ಅಧ್ಯಕ್ಷ ಬೆಂಕಿಪುರ ಚಿಕ್ಕಣ್ಣ, ತಾಲೂಕು ಕಾರ್ಯದರ್ಶಿ ಅಗ್ರಹಾರ ರಾಮೇಗೌಡ, ಉಂಡವಾಡಿ ಚಂದ್ರೇಗೌಡ, ಉಪಾಧ್ಯಕ್ಷರಾದ ಕಟ್ಟೆ ಮಳಲವಾಡಿ ಮಹಾದೇವ್, ಜಿಲ್ಲಾ ಉಪಾಧ್ಯಕ್ಷ ಹಾಲಿಜಾನ್, ಈಶ್ವರ್ ರಾಮಪಟ್ಣ, ರವಿಗೌಡ ಹರಳಹಳ್ಳಿ, ಬಸವರಾಜು, ಬಸವರಾಜೇಗೌಡ ಕಾಳೇಗೌಡನ ಕೊಪ್ಪಲು, ಈಶ್ವರ್ ಶಾನುಭೋಗನಹಳ್ಳಿ, ಅರಸು ಕಲ್ಲಳ್ಳಿ ಜಯಣ್ಣ, ಯುವ ಕಾರ್ಯದರ್ಶಿ ರವಿ, ಪ್ರಗತಿಪರ ಸಂಘಟನೆಯ ಅಧ್ಯಕ್ಷರಾದ ರಾಮಕೃಷ್ಣ ಅತ್ತಿ ಕುಪ್ಪೆ, ಚಿಕ್ಕ ಹುಣಸೂರು ರಾಜು, ಶಿವರಾಜು ಮುತ್ತುರಾಯನ ಹೊಸಳ್ಳಿ ಪ್ರಕಾಶ್, ತಾಲೂಕು ರೈತ ಸಂಘದ ಪದಾಧಿಕಾರಿಗಳು, ಅಧ್ಯಕ್ಷರು, ಕಾರ್ಯದರ್ಶಿಗಳು ಹಾಜರಿದ್ದರು.

ಹೆಚ್.ಡಿ.ಕೋಟೆ: ಕಬ್ಬಿಗೆ ಬೆಂಬಲ ಬೆಲೆ ಘೋಷಣೆ ಮಾಡುವಂತೆ ಬೆಳಗಾವಿಯಲ್ಲಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಪಟ್ಟಣದಲ್ಲಿ ರಾಜ್ಯ ರೈತ ಸಂಘ ಪ್ರತಿಭಟನೆ ಮೆರವಣಿಗೆ ನಡೆಸಿ ಒತ್ತಾಯಿಸಿತು.

ಪಟ್ಟಣದ ಹಳೆ ತಾಲೂಕು ಕಚೇರಿ ಆವರಣದಿಂದ ಹೋರಾಟ ಪ್ರತಿಭಟನಾಕಾರರು ಬಾಪೂಜಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಕಬ್ಬಿಗೆ ಟನ್‌ಗೆ 3500 ರೂ ಬೆಲೆ ನಿಗಧಿ ಮಾಡಬೇಕು ಎಂದು ಆಗ್ರಹಿಸಿದರು.

ನಂತರ ಸುಮಾರು ಇಪ್ಪತ್ತು ನಿಮಿಷಗಳ ಕಾಲ ರಸ್ತೆ ತಡೆ ನಡೆಸಿದ ನಂತರ ಮೆರವಣಿಗೆ ಮೂಲಕ ತಾಲೂಕು ಆಡಳಿತ ಸೌಧದ ಆವರಣದಲ್ಲಿ ಸಮಾವೇಶಗೊಂಡು ವಿವಿಧ ಬೇಡಿಕೆ ಈಡೇರಿಸಲು ಒತ್ತಾಯಿಸಿ ಪ್ರತಿಭಟಿಸಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಕಳೆದ ಒಂದು ವಾರದಿಂದ ಬೆಳಗಾವಿಯಲ್ಲಿ ಲಕ್ಷಾಂತರ ರೈತರು ಬೀದಿಗಿಳಿದು ಆಹೋರಾತ್ರಿ ಕಬ್ಬಿಗೆ ಬೆಂಬಲ ಬೆಲೆ ನೀಡುವಂತೆ ಹೋರಟ ಮಾಡುತ್ತಿದ್ದರು ಕೂಡ ಪ್ರತಿಭಟನೆಗೆ ರಾಜ್ಯ ಸರ್ಕಾರ ಆಗಲಿ, ಕೇಂದ್ರ ಸರ್ಕಾರವಾಗಲಿ ಯಾವುದೇ ಪ್ರತಿಕ್ರಿಯೆ ನೀಡದೆ ನಿರ್ಲಕ್ಷ್ಯ ತೋರಿರುವುದು ರೈತ ವಿರೋಧಿ ನೀತಿ ಎಂದರು.

ಪ್ರತಿಭಟನೆ ಬೆಂಬಲಿಸಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ರಸ್ತೆ ತಡೆ ಸೇರಿದಂತೆ ಪ್ರತಿಭಟನೆ ಮಾಡುತ್ತೇವೆ. ನಾನು ಸೇರಿದಂತೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಹಾಗೂ ಪದಾಧಿಕಾರಿಗಳು ಬೆಳಗಾವಿ ಪ್ರತಿಭಟನೆಯಲ್ಲಿ ಭಾಗವಹಿಸುವುದಾಗಿ ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಅಧ್ಯಕ್ಷ ಬಡಗಲಪುರ ನಾಗೇಂದ್ರ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮಹಿಳಾ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್, ಪ್ರಧಾನ ಕಾರ್ಯದರ್ಶಿ ಮರಂಕಯ್ಯ, ಪುಟ್ಟಣ್ಣಯ್ಯ, ಫಳನಿ ಸ್ವಾಮಿ, ಸಿಂಗೇಗೌಡ, ಶಿವಲಿಂಗಪ್ಪ, ಮಹಾಲಿಂಗು, ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಜೆಪಿ ನಾಗರಾಜು, ಭೀಮನಹಳ್ಳಿ ಸೋಮೇಶ್, ಹೈರಿಗೆ ಶಿವರಾಜ್, ಚಾ ನಂಜುಂಡ ಮೂರ್ತಿ, ಬೀರಂಬಳ್ಳಿ ಪ್ರಭಾಕರ್, ರೈತ ಸಂಘ ತಾಲೂಕು ಗೌರವಾಧ್ಯಕ್ಷರು ಜಕ್ಕಳ್ಳಿ ರವಿಕುಮಾರ್, ತಾಲೂಕು ಅಧ್ಯಕ್ಷರು ಮಹದೇವ ನಾಯಕ, ಪ್ರಧಾನ ಕಾರ್ಯದರ್ಶಿ ವಡ್ಡರಗುಡಿ ಬಸವರಾಜು, ಕಾರ್ಯಾಧ್ಯಕ್ಷ ಚಾಮನಹಳ್ಳಿ ಮಹಾದೇವು, ಉಪಾಧ್ಯಕ್ಷರುಗಳಾದ ಗೋವಿಂದೇಗೌಡರು, ವೆಂಕಟೇಗೌಡರು, ಶಿವಣ್ಣ, ಚಿಕ್ಕೇಗೌಡರು, ರಾಜಕುಮಾರ, ಚಿಕ್ಕಬೋರೇಗೌಡ, ಟೈಗರ್ ಬ್ಲಾಕ್ ವಿನೋದ್, ಮಹಿಳಾ ಅಧ್ಯಕ್ಷರು ದೇವಮ್ಮ ಟೌನ್ ಅಧ್ಯಕ್ಷರು, ವಿ.ಪ್ರಸಾದ್, ನಂದೀಶ್, ರವಿ ಸಿಂಡೇನಹಳ್ಳಿ, ಚೆಲುವರಾಜು, ಸಿದ್ದರಾಮೇಗೌಡ, ಯಡತೊರೆ ದೇವರಾಜು, ಶಿವಣ್ಣೆಗೌಡ, ರವಿ ಧರಣೇಂದ್ರ, ಟೀ ಗಾಡಿ ದೇವಣ್ಣ ವಿಲ್ ನಾಗರಾಜು ಇದ್ದರು.

ಮಲ್ಕುಂಡಿ ಬಳಿ ಕಾಡು ಹಂದಿ ದಾಳಿಗೆ ರೈತ ಬಲಿ

ಕುಡಿದು ಬೈಕಿನಿಂದ ಬಿದ್ದು ಸಾವು: ಅರಣ್ಯಾಧಿಕಾರಿ ಪ್ರತಿಕ್ರಿಯೆ



ಮಲ್ಕುಂಡಿ: ಕಾಡು ಹಂದಿಯೊಂದು ದಾಳಿ ನಡೆಸಿದ ಪರಿಣಾಮ ರೈತನೋರ್ವ ಬಲಿಯಾಗಿರುವ ಘಟನೆ ಸಮೀಪದ ಹಾಡ್ಯ ಗ್ರಾಮ ಮಲ್ಕುಂಡಿ ಬಳಿ ನಡೆದಿದೆ.

ಗ್ರಾಮದ ವಾಸಿ ರೈತ ರಂಗಸ್ವಾಮಿ(35) ಹಂದಿ ದಾಳಿಗೆ ಬಲಿಯಾದ ನತದೃಷ್ಟ ರೈತ.

ಹಾಡ್ಯ ಗ್ರಾಮದಿಂದ ಬೈಕಿನಲ್ಲಿ ಹುರ ಗ್ರಾಮಕ್ಕೆ ಹೋಗಿ, ವಾಪಸ್ ಸ್ವಗ್ರಾಮಕ್ಕೆ ಬರುತ್ತಿದ್ದ ಸಂದರ್ಭದಲ್ಲಿ ರಸ್ತೆ ಬದಿಯ ಪೊದೆಯಲ್ಲಿ ಅಡಗಿದ್ದ ಕಾಡುಹಂದಿ ಬೈಕ್‌ನಲ್ಲಿ ಬರುತ್ತಿದ್ದ ರಂಗಸ್ವಾಮಿ ಮೇಲೆ ಏಕಾಏಕಿ ದಾಳಿ ಮಾಡಿದೆ. ಕಿರುಚಾಟದ ಶಬ್ದ ಕೇಳಿ ಅಕ್ಕಪಕ್ಕದ ಸಾರ್ವಜನಿಕರು ಸ್ಥಳಕ್ಕೆ ಆಗಮಿಸಿ ನೋಡಿದಾಗ, ಕಾಡು ಹಂದಿ ತಿವಿದು, ಗಂಭೀರ ಗಾಯಗೊಳಿಸುತ್ತಿದ್ದು, ಸಾರ್ವಜನಿಕರನ್ನು ಕಂಡು ಪರಾರಿಯಾಗಿದೆ. ತಕ್ಷಣ ರಂಗಸ್ವಾಮಿ ಅವರನ್ನು ಮೈಸೂರಿನ ಕೆ.ಆರ್ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಅದರೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಘಟನೆ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ವಿಷಯ ತಿಳಿದು ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಅರಣ್ಯ ಇಲಾಖೆ ವಿಭಾಗದ ಡಿಆರ್‌ಎಫ್‌ಒ ವಿನೋದ್ ಕುಮಾರ್ ಮತ್ತು ಸಿಬ್ಬಂದಿ ಭೇಟಿ ನೀಡಿ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಕುಡಿದು ಬೈಕ್‌ನಿಂದ ಬಿದ್ದು ಸಾವು: ಅರಣ್ಯಾಧಿಕಾರಿ ನಿತಿನ್ ಕುಮಾರ್ ಮಾತನಾಡಿ, ಕಾಡು ಹಂದಿ ಗುದ್ದಿದೆ ಎಂಬುದಕ್ಕೆ ಪುರಾವೆಗಳಿಲ್ಲ, ಆತ ಕುಡಿದು ಬೈಕ್ ಚಲಾಯಿಸುತ್ತಿದ್ದ ವೇಳೆ ಆಯ ತಪ್ಪಿ ಬಿದ್ದು ಸಾವನ್ನಪ್ಪಿದಾನೆ ಎಂದು ತಿಳಿದು ಬಂದಿದೆ. ವೈದ್ಯಕೀಯ ವರದಿಗಳು ಸಹ ಅದನ್ನು ಪುಷ್ಟೀಕರಿಸಿವೆ. ಪೊಲೀಸರ ವರದಿಯ ನಂತರ ನಾವು ಮುಂದಿನ ಕ್ರಮ ಜರುಗಿಸುತ್ತೇವೆ ಎಂದು ಹೇಳಿದರು.

ಚಿದಾನಂದಗೆ ಪಿಎಚ್.ಡಿ ಪದವಿ



ಮೈಸೂರು, ನ.7– ಡಾ. ಮಲ್ಲಿನಾಥ ಕುಂಬಾರ್ ಅವರ ಮಾರ್ಗದರ್ಶನದಲ್ಲಿ ಎಂ.ಚಿದಾನಂದ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಮೈಸೂರು ವಿವಿ ಕುಲಸಚಿವರ ಪ್ರಕಟಣೆ ತಿಳಿಸಿದೆ.

ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಗೆ ಸನ್ಮಾನ



ಟಿ ನರಸೀಪುರ ಪಟ್ಟಣದ ಹೊಸತಿರುಮಕೂಡಲು ವಾಲ್ಮೀಕಿ ವೃತ್ತಕ್ಕೆ ಭೇಟಿ ನೀಡಿದ್ದ ಹರಿಹರ ವಾಲ್ಮೀಕಿ ಮಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ಬೈರಾಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು ಸನ್ಮಾನಿಸಿದರು. ಮಹೇಶ, ನಟರಾಜ್, ಕೃಷ್ಣಣ್ಣ, ನಾಗಣ್ಣ, ನಾಗರಾಜು, ಗುಂಡ, ಸ್ವಾಮಿ, ನವೀನ, ಲೋಕೇಶ್, ರವಿ, ಉಮೇಶ, ಪ್ರಭು, ಬಸವರಾಜ್, ಸಿದ್ದಪ್ಪ ಮಹೇಶ್ ಇದ್ದಾರೆ.

ವಾಯು ಮಾಲಿನ್ಯ ಧೂಮಪಾನಕ್ಕಿಂತ ಅಪಾಯಕಾರಿ

ಸಂಸದರೂ ಆದ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಅಭಿಮತ



'ಸಂಯೋಜನಂ–2025' ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದ ಕೈಪಿಡಿಯನ್ನು ಸಂಸದ ಡಾ.ಸಿ.ಎನ್.ಮಂಜುನಾಥ್ ಬಿಡುಗಡೆಗೊಳಿಸುತ್ತಿರುವುದು

ಮೈಸೂರು, ನ.7(ಎಸ್‌ಪಿಎನ್)– ಪ್ರಸ್ತುತ ಸಂದರ್ಭದಲ್ಲಿ ವಾಯುಮಾಲಿನ್ಯ ಧೂಮಪಾನಕ್ಕಿಂತಲೂ ಹೆಚ್ಚು ಅಪಾಯಕಾರಿ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟರು.

ಮೈಸೂರು ಮುಕ್ತ ವಿವಿ ಆವರಣದಲ್ಲಿ ಕನ್ನಡ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮತ್ತು ಬೆಂಗಳೂರಿನ ಸುಶ್ರುತ ಸೃಷ್ಟಿ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಹಾಗೂ ವಿಶ್ವ ಆಯುರ್ವೇದ ಪರಿಷತ್ ಸಹಯೋಗದೊಂದಿಗೆ ಏರ್ಪಡಿಸಿದ್ದ 'ಸಂಯೋಜನಂ–2025' ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಇದು ಉಸಿರಾಟದ ತೊಂದರೆಗಳು ಮಾತ್ರವಲ್ಲದೆ ಹೃದಯಾಘಾತ, ಹೃದಯ ವೈಫಲ್ಯ, ಮಧುಮೇಹದ ಅಪಾಯವನ್ನು ಸಹ ಹೆಚ್ಚಿಸುತ್ತದೆ. ಪ್ರತಿವರ್ಷ ಅಂದಾಜು 14 ಲಕ್ಷ ಜನರು ಧೂಮಪಾನದಿಂದ ಸಾಯುತ್ತಿದ್ದರೆ, ವಾಯುಮಾಲಿನ್ಯದಿಂದ 22 ಲಕ್ಷ ಜನ ಮೃತಪಡುತ್ತಿದ್ದಾರೆ. ಈ ಬಗ್ಗೆ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವುದು ಅತಿ ಅವಶ್ಯಕ ಎಂದರು.

ಪ್ರತಿಯೊಂದು ವೈದ್ಯಕೀಯ ಪದ್ಧತಿ ಪರಸ್ಪರ ಪೂರಕವಾಗಿರಬೇಕಿತ್ತು. ಎಲ್ಲಾ ವೈದ್ಯಕೀಯ ಪದ್ಧತಿಯನ್ನು ವೈಜ್ಞಾನಿಕ ರೀತಿಯಲ್ಲಿ ಅನುಸರಿಸಿದರೆ ಅದಕ್ಕೆ ವಿಶೇಷ ಬಲವಿರಲಿದೆ. ಪ್ರಸ್ತುತ ಭಾರತದಲ್ಲಿ ಮೆಟಾಬಾಲಿಕ್ ಮತ್ತು ಜೀವನಶೈಲಿ ಸಂಬಂಧಿತ ರೋಗಗಳ ಮಹಾಮಾರಿ ಎದುರಾಗುತ್ತಿದೆ. ಅನೈರ್ಮಲ್ಯ, ಭೂಮಾಲಿನ್ಯ ಮತ್ತು ಕೈಗಾರಿಕಾ ತ್ಯಾಜ್ಯಗಳಿಂದ ಆಹಾರ ಮತ್ತು ನೀರಿನ ಮೂಲಕ ಸೂಕ್ಷ್ಮ ಪ್ರಮಾಣದ ವಿಷವನ್ನು ಸೇವಿಸುತ್ತಿದ್ದೇವೆ. ಅಲ್ಲದೆ, ಜಾಗತಿಕ ಆರೋಗ್ಯ ಪ್ರವಾಸೋದ್ಯಮದಲ್ಲಿ ಭಾರತ ಮುಂಚೂಣಿಯಲ್ಲಿದ್ದು, ಆಯುಷ್ ಪದ್ಧತಿಗಳು ಅಲೋಪಥಿಗಿಂತಲೂ ಹೆಚ್ಚಾಗಿ ವಿದೇಶಿಗರನ್ನು ಆಕರ್ಷಿಸುತ್ತಿರುವುದು ಸಂತೋಷದ ಸಂಗತಿ ಎಂದು ಹೇಳಿದರು.

ಯುವಕರಲ್ಲಿ ಹೃದಯಾಘಾತ: ಇತ್ತೀಚೆಗೆ ಯುವಕರಲ್ಲಿ ಹೃದಯಾಘಾತದ ಪ್ರಮಾಣ ಏರಿಕೆ ಆಗಿರುವುದು ಆತಂಕಕಾರಿಯಾಗಿದೆ. ಸಾವಿನ ಪ್ರಮಾಣದ ಶೇ.30ಕ್ಕೆ ಹೃದಯಾಘಾತ ಮತ್ತು ಬ್ರೈನ್ ಸ್ಟ್ರೋಕ್ ಸಮಸ್ಯೆ ಕಾರಣವಾಗಿದೆ. ಅದರಲ್ಲೂ 40 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನವರಲ್ಲೇ ಹೃದಯಾಘಾತಗಳು ಸಂಭವಿಸುತ್ತಿವೆ. ಇದಕ್ಕೆಲ್ಲಾ ನಮ್ಮ ಆಹಾರ ಪದ್ಧತಿಗಳು ಮತ್ತು ಶಾರೀರಿಕ ನಿಷ್ಕ್ರಿಯತೆ ಕಾರಣವಾಗಿದೆ. ನಾಲ್ಕು–ಐದು ಗಂಟೆಗಳ ಕಾಲ ಒಂದೇ ಸ್ಥಳದಲ್ಲಿ ಕುಳಿತು ಕೊಳ್ಳುವುದು ಐದು ಸಿಗರೇಟ್ ಸೇವನೆಗೆ ಸಮ ಎಂದ ಸಂಸದರು, ಯಾವುದೇ ರೋಗವಿಲ್ಲದೆ 80 ವರ್ಷ ಬದುಕುವುದು ನಮ್ಮ ಗುರಿಯಾಗಬೇಕು ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹೈಕೋರ್ಟ್ ಮಾಜಿ ನ್ಯಾಯಮೂರ್ತಿ ಬಿ.ಎ. ಪಾಟೀಲ, ಎಸ್–ವ್ಯಾಸಾ ವಿವಿ ಉಪ ಕುಲಪತಿ ಡಾ. ಎನ್.ಕೆ. ಮಂಜುನಾಥ ಶರ್ಮ, ಜಿಎಸ್‌ಎಸ್ ಯೋಗ ಸಂಸ್ಥೆ ಸಂಸ್ಥಾಪಕ ಶ್ರೀಹರಿ ದ್ವಾರಕನಾಥ್, ಎಸ್–ವ್ಯಾಸಾ ಸೊಸೈಟಿ ಅಧ್ಯಕ್ಷ ಡಾ.ಎಚ್.ಆರ್. ನಾಗೇಂದ್ರ, ವಿಶ್ವ ಆಯುರ್ವೇದ ಪರಿಷತ್ ಅಧ್ಯಕ್ಷ ಡಾ. ಬಿ.ಆರ್. ರಾಮಕೃಷ್ಣ, ಮುಕ್ತ ವಿವಿ ಕುಲಪತಿ ಶರಣಪ್ಪ ಹಲಸೆ, ವಿಎಪಿ ರಾಷ್ಟ್ರೀಯ ಕಾರ್ಯಕಾರಿ ಸದಸ್ಯ ಡಾ. ಯೋಗೇಶ್ ಚಂದ್ರಮಿಶ್ರ ಇದ್ದರು.

ಕಂದಾಯ ಸಚಿವರಿಗೆ ರೈತ ಮುಖಂಡರ ಮನವಿ



ಮೈಸೂರು, ನ.7– ಮಾನವ–ವನ್ಯಜೀವಿ ಸಂಘರ್ಷದಿಂದ ಕಂಗಾಲಾಗಿರುವ ರೈತರನ್ನು ಕಂದಾಯ ಸಚಿವರು ಭೇಟಿ ಮಾಡಿ, ನೆರವಾಗಬೇಕು ಎಂದು ರೈತ ಮುಖಂಡರು ಆಗ್ರಹಿಸಿದರು.

ಪ್ರಗತಿ ಪರಿಶೀಲನಾ ಸಭೆಗೆ ಆಗಮಿಸಿದ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರಿಗೆ ರೈತ ಮುಖಂಡರು ಮನವಿ ನೀಡಿದರು. ಮನವಿ ಸ್ವೀಕರಿಸಿದ ಸಚಿವರು, ಮಾಧ್ಯಮಗಳೊಂದಿಗೆ ಮಾತನಾಡಿ ಸಭಾಂಗಣಕ್ಕೆ ತೆರಳಿದರು. ಆದರೆ ಮನವಿ ಸ್ವೀಕರಿಸಿದ ಸಚಿವರು ಸರಿಯಾದ ರೀತಿಯಲ್ಲಿ ಸ್ಪಂದಿಸಲಿಲ್ಲ ಎಂದು ರೈತ ಮುಖಂಡರು, ಸಭೆ ಮುಗಿಯುವವರೆಗೂ ಹೊರಗೆ ಕಾದು ಕೆಲ ಕಾಲ ಪ್ರತಿಭಟಿಸಿದರು. ಸಚಿವರು ಸಭೆ ಮುಗಿಸಿ ಹೊರಬಂದಾಗ ಮತ್ತೆ ಮನವಿ ನೀಡಿ, ಸೂಕ್ತ ಕ್ರಮಕ್ಕೆ ಒತ್ತಾಯಿಸಿದರು.

ಈ ವೇಳೆ ರೈತ ಮುಖಂಡ ಸತೀಶ್, ಕಾಡಂಚಿನ ಪ್ರದೇಶದ ಜನರು ವ್ಯವಸಾಯ ಮಾಡದ ಪರಿಸ್ಥಿತಿ ನಿರ್ಮಾಣ ಆಗಿದೆ. ಹುಲಿ ದಾಳಿಯಿಂದ ರೈತರನ್ನು ರಕ್ಷಣೆ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ಜನಸಾಮಾನ್ಯರ ಸಮಸ್ಯೆ ಗಳನ್ನು ಪರಿಹರಿಸಲು ಸರ್ಕಾರ ಮುಂದಾಗಬೇಕು. ಕಂದಾಯ ಸಚಿವರಾದ ತಾವು ರೈತರನ್ನು ಭೇಟಿಯಾಗಿ ಸಮಸ್ಯೆಗಳನ್ನು ಆಲಿಸಿ, ನೆರವಾಗಬೇಕು ಎಂದು ಮನವಿ ಮಾಡಿದರು.

ಇಲವಾಲ ಬಳಿ ಮತ್ತೆ ಎರಡು ಹುಲಿ ಪ್ರತ್ಯಕ್ಷ; ಸೆರೆಗೆ ಕಾರ್ಯಾಚರಣೆ

ಮೈಸೂರು,ನ.7(ಎಂಟಿವೈ)– ಮೈಸೂರು ಹೊರವಲಯದ ಇಲವಾಲದ ಬಳಿ ಶುಕ್ರವಾರ ಸಂಜೆ ಎರಡು ಹುಲಿಗಳು ಕಾಣಿಸಿಕೊಂಡಿದ್ದಾಗಿ ಸಾರ್ವಜನಿಕರಿಂದ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಅರಣ್ಯಾಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿ, ಕೂಂಬಿಂಗ್ ನಡೆಸಿದ್ದಾರೆ.

ಸರಗೂರು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಹುಲಿ ದಾಳಿ ಪ್ರಕರಣದಿಂದ ಎಚ್ಚೆತ್ತುಕೊಂಡ ಹುಣಸೂರು ವಿಭಾಗದ ಅಧಿಕಾರಿಗಳು ಮೈಸೂರಿನ ಹೊರ ವಲಯದ ಆರ್‌ಎಂಪಿ ಆವರಣ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಮೂರು ಮರಿಗಳೊಂದಿಗೆ ಓಡಾಡುತ್ತಿರುವ ತಾಯಿ ಹುಲಿ ಸೆರೆಗೂ ನಾಲ್ಕು ಸಾಕಾನೆಗಳೊಂದಿಗೆ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿರುವ ವೇಳೆಯೆ ಜನರಿಗೆ ಹುಲಿ ಕಾಣಿಸಿಕೊಂಡಿರುವುದು ಆತಂಕ ಹೆಚ್ಚಿಸಿದೆ.

ಕಳೆದ ಎರಡು ತಿಂಗಳ ಹಿಂದೆ ಮೈಸೂರು ತಾಲೂಕಿನ ಇಲವಾಲ ಸಮೀಪದ ಅಲೋಕ ರಸ್ತೆಯಲ್ಲಿ ಅರಣ್ಯ ಪ್ರದೇಶದಲ್ಲಿ ದಾರಿ ಹೋಕರಿಗೆ ಕಾಣಿಸಿಕೊಂಡಿದ್ದ ಹುಲಿ ಸ್ಥಳೀಯರಲ್ಲಿ ಆತಂಕ ಉಂಟು ಮಾಡಿತ್ತು. ಕೂಂಬಿಂಗ್ ಕಾರ್ಯಾಚರಣೆ ಮಾಡಿ, ಸ್ಥಳೀಯ ಗ್ರಾಮಸ್ಥರಲ್ಲಿ ಹುಲಿ ಇರುವಿಕೆ ಕುರಿತಂತೆ ಜಾಗೃತಿ ಮೂಡಿಸಿ ಎಚ್ಚರಿಸಿದ್ದರು. ಒಂದು ವಾರದ ಬಳಿಕ ಆರ್‌ಎಂಪಿ ಆವರಣದಲ್ಲಿ ಹುಲಿ ಇರುವುದು ಖಚಿತವಾಗಿತ್ತು.

ಇದೀಗ ಸರಗೂರು ತಾಲೂಕಿನ ಬಡಗಲಪುರ, ಬೆಣ್ಣೆಗೆರೆ ಹಾಗೂ ಕೂಡಗಿ–ಕುರ್ಣೆಗಾಲದಲ್ಲಿ ಮರಿಯೊಂದಿಗೆ ಇರುವ ತಾಯಿ ಹುಲಿ ಹೊಲದಲ್ಲಿ ಜಾನುವಾರು ಮೇಯಿಸುತ್ತಿದ್ದ ರೈತರ ಮೇಲೆ ದಾಳಿ ನಡೆಸಿದ ಪರಿಣಾಮ ಇಬ್ಬರು ಮೃತಪಟ್ಟು, ಓರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆಯಿಂದ ಎಚ್ಚೆತ್ತುಕೊಂಡ ಹುಣಸೂರು ವಿಭಾಗದ ಅಧಿಕಾರಿಗಳು ಮರಿಯೊಂದಿಗೆ ಇರುವ ತಾಯಿ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭಿಸಿದ್ದಾರೆ.

ಹುಣಸೂರು ತಾಲೂಕು ವ್ಯಾಪ್ತಿಯ ಚಿಕ್ಕಾಡನಹಳ್ಳಿ, ರಟ್ನಹಳ್ಳಿ, ಕಾಮನಕೊಪ್ಪಲು ಭಾಗದಲ್ಲಿ ಹುಲಿ ಸಂಚಾರದ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿರುವುದರಿಂದ ಸಾಕಾನೆಗಳಾದ ಸುಗ್ರೀವ, ಪ್ರಶಾಂತ, ಅಜೇಯ ಹಾಗೂ ಈಶ್ವರ ಆನೆಯೊಂದಿಗೆ 50ಕ್ಕೂ ಹೆಚ್ಚು ಮಂದಿ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭಿಸಿದ್ದಾರೆ. ಆ ಹುಲಿಗೆ 8–10 ತಿಂಗಳ ಮೂರು ಮರಿಗಳಿರುವುದು ದೃಢಪಟ್ಟಿದ್ದು, ಪಾಳುಬಿದ್ದ ಹೊಲದಲ್ಲಿ ಆಶ್ರಯ ಪಡೆದಿರುವಾಗ ಆಕಸ್ಮಿಕವಾಗಿ ಜನ ಹೋದರೆ ದಾಳಿ ಸಂಭವವಿದೆ. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರಲ್ಲಿ ಜಾಗೃತಿಯಿಂದ ಇರುವಂತೆ ಸಲಹೆ ನೀಡಿ ಕಾರ್ಯಾಚರಣೆ ಆರಂಭಿಸಲಾಗಿದೆ.

ಕಬ್ಬು ದರ ಹೆಚ್ಚಳ ಪ್ರಸ್ತಾಪ; ಪ್ರಧಾನಿ ಮೋದಿಯನ್ನು ಅನಗತ್ಯವಾಗಿ ಇಕ್ಕಟ್ಟಿಗೆ ಸಿಲುಕಿಸುವ ತಂತ್ರ

ಮೈಸೂರಿನಲ್ಲಿ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ

- ಕಬ್ಬು ದರ ಏರಿಕೆ ಮಾಡಿ ರಾಜ್ಯ ಸರ್ಕಾರ ಆದೇಶಿಸಬಹುದು
- ಸೀನಿಯರ್ ಲೀಡರ್ ಸಿದ್ದರಾಮಯ್ಯಗೆ ಇದು ಗೊತ್ತಿಲ್ಲವೆ
- ನಮ್ಮ ಪಕ್ಷದಲ್ಲಿ ಯಾರೂ ಸಕ್ಕರೆ ಕಾರ್ಖಾನೆ ಮಾಲೀಕರಿಲ್ಲ



ಮೈಸೂರು, ನ.7(ಬಿಎಲ್‌ಯು)– ಕಬ್ಬು ದರ ಹೆಚ್ಚಳ ಮಾಡುವ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಇಕ್ಕಟ್ಟಿಗೆ ಸಿಲುಕಿಸುವ ತಂತ್ರ ರೂಪಿಸಿದ್ದಾರೆ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ದಿಶಾ ಸಭೆಯಲ್ಲಿ ಪಾಲ್ಗೊಳ್ಳುವ ಮುನ್ನ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಧಾನಿಯನ್ನು ಇಕ್ಕಟ್ಟಿಗೆ ಸಿಲುಕಿಸುವ ಹುನ್ನಾರದಿಂದ ಪತ್ರ ಬರೆಯುತ್ತಿದ್ದಾರೆ ಎಂದು ದೂರಿದರು.

ಕೇಂದ್ರ ಸರ್ಕಾರ ಈಗಾಗಲೇ ಎಫ್‌ಆರ್‌ಪಿ ದರ ನಿಗದಿ ಮಾಡಿದೆ. ಆ ಬೆಲೆಯನ್ನು ನೀಡುವಂತೆ ಸರ್ಕಾರ ಸಕ್ಕರೆ ಕಾರ್ಖಾನೆಗಳಿಗೆ ಹೇಳಬಹುದಲ್ಲವೆ ಎಂದು ಕುಮಾರ ಸ್ವಾಮಿ ಸಲಹೆ ನೀಡಿದರು.

ರೈತರು ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಸಿದ್ದರಾಮಯ್ಯ ಸಭೆ ನಡೆಸಿದ್ದರೆ ಪ್ರಾಯಶಃ ಇಂತಹ ಪರಿಸ್ಥಿತಿ ಎದುರಾಗುತ್ತಿರಲಿಲ್ಲ. ಆದರೆ ಯಾವ ಪುರುಷಾರ್ಥಕ್ಕೆ ಸರ್ಕಾರ ನಡೆಸುತ್ತಿದ್ದಾರೊ ತಿಳಿಯದು ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಸೀನಿಯರ್ ಲೀಡರ್, ಡಿಸಿಎಂ ಆಗಿದ್ದವರು, ಹೆಚ್ಚು ಬಜೆಟ್ ಮಂಡಿಸಿರುವ ಖ್ಯಾತಿಯೂ ಇದೆ. ಆದರೆ ಕಬ್ಬಿನ ದರ ನಿಗದಿ ಸಂಬಂಧ ಏನು ತೀರ್ಮಾನ ಮಾಡಬೇಕೆಂದು ಗೊತ್ತಿಲ್ಲವೇ ಎಂದು ಪ್ರಶ್ನಿಸಿದರು.

ನವೆಂಬರ್‌ನಲ್ಲಿ ಕ್ರಾಂತಿಯೂ ಆಗಲ್ಲ, ವಾಂತಿಯೂ ಆಗಲ್ಲ

ಸಿದ್ದರಾಮಯ್ಯನವರ ಗುಣ ನಮಗೆ ಎಲ್ಲರಿಗಿಂತ ಹೆಚ್ಚು ಗೊತ್ತಿದೆ. ಹಾಗಾಗಿ ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ ಆಗಲ್ಲ, ವಾಂತಿಯೂ ಆಗಲ್ಲ ಎಂದು ಕುಮಾರಸ್ವಾಮಿ ಹೇಳಿದರು. ನಮ್ಮ ಪಕ್ಷದಲ್ಲಿ ಇರುವಾಗಲೇ ಅವರ ಗುಣ ಚೆನ್ನಾಗಿ ತಿಳಿದುಕೊಂಡಿದ್ದೇವೆ. ಹೀಗಾಗಿ ಯಾವ ಬದಲಾವಣೆಯೂ ಆಗುವುದಿಲ್ಲ. ಡಿ.ಕೆ.ಶಿವಕುಮಾರ್ ಯಾವಾಗಲೂ ದೇವರ ಜೊತೆ ಮಾತನಾಡುತ್ತೇವೆ ಎನ್ನುತ್ತಾರೆ. ಆದರೆ ಅವರ ದೇವರು ಅವರಿಗೆ ಏನೇನು ಹೇಳಿದೆಯೋ ನಮಗೇನು ಗೊತ್ತು ಎಂದು ಪ್ರಶ್ನಿಸಿದರು.

2028ಕ್ಕೆ ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಆದರೆ ಅಲ್ಲಿ ತನಕ ಏನೇನಾಗುತ್ತೊ ಯಾರಿಗೆ ಗೊತ್ತು ಎಂದು ಕುಮಾರಸ್ವಾಮಿ ಹೇಳಿದರು.

ಕಬ್ಬು ದರ ನಿಗದಿ ಸಂಬಂಧ ವಿರೋಧ ಪಕ್ಷದ ನಾಯಕರ ಸಭೆ ಕರೆದಿದ್ದಾರಂತೆ. ಆದರೆ ಇದನ್ನು ವಿರೋಧ ಪಕ್ಷಗಳು ಮಾಡುವ ತೀರ್ಮಾನವಲ್ಲ. ಸರ್ಕಾರವೇ ಈ ಬಗ್ಗೆ ನಿರ್ಧಾರ ಕೈಗೊಳ್ಳಲಿ. ಅದು ಬಿಟ್ಟು ಸಣ್ಣ ವಿಷಯವನ್ನು ದೊಡ್ಡದು ಮಾಡಿ ಪ್ರಧಾನಿಗೆ ಪತ್ರ ಬರೆದಿದ್ದಾರೆ ಎಂದು ಟೀಕಿಸಿದರು.

ಬಿಜೆಪಿ ಮತ್ತು ಕಾಂಗ್ರೆಸ್ ಜೊತೆಗಿನ ಸಮ್ಮಿಶ್ರ ಸರ್ಕಾರದಲ್ಲಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದೆ. ಕೇಂದ್ರ ಸರ್ಕಾರವನ್ನು ಮಧ್ಯಸ್ಥಿಕೆಗೆ ತರದೆ ಅಂದು ನಾನೇ ಸಮಸ್ಯೆ ಪರಿಹಾರ ಮಾಡಿದ್ದೆ. ಆದರೆ ಈಗ ತಾವು ಮಾಡಬೇಕಾದ ಕೆಲಸವನ್ನು ಪ್ರಧಾನಮಂತ್ರಿಗಳು ಮಾಡಬೇಕೆಂದು ಸಬೂಬು ಹೇಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.


ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ನಾಯಕರ ಹೆಸರಲ್ಲಿ ಸಕ್ಕರೆ ಕಾರ್ಖಾನೆ ಇದೆ ಎಂದು ಹೇಳುತ್ತಿದ್ದಾರೆ. ಆದರೆ ನಮ್ಮ ಪಕ್ಷದಲ್ಲಿ ಬಂಡೆಪ್ಪ ಕಾಶಂಪೂರ್ ಅವರದು ಸಕ್ಕರೆ ಕಾರ್ಖಾನೆ ಇತ್ತು. ಆದರೆ ಅದನ್ನು ಮಾರಾಟ ಮಾಡಿದ್ದಾರೆ. ಹಾಗಾಗಿ ನಮ್ಮ ಪಕ್ಷದಲ್ಲಿ ಯಾರೂ ಸಕ್ಕರೆ ಕಾರ್ಖಾನೆ ಹೊಂದಿಲ್ಲ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಗ್ರೇಟರ್ ಮಾಡಲು ಪೈಪೋಟಿ

ಬೆಂಗಳೂರು ಹಾಗೂ ಮೈಸೂರನ್ನು ಗ್ರೇಟರ್ ಮಾಡಲು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಪೈಪೋಟಿಗಿಳಿದಿದ್ದಾರೆ ಎಂದು ಕುಮಾರಸ್ವಾಮಿ ಗೇಲಿ ಮಾಡಿದರು.

ಡಿ.ಕೆ.ಶಿವಕುಮಾರ್ ಗ್ರೇಟರ್ ಬೆಂಗಳೂರು ಘೋಷಣೆ ಮಾಡಿದರು. ಅವರೊಂದಿಗೆ ಪೈಪೋಟಿಗಿಳಿದು ಸಿದ್ದರಾಮಯ್ಯ ಗ್ರೇಟರ್ ಮೈಸೂರು ಮಾಡುತ್ತಿದ್ದಾರೆ ಎಂದರು.

ನಾಳೆ ಮೈಸೂರಿಗೆ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಭೇಟಿ



ಮೈಸೂರು, ನ. 7 (ಆರ್‌ಕೆ)– ಭಾರತದ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಅಧಿಕಾರ ವಹಿಸಿಕೊಂಡ ನಂತರ ಇದೇ ಮೊದಲ ಬಾರಿಗೆ ನ. 9 (ಭಾನುವಾರ)ರಂದು ಮೈಸೂರಿಗೆ ಆಗಮಿಸಲಿದ್ದಾರೆ.

ಅಂದು ಬೆಳಿಗ್ಗೆ ವಿಶೇಷ ಹೆಲಿಕಾಪ್ಟರ್‌ನಲ್ಲಿ ಹಾಸನ ಜಿಲ್ಲೆ, ಶ್ರವಣಬೆಳಗೊಳಕ್ಕೆ ಭೇಟಿ ನೀಡಿದ ಬಳಿಕ ಉಪ ರಾಷ್ಟ್ರಪತಿಗಳು ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕು ಮೇಲುಕೋಟೆಗೆ ತೆರಳಲಿದ್ದಾರೆ. ಅಲ್ಲಿಂದ ರಸ್ತೆ ಮೂಲಕ ಮಧ್ಯಾಹ್ನ ಸುಮಾರು 12.15 ಗಂಟೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಅವರು ಮಧ್ಯಾಹ್ನ 12.30 ಗಂಟೆಗೆ ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (JSS Academy of Higher Education and Research) ಯ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳುವರು.

ಮಧ್ಯಾಹ್ನ 2.45 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಭೇಟಿ ನೀಡಲಿರುವ ಸಿ.ಪಿ. ರಾಧಾಕೃಷ್ಣನ್ ಅವರು, 3.30 ಗಂಟೆಗೆ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆಯಲಿದ್ದಾರೆ. ನಂತರ ಮಂಡಕಳ್ಳಿ ವಿಮಾನ ನಿಲ್ದಾಣದಿಂದ, ವಿಶೇಷ ಹೆಲಿಕಾಪ್ಟರ್‌ನಲ್ಲಿ ಸಂಜೆ 4.40 ಗಂಟೆಗೆ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಉಪ ರಾಷ್ಟ್ರಪತಿಗಳ ಪ್ರವಾಸ ಕಾರ್ಯಕ್ರಮದ ಪಟ್ಟಿಯಲ್ಲಿ ತಿಳಿಸಲಾಗಿದೆ.

ಕುರ್ಚಿ ಕಚ್ಚಾಟ ಬಿಟ್ಟು ಅಭಿವೃದ್ಧಿ ಕಡೆಗೆ ಗಮನ ಹರಿಸಿ

ಮೈಸೂರು ಅಗ್ರಹಾರ ವೃತ್ತದಲ್ಲಿ ಮೈಸೂರು ಕನ್ನಡ ವೇದಿಕೆ ಪ್ರತಿಭಟನೆ



ಮೈಸೂರಿನ ಅಗ್ರಹಾರ ವೃತ್ತದಲ್ಲಿ ರಾಜ್ಯದ ಅಭಿವೃದ್ಧಿ ಕಡೆಗೆ ಗಮನಹರಿಸುವಂತೆ ಒತ್ತಾಯಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ನ.7(ಜಿಎ)– ಮುಖ್ಯಮಂತ್ರಿ ಕುರ್ಚಿ ಕಚ್ಚಾಟ ಬಿಟ್ಟು ರಾಜ್ಯದ ಅಭಿವೃದ್ಧಿ ಕಡೆಗೆ ಗಮನಹರಿಸಿ ಎಂದು ಒತ್ತಾಯಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಅಗ್ರಹಾರ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಪೂರೈಸಿದೆ. ಅಂದಿನಿಂದ ಇಂದಿನವರೆಗೂ ಮುಖ್ಯಮಂತ್ರಿ ಸ್ಥಾನಕ್ಕೆ ಕಿತ್ತಾಟ, ಖಾತೆಗಳಿಗೆ ರಂಪಾಟ, ನಿಗಮ ಮಂಡಳಿಗಳಿಗೆ ಪೈಪೋಟಿ ನಡೆಯುತ್ತಿದೆಯೇ ಹೊರತು ರಾಜ್ಯದ ಅಭಿವೃದ್ಧಿ ಬಗ್ಗೆ ಗಮನ ಹರಿಸದಿರುವುದು ದುರ್ದೈವದ ಸಂಗತಿ. ಯಾವುದೇ ರಾಜಕೀಯ ಪಕ್ಷವನ್ನು ಅಧಿಕಾರಕ್ಕೆ ತರುವವರು ರಾಜ್ಯದ ಜನರೇ ಹೊರತು ಹೈಕಮಾಂಡ್ ಅಲ್ಲ. ಪ್ರಜ್ಞಾವಂತ ಮತದಾರ ಕೊಟ್ಟ ತೀರ್ಪನ್ನು ಬದಿಗೊತ್ತಿ ಹೈಕಮಾಂಡ್ ಇಚ್ಛೆಯಂತೆ ಕುಣಿಯುತ್ತಿರುವುದು, ಅಧಿಕಾರ ಲಾಭಕ್ಕಾಗಿ ಪದೇ ಪದೇ ಹೈಕಮಾಂಡ್ ಭೇಟಿಗೆ ದೆಹಲಿಗೆ ಹೋಗುವುದು ಎಷ್ಟು ಮಟ್ಟಿಗೆ ಸರಿ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ರಾಜ್ಯದ ಜ್ವಲಂತ ಸಮಸ್ಯೆಗಳಾದ ನಿರುದ್ಯೋಗ, ಖಾಸಗಿ ಕಂಪನಿಗಳು ಹೊರ ರಾಜ್ಯಕ್ಕೆ ಹೋಗುತ್ತಿರುವುದು, ಇಲಾಖೆಗಳಲ್ಲಿನ ವ್ಯಾಪಕ ಭ್ರಷ್ಟಾಚಾರ, ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದು, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯದಿರುವುದು, ಮಾನವ ಹಾಗೂ ಪ್ರಾಣಿಗಳ ಸಂಘರ್ಷ ಕುರಿತು ಗಮನಹರಿಸುತ್ತಿಲ್ಲ. ಬದಲಿಗೆ ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವನದ ಸುರಂಗದ ಹೆಸರಿನಲ್ಲಿ ಲೂಟಿ ಹೊಡೆಯಲು ಹೊರಟ್ಟಿದ್ದಾರೆ. ಇನ್ನಾದರೂ ಸರ್ಕಾರ ಎಚ್ಚೆತ್ತು ಸ್ವಾರ್ಥ ರಾಜಕಾರಣ ಬಿಟ್ಟು, ಅಧಿಕಾರದ ವ್ಯಾಮೋಹ, ಕುರ್ಚಿಗಾಗಿ ಕಚ್ಚಾಟ ನಿಲ್ಲಿಸಿ ರಾಜ್ಯದ ಅಭಿವೃದ್ಧಿ ಕಡೆಗೆ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾ ಬೀದಿ ರವಿ, ಗುರುಬಸಪ್ಪ, ಬೋಗಾದಿ ಸಿದ್ದೇಗೌಡ, ಗೋಪಿ, ಸಿದ್ದಪ್ಪ ಎಲ್‌ಐಸಿ, ಪ್ಯಾಲೇಸ್ ಬಾಬು, ಗೋವಿಂದರಾಜು, ಸುನೀಲ್, ಸ್ವಾಮಿ, ಹರೀಶ್, ಚಿನ್ನಪ್ಪ, ಮಹದೇವಸ್ವಾಮಿ, ಶಿವುಗೌಡ, ಮೋದಿ, ಸ್ವಾಮಿ ಗೈಡ್, ಚೆಲುವರಾಯಸ್ವಾಮಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕನ್ನಡ ಚಿತ್ರರಂಗಕ್ಕೆ ಒಳ್ಳೆಯ ಕತೆಗಾರರ ಅಗತ್ಯವಿದೆ: ಜೋ ಸೈಮನ್



'ಪ್ರಾಯೋಗಿಕ ಚಿತ್ರಕಥಾ ರಚನಾ ತರಬೇತಿ ಕಾರ್ಯಾಗಾರ'ವನ್ನು ಚಲನಚಿತ್ರ ನಿರ್ದೇಶಕ ಎಸ್.ಎಂ.ಜೋ ಸೈಮನ್ ಉದ್ಘಾಟಿಸಿದರು.

ಮೈಸೂರು, ನ.7(ಎಂಕೆ)– ಕನ್ನಡ ಚಿತ್ರರಂಗಕ್ಕೆ ಪರಿಣಾಮಕಾರಿ ಬರಹಗಾರರ ಅಗತ್ಯವಿದೆ ಎಂದು ಚಲನಚಿತ್ರ ನಿರ್ದೇಶಕ ಎಸ್.ಎಂ.ಜೋ ಸೈಮನ್ ತಿಳಿಸಿದರು.

ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇನ್‌ಸ್ಟೈಟೆಬಲ್ ಫಿಲ್ಮ್ ಹೌಸ್ ಸಹಯೋಗದೊಂದಿಗೆ ಆಯೋಜಿಸಿದ್ದ 'ಪ್ರಾಯೋಗಿಕ ಚಿತ್ರಕಥಾ ರಚನಾ ತರಬೇತಿ ಕಾರ್ಯಾಗಾರ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಿನಿಮಾ ವಸ್ತು ವಿಷಯದಲ್ಲಿ ಪರಿಪೂರ್ಣತೆ ಇಲ್ಲದಿದ್ದರೆ ಕೋಟಿಗಟ್ಟಲೇ ಹಣ ಸುರಿದರೂ ಸಿನೆಮಾ ಗೆಲ್ಲುವುದಿಲ್ಲ. ಈ ನಿಟ್ಟಿನಲ್ಲಿ ಚಿತ್ರರಂಗಗಕ್ಕೆ ಒಳ್ಳೆಯ ಕತೆಗಾರರ ಅಗತ್ಯವಿದೆ ಎಂದರು.

ಬರವಣಿಗೆಗಾಗಿ ನಾವು ಆಯ್ಕೆ ಮಾಡಿಕೊಳ್ಳುವ ವಸ್ತು ಸಿನಿಮಾ ಬೆಳೆಯಲು ಸಹಕರಿಸುತ್ತದೆ. ಒಂದು ವಸ್ತುವಿನಿಂದ ಪ್ರಾರಂಭಗೊಂಡು ಪರಿಪೂರ್ಣತೆಯನ್ನು ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಕಥೆ ಎನ್ನುತ್ತಾರೆ. ಹೀಗಾಗಿ ಕಥೆಗೆ ಚಲನೆಯಿದೆ ಎಂಬ ಮಾತನ್ನು ಒಪ್ಪಿಕೊಳ್ಳಬೇಕು ಎಂದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಮಾತನಾಡಿ, ಯುವ ಸಮೂಹಕ್ಕೆ ಬಹಳಷ್ಟು ಉದ್ಯೋಗ ಅವಕಾಶಗಳಿದ್ದು, ಅವರಿಗೆ ಅಗತ್ಯವಿರುವ ತರಬೇತಿ ನೀಡಬೇಕಷ್ಟೆ. ಸಿನೆಮಾ ಕ್ಷೇತ್ರದಲ್ಲಿಯೂ ವಿಶೇಷ ಸಾಧನೆ ಮಾಡುವ ಚಾಕಚಕ್ಯತೆ ನಮ್ಮ ವಿದ್ಯಾರ್ಥಿಗಳಲ್ಲಿದೆ. ಈ ನಿಟ್ಟಿನಲ್ಲಿ ಹೇಗೆ ಪದಗಳನ್ನು ಚಿತ್ರಕಥೆಯಾಗಿ ಪರಿವರ್ತಿಸಬಹುದು ಎಂಬುದನ್ನು ಕಲಿಯಬೇಕಿದೆ ಎಂದು ಹೇಳಿದರು. ಬರಹಗಾರ ವೈ.ಓ.ರುದ್ರೇಶ್, ಕಾರ್ಯನಿರ್ವಾಹಕ ನಿರ್ದೇಶಕ ಎಸ್.ಮಹೇಶ್ ಮತ್ತಿತರರಿದ್ದರು.

ಬೈಕ್‌ರ್‍ಯಾಲಿ ಮೂಲಕ ಕ್ಯಾನ್ಸರ್ ಜಾಗೃತಿ



ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನದ ಅಂಗವಾಗಿ ಬೈಕ್ ರ್‍ಯಾಲಿ ನಡೆಸಲಾಯಿತು.

ಮೈಸೂರು, ನ.7(ಎಂಕೆ)– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜೆಎಸ್‌ಎಸ್ ಆಸ್ಪತ್ರೆ ಹಾಗೂ ಜೆಎಸ್‌ಎಸ್ ಮೆಡಿಕಲ್ ಕಾಲೇಜು ವತಿಯಿಂದ ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನದ ಅಂಗವಾಗಿ ಬೈಕ್ ರ್‍ಯಾಲಿ ಮೂಲಕ 'ಕ್ಯಾನ್ಸರ್ ಬರುವ ಮುಂಚೆಯೇ ತಡೆಗಟ್ಟಿ' ಎಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು.

ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿ ಜಮಾವಣೆಗೊಂಡ 50ಕ್ಕೂ ಹೆಚ್ಚು ಮಂದಿ ವೈದ್ಯಕೀಯ ವಿದ್ಯಾರ್ಥಿಗಳು, ಕ್ಯಾನ್ಸರ್ ಕುರಿತು ಜಾಗೃತಿ ಸಂದೇಶಗಳುಳ್ಳ ಭಿತ್ತಿ ಫಲಕಗಳನ್ನು ಹಿಡಿದು ನಗರದ ಪ್ರಮುಖ ರಸ್ತೆಗಳಲ್ಲಿ ಬೈಕ್ ರ್‍ಯಾಲಿ ನಡೆಸಿದರು. ಜೆಎಸ್‌ಎಸ್ ಆಸ್ಪತ್ರೆ ಆವರಣದಿಂದ ಆರಂಭವಾದ ಬೈಕ್ ರ್‍ಯಾಲಿ, ರಾಮಸ್ವಾಮಿ ವೃತ್ತದಿಂದ ಜೆಎಲ್‌ಬಿ ರಸ್ತೆ ಮಾರ್ಗವಾಗಿ ರೈಲ್ವೆ ನಿಲ್ದಾಣ, ಸರ್ಕಾರಿ ಆಯುರ್ವೇದಿಕ್ ವೃತ್ತದಿಂದ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಹೈವೇ ಸರ್ಕಲ್ ಮೂಲಕ ಎಲ್‌ಐಸಿ ಸರ್ಕಲ್ ಮಾರ್ಗವಾಗಿ ಶಿವರಾತ್ರೀಶ್ವರ ನಗರದಲ್ಲಿರುವ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮೈದಾನದಲ್ಲಿ ಮುಕ್ತಾಯಗೊಂಡಿತು.

ಇದಕ್ಕೂ ಮುನ್ನ ಬೈಕ್ ರ್‍ಯಾಲಿಗೆ ಚಾಲನೆ ನೀಡಿದ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ ಸೆಂಟರ್‌ನ ವೈಸ್ ಚಾನ್ಸಲರ್ ಪ್ರೊ.ಹೆಚ್.ಬಸವನಗೌಡಪ್ಪ ಮಾತನಾಡಿ, ಕ್ಯಾನ್ಸರ್ ರೋಗವನ್ನು ಪ್ರಾರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ ಚಿಕಿತ್ಸೆ ನೀಡಿದರೆ, ರೋಗದಿಂದ ಮುಕ್ತವಾಗಿ ಜೀವನ ನಡೆಸಬಹುದಾಗಿದೆ. ಈ ನಿಟ್ಟಿನಲ್ಲಿ ವ್ಯಾಪಕ ಜಾಗೃತಿ ಅತ್ಯಗತ್ಯವಾಗಿದೆ ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಾಗರಾಜ್, ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ.ಮಧು, ಮಕ್ಕಳ ತಜ್ಞೆ ಡಾ.ಬೃಂದಾ ಸುಹಾಸ್, ಸರ್ಜಿಕಲ್ ಆಂಕೊಲಾಜಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ರವಿ ಕೃಷ್ಣಪ್ಪ, ಡಾ.ಪಿ.ಕೆ.ಕಿರಣ್, ಮುಖ್ಯ ಸಂಯೋಜಕ ಡಾ.ಅನಿಲ್ ಎಸ್. ಬಿಳಿಮಲೆ, ಡಾ.ಸುಲೋಚನ ಮತ್ತಿತರರಿದ್ದರು.

ನಾಳೆ ಮೈಸೂರಲ್ಲಿ ಕನ್ನಡಾಂಬೆ ಪ್ರಶಸ್ತಿ ಪ್ರದಾನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆಯ ಕನ್ನಡಾಂಬೆ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ನ.7(ಜಿಎ)–ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ನ.9ರಂದು ಸಂಜೆ 4 ಗಂಟೆಗೆ ಹೂಟಗಳ್ಳಿಯಲ್ಲಿ ಕನ್ನಡಾಂಬೆ ಹಬ್ಬ, ಕನ್ನಡಾಂಬೆ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಶಾರದ ಪೀಠದ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನ ದಕ್ಷಿಣಾಮ್ನಾಯದ ಶ್ರೀ ಬಾಲಮಂಜುನಾಥ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶ್ರೀರಾಮಯೋಗೇಶ್ವರ ಮಠದ ಶ್ರೀ ಶಿವಬಸವ ಸ್ವಾಮೀಜಿ, ಶಂಭುಲಿಂಗ ಕ್ಷೇತ್ರ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕನ್ನಡಾಂಬೆ ವಾರ್ಷಿಕ ಸಂಚಿಕೆಯನ್ನು ಬಿಜೆಪಿ ಯುವ ಮುಖಂಡ ಕವೀಶ್‌ಗೌಡ ಲೋಕಾರ್ಪಣೆಗೊಳಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಜಿ.ಟಿ.ದೇವೇಗೌಡರು ವಹಿಸಲಿದ್ದಾರೆ ಎಂದರು.

ಹೂಟಗಳ್ಳಿಯ ಪ್ರಮುಖ ರಸ್ತೆಗಳಲ್ಲಿ ಕಲಾತಂಡಗಳಿಂದ ಅದ್ದೂರಿ ಮೆರವಣಿಗೆ ಸಾಗಲಿದೆ. ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಮಹಿಳಾ ಜಾದುಗಾರ್ತಿ, ಸುಮರಾಜ್ ಕುಮಾರ್ ಮಾತನಾಡುವ ಗೊಂಬೆಯ ವಿಶೇಷ ಮನೋರಂಜನ ಕಾರ್ಯಕ್ರಮ ನೀಡಲಿದ್ದಾರೆ ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆಯ ಅಧ್ಯಕ್ಷ ಯೋಗೇಶ್(ಕರೀಗೌಡ್ರು), ಕರ್ನಾಟಕ ನ್ಯಾಯಪರ ವೇದಿಕೆ ರಾಜ್ಯಾಧ್ಯಕ್ಷೆ ಡಾ.ಸವಿತಾ, ಶಿರಸ್ತೇದಾರ್ ಕೆ.ಎಸ್.ಕುಬೇರ, ಇಲವಾಲ ಠಾಣೆಯ ಪಿಎಸ್‌ಐ ಪಿ.ಮಹೇಂದ್ರ, ಜಿಲ್ಲಾ ಪಂಚಾಯಿತ್ ಮಾಜಿ ಸದಸ್ಯ ಹೆಚ್.ಎ.ಜಯರಾಮಯ್ಯ ಅವರಿಗೆ ಶ್ರೀ ಅರ್ಜುನ ಅವಧೂತ ಗುರೂಜೀ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ತಿಳಿಸಿದರು.

ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಕಳೆದ ಹಲವಾರು ವರ್ಷಗಳಿಂದ ನಾಡು, ನುಡಿ, ಜಲ,ಭಾಷೆ ಪರವಾಗಿ ಸಾಕಷ್ಟು ಹೋರಾಟವನ್ನು ಮಾಡಿದ್ದು, ಕಳೆದ ಆರು ತಿಂಗಳಿನಿಂದ ಮೈಸೂರಿನ ವಿವಿಧ ಕೈಗಾರಿಕ ಪ್ರದೇಶದಲ್ಲಿ ಕನ್ನಡ ಬಳಸುವಂತೆ ಹಾಗೂ ಕನ್ನಡಿಗರಿಗೆ ಉದ್ಯೋಗ ನೀಡುವಂತೆ ಅಭಿಯಾನ ಮಾಡಲಾಗಿದೆ. ಇದರ ಪರಿಣಾಮ ಬಹುತೇಕ ಕೈಗಾರಿಕೆಗಳಲ್ಲಿ ಬದಲಾವಣೆಯಾಗಿದೆ. ವೇದಿಕೆ ವತಿಯಿಂದ ಅನೇಕ ಸರ್ಕಾರಿ ಶಾಲೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪರೀಕ್ಷೆಗೆ ಸಂಬಂಧಿಸಿದಂತೆ ಪ್ರಕಟಗೊಳ್ಳುವ ಪತ್ರಿಕೆಗಳನ್ನು ಉಚಿತವಾಗಿ ಒದಗಿಸಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಂಜುಂಡ, ಸಂತೋಷ್, ಹೊನ್ನೇಗೌಡ, ಸಿಂಧುವಳ್ಳಿ ಶಿವಕುಮಾರ್, ಮಹದೇವಸ್ವಾಮಿ, ಲೋಕೇಶ್, ಇ.ವಿ.ನಾಗರಾಜ್, ಗೌತಮ್, ಶ್ರೀನಿವಾಸ್, ಅಮರ್ ನಾಥ್, ಕಿಕ್ಕೇರಿ ಕುಮಾರ್, ಕಿರಣ್ ಉಪಸ್ಥಿತರಿದ್ದರು.

ಭಾರತೀಯರಲ್ಲಿ ಐಕ್ಯತಾ ಭಾವ ಮೂಡಿಸಿದ 'ವಂದೇ ಮಾತರಂ'

ಪ್ರಧಾನಿ ಮೋದಿ ಅವರೊಂದಿಗೆ ವರ್ಚುವಲ್ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಭಾಗಿ



ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಬೆಮೆಲ್(ಬಿಇಎಂಎಲ್) ಘಟಕದಲ್ಲಿ 'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ ಹಿನ್ನಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ವರ್ಚುವಲ್ ಕಾರ್ಯಕ್ರಮ ನಡೆಯಿತು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಶಾಸಕ ಜಿ.ಡಿ.ಹರೀಶ್‌ಗೌಡ ಮತ್ತಿತರರಿದ್ದರು.

ಮೈಸೂರು, ನ.7(ಎಂಕೆ)– ಪಂಡಿತ್ ಬಂಕಿಮ ಚಂದ್ರ ಚಟರ್ಜಿ ಅವರು ರಚಿಸಿರುವ 'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ ಶುಭ ಸಂದರ್ಭದಲ್ಲಿ ನಾವೆಲ್ಲರೂ ರಾಷ್ಟ್ರಪ್ರೇಮದ ಬಗ್ಗೆ ರಾಜೀ ಇಲ್ಲದ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕರೆ ನೀಡಿದರು.

'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ ಹಿನ್ನೆಲೆಯಲ್ಲಿ ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಬೆಮೆಲ್ (BEML) ಘಟಕದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಏರ್ಪಡಿಸಲಾಗಿದ್ದ ವರ್ಚುವಲ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಒಂದೂವರೆ ಶತಮಾನದಿಂದ 'ವಂದೇ ಮಾತರಂ' ಗೀತೆಯೂ ಎಲ್ಲಾ ಭಾರತೀಯರ ಹೃನ್ಮನಗಳಲ್ಲಿ ಅಜರಾಮರವಾಗಿದೆ ಎಂದರು.

ಪ್ರಾಂತ್ಯವಾರು ಛಿದ್ರವಾಗಿದ್ದ ಭಾರತವನ್ನು ಒಗ್ಗೂಡಿಸಿದ 'ವಂದೇ ಮಾತರಂ' ಗೀತೆ ಇಂದಿಗೂ ಅಚ್ಚುಮೆಚ್ಚಿನ ಗೀತೆಯಾಗಿದೆ. 'ವಂದೇ ಮಾತರಂ' ಗೀತೆಯನ್ನು ಕೇಳುತ್ತಿದ್ದರೆ ಮೈ ರೋಮಾಂಚನವಾಗುತ್ತದೆ. ಯುವ ಜನರು ಈ ಮಹಾನ್ ಗೀತೆಯಲ್ಲಿರುವ ಆದರ್ಶ ಅಂಶಗಳನ್ನು ಮನನ ಮಾಡಿಕೊಂಡು ರಾಷ್ಟ್ರಪ್ರೇಮ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಇದೇ ವೇಳೆ ಬೆಮೆಲ್ ಆವರಣದಲ್ಲಿ ಗಿಡ ನೆಟ್ಟು ನೀರೆರೆಯಲಾಯಿತು. ಶಾಸಕ ಜಿ.ಡಿ.ಹರೀಶ್‌ಗೌಡ, ಸಂಸ್ಥೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



ದಾಸಶ್ರೇಷ್ಠ ಶ್ರೀ ಭಕ್ತ ಕನಕದಾಸರ 538ನೇ ಜಯಂತಿಯ ಶುಭಾಶಯಗಳು
ದಿ: 08-11-2025 ಶನಿವಾರ
ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಕಲಾಮಂದಿರದವರೆಗೆ
ಕುಲಕೋಟಿ ಬಂಧುಗಳಿಗೆ ಸುಸ್ವಾಗತ
ಪವನ್ ಸಿದ್ದರಾಮ ಸದಸ್ಯರು ಕಾರ್ಯಕ್ರಮ ಮಂಡಲ
ಜಿ.ಮರಿಯಪ್ಪ ಕಾರ್ಯದರ್ಶಿ ಚಕರ್ ಇಂಡಿಯಾ





ನಾಡಿನ ಸಮಸ್ತ ಜನತೆಗೆ
ದಾಸಶ್ರೇಷ್ಠ
ಶ್ರೀ ಭಕ್ತಕನಕದಾಸರ
538ನೇ ಜಯಂತಿಯ ಶುಭಾಶಯಗಳು
ಮೈಸೂರು ಜಿಲ್ಲೆಯ ಜನತೆ ಹೆಚ್ಚಿನ ಸಂಖ್ಯೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ
ದಿನಾಂಕ 08-11-2025 ಬೆಳಿಗ್ಗೆ 9.30ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಕಲಾಮಂದಿರದವರೆಗೆ ಮೆರವಣಿಗೆ
ಬಿ.ಸುಬ್ರಹ್ಮಣ್ಯ (ಸುಬ್ಬಣ್ಣ)
ನಿಕಟಪೂರ್ವ ರಾಜ್ಯಾಧ್ಯಕ್ಷರು, ಕರ್ನಾಟಕ ಪ್ರದೇಶ ಕುರುಬರ ಸಂಘ, ಬೆಂಗಳೂರು
ಶುಭಕೋರುವವರು : ಬಿ.ಕೆ.ರಾಜು, ಶ್ರೀನಿವಾಸ್, ಬಸವೇಗೌಡ ಮತ್ತು ಸ್ನೇಹಿತರು



61 YEARS OF TRUST
ಜೋಸ್ ಆಲುಕ್ಕಾಸ್
A TRADITION OF FINE JEWELLERY
ಮೈಸೂರಿನಲ್ಲಿ ವೈಭವದ 15 ವರ್ಷಗಳು ಕಳೆದಿವೆ
ಸಂಭ್ರಮಾಚರಣೆಗಳು ಇಂದು ಆರಂಭ
ನಿಮ್ಮ ತೋರಿದ ಪ್ರೀತಿ ಮತ್ತು ಅಚಲ ಬೆಂಬಲಕ್ಕೆ ಧನ್ಯವಾದಗಳು.
ನಿಮ್ಮೊಂದಿಗೆ ಇನ್ನೂ ಅನೇಕ ಸುಂದರ ಕ್ಷಣಗಳನ್ನು ಹಂಚಿಕೊಳ್ಳಲು ನಾವು ಎದುರು ನೋಡುತ್ತಿದ್ದೇವೆ.
ಎಲ್ಲರಿಗೂ ಸುಸ್ವಾಗತ
CHIEF GUEST
K. HARISHGOWDA
MLA, MYSURU
TIME
11.00 AM
ವಾರ್ಷಿಕೋತ್ಸವದ ವಿಶೇಷ ಆಫರ್‌ಗಳು
ಚಿನ್ನದ ಆಭರಣಗಳು
ರೂ.1 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು ಖರೀದಿಸಿದಾಗ
ಚಿನ್ನದ ನಾಣ್ಯ ಉಚಿತ
ಆಫರ್ ನವೆಂಬರ್ 8 ರಿಂದ 14 ರವರೆಗೆ ಮಾತ್ರ
ವಜ್ರಗಳು
20%
ರಿಯಾಯಿತಿ ಪಡೆಯಿರಿ ಮತ್ತು ಪ್ರತಿ ಕ್ಯಾರೆಟ್‌ಗೆ 500 ಮಿಲಿಗ್ರಾಂ ಚಿನ್ನದ ನಾಣ್ಯ
ಉಚಿತ
ಪ್ಲಾಟಿನಂ
15%
ರಿಯಾಯಿತಿ ಮೇಕಿಂಗ್ ಚಾರ್ಜಸ್ ಮೇಲೆ
ಚಿನ್ನದ ಎಕ್ಸ್‌ಚೇಂಜ್ ಮೇಲೆ 0% ಕಡಿತ
ನಿಮ್ಮ ಹಳೆಯ 22 ಕ್ಯಾರೆಟ್ ಚಿನ್ನದ ಆಭರಣಗಳನ್ನು ಇತ್ತೀಚಿನ ವಿನ್ಯಾಸಗಳ ಹೊಸ HUID ಚಿನ್ನಾಭರಣಗಳೊಂದಿಗೆ ಎಕ್ಸ್‌ಚೇಂಜ್ ಮಾಡಿಕೊಳ್ಳಿ
ಮದುವೆಯ ಖರೀದಿಗಳಿಗೆ ವಿಶೇಷ ರಿಯಾಯಿತಿ
OPP. WOODLANDS THEATRE, B.N. ROAD, MYSURU. PH: 0821-2441012
JOS ALUKKAS
A TRADITION OF FINE JEWELLERY
josalukkasonline.comನಲ್ಲಿ ಶಾಪಿಂಗ್ ಮಾಡಿ